ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# ದಿವಾನಿ ಹಕ್ಕುಗಳು, ರೆಗ್ಯುಲೇಟಿಂಗ್ ಕಾಯಿದೆ, ವಾರೆನ್ ಹೇಸ್ಟಿಂಗ್ಸ್, ದ್ವಿಮುಖ ಸರ್ಕಾರ, ರಾಬರ್ಟ್ ಕ್ಲೈವ್, ಆಂಗ್ಲೋ – ಫ್ರೆಂಚ್ ಪೈಪೋಟಿ, ವಿಕ್ಟೋರಿಯ ಘೋಷಣೆ 1935ರ ಕಾಯಿದೆ

ಕೋರ್ಸ್ – 3

ಬ್ಲಾಕ್ – 6

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

**Higher Education To Everyone Everywhere**

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ -3

ಬ್ಲಾಕ್

# 6

ಘಟಕ - 90
ಒಕ್ಕೂಟ ಮತ್ತು ಪ್ರಾಂತೀಯ ಸರ್ಕಾರಗಳ ಸಂಬಂಧಗಳು

ಘಟಕ - 91
ರೈಲ್ವೆ, ರಕ್ಷಣೆ, ವಿದೇಶಾಂಗ ವ್ಯವಹಾರ ಮತ್ತು ನಾಗರೀಕ ಆಡಳಿತ ಸೇವೆಗಳು

ಘಟಕ - 92
ನ್ಯಾಯಾಂಗ - ಬ್ರಿಟನ್ನಿನಲ್ಲಿ ಭಾರತ ಸರ್ಕಾರ

ಘಟಕ - 93
ಒಕ್ಕೂಟ ಮತ್ತು ಪ್ರಾಂತೀಯ ಮಟ್ಟದಲ್ಲಿ ಕಾಯಿದೆಯ ಆಚರಣೆ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*

## ಪಠ್ಯಕ್ರಮ ನಿರೂಪಕರು

ಡಾ. ಶ್ರೀ ಶ್ರುತಿ ಎನ್. ಸರಸ್ವತಿ
ಇತಿಹಾಸ ಪ್ರವಾಚಕರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಘಟಕಗಳು 90 ರಿಂದ 93

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ೨೦೧೩

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೯ - 3

## ಬ್ಲಾಕ್ - 6

### ಪೀಠಿಕೆ

ಬ್ಲಾಕ್ 5 ರ ವಿಷಯ ವಸ್ತುವನ್ನು ಪ್ರಸ್ತುತ ಬ್ಲಾಕ್ 6 ರಲ್ಲಿ ಮುಂದುವರೆಸಲಾಗಿದೆ. ಈ ಬ್ಲಾಕಿನಲ್ಲಿ ಒಟ್ಟು ನಾಲ್ಕು ಘಟಕಗಳಿವೆ. ಘಟಕ 90, 1935 ರ ಕಾಯಿದೆ ಅತ್ಯಂತ ಪ್ರಮುಖ ವಿಷಯ ಕೇಂದ್ರ ಮತ್ತು ಪ್ರಾಂತ್ಯಗಳ ಮಧ್ಯದ ಸಂಬಂಧಗಳನ್ನು ಕುರಿತಾದಂತಹ ವಿಚಾರಗಳನ್ನು ನಿಮಗೆ ತಿಳಿಸಿ ಕೊಡುತ್ತದೆ. ಘಟಕ 91 ಕೇಂದ್ರ ಸರ್ಕಾರದ ಅಧೀನದಲ್ಲಿದ್ದ ಪ್ರಮುಖ ವಿಷಯಗಳ ಬಗ್ಗೆ ವಿವರಗಳನ್ನು ನೀಡುತ್ತದೆ. ರೈಲ್ವೆ ನಿರ್ವಹಣೆ, ಹಣಕಾಸುಗಳಿಗೆ ಸಂಬಂಧಿಸಿದಂತೆ ಹಾಗೂ ರಕ್ಷಣೆ ಅಂದರೆ ಸೈನ್ಯದ ಬಗ್ಗೆ, ವಿದೇಶಾಂಗ ನೀತಿಯನ್ನು ರೂಪಿಸಿ ರೂಢಿಸುವ ಬಗ್ಗೆ ಹಾಗೂ ಸೇವಾ ಆಡಳಿತ ವ್ಯವಸ್ಥೆಗಳ ಬಗ್ಗೆ ಈ ಘಟಕ ಅನೇಕ ವಿವರಗಳನ್ನು ನೀಡುತ್ತದೆ. ಘಟಕ 92 ರಲ್ಲಿ ಬ್ರಿಟಿಷ್ ಪ್ರಾಂತ್ಯದಲ್ಲಿ 1935 ರ ನಂತರ ಜಾರಿಗೆ ಬಂದ ನ್ಯಾಯಾಂಗ ಬದಲಾವಣೆಗಳನ್ನು ಮತ್ತು ಅವುಗಳ ಮಹತ್ವವನ್ನು ಕುರಿತಂತೆ ಚರ್ಚೆ ಇದೆ. ಘಟಕ 93 ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಯಾವ ರೀತಿಯಲ್ಲಿ 1935 ರ ಕಾಯಿದೆಯನ್ನು ಜಾರಿಗೆ ತಂದ ನಂತರ ಬದಲಾವಣೆಗೆ ಒಳಪಟ್ಟವು ಮತ್ತು ರಾಜಕೀಯವಾಗಿ ಅದರ ಮಹತ್ವವನ್ನು ವಿಷಯವಸ್ತುವನ್ನಾಗಿ ಹೊಂದಿದೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 90

## ಫೆಡರಲ್ ಮತ್ತು ಪ್ರಾಂತ್ಯಗಳ ಸಂಬಂದಗಳು

90.0 ಪ್ರಸ್ತಾವನೆ

90.1 ಭಾರತೀಯ ಸರ್ಕಾರ ಮತ್ತು ರಾಜ್ಯಗಳ ಆಡಳಿತದ ಸ್ವರೂಪ

90.2 ಫೆಡರಲ್ ಮತ್ತು ಪ್ರಾಂತ್ಯಗಳ ಸಂಬಂಧಗಳು

90.3 ಉಪಸಂಹಾರ

90.4 ಮಾದರಿಯ ಪ್ರಶ್ನೆಗಳು

90.5 ಪರಾಮರ್ಶನ ಕೃತಿಗಳು

## 90.0 ಪ್ರಸ್ತಾವನೆ

1935 ರ ಕಾಯ್ದೆ ಎರಡು ಪ್ರಮುಖ ತತ್ವಗಳನ್ನೊಳಗೊಂಡಿತ್ತು.

a) ಗವರ್ನರುಗಳ ಪ್ರಾಂತಗಳು -ಛೀಫ್ ಕಮೀಷನ್ನರುಗಳ ಪ್ರಾಂತಗಳು ಮತ್ತು ಒಕ್ಕೂಟದ ಭಾರತೀಯ ರಾಜ್ಯಗಳಿಂದ ಕೂಡಿದ ಒಂದು ಅಖಿಲ - ಭಾರತೀಯ ಒಕ್ಕೂಟ.

b) ಪ್ರತಿಯೊಂದು ಗವರ್ನರ್ ಪ್ರಾಂತದಲ್ಲಿಯೂ ಚುನಾಯಿತವಾದ ಶಾಸಕಾಂಗಕ್ಕೆ ಜವಾಬ್ದಾರಿಯಾಗಿರುವ ಸರ್ಕಾರದಿಂದ ಕೂಡಿದ ಪ್ರಾಂತೀಯ ಸ್ವಾಯತ್ತತೆ, ಇಲ್ಲಿಯವರೆಗೆ ಸೆಕ್ರೆಟರಿ ಆಫ್ ಸ್ಟೇಟ್, ಭಾರತ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರ ಗಳಾಗಿದ್ದ ಕರ್ತವ್ಯಗಳನ್ನು ಚಕ್ರವರ್ತಿ ವಹಿಸಿಕೊಂಡು ಇದನ್ನು ಒಂದು ಕಡೆ ಕೇಂದ್ರ ಸರ್ಕಾರಕ್ಕೂ ಮತ್ತೊಂದು ಕಡೆ ಪ್ರಾಂತಗಳಿಗೂ ಪುನರ್ ವಿತರಣೆ ಮಾಡಲಾಯಿತು. ಭಾರತೀಯ ರಾಜ್ಯಗಳಿಗೆ ಸಂಬಂಧಿಸಿದಂತೆ ಸಾರ್ವಭೌಮತೆಯ ಕಾರ್ಯಗಳು ಮತ್ತು ಅಧಿಕಾರಗಳನ್ನು ಇನ್ನು ಮುಂದೆ ಭಾರತ ಸರ್ಕಾರ ನಡೆಸುವಂತಿರಲಿಲ್ಲ; ಆದರೆ "ಚಕ್ರಾಧಿಪತ್ಯದ" ಆ ಕಾರ್ಯಗಳನ್ನು ನಡೆಸಲು ದೊರೆಯ ಪ್ರತಿನಿಧಿ ಅಧಿಕಾರ ಚಲಾಯಿಸಬೇಕಿತ್ತು. ಅಗತ್ಯವಾಗಿಯಲ್ಲದಿದ್ದರೂ ಸಾಮಾನ್ಯವಾಗಿ ಈ ಅಧಿಕಾರವನ್ನು ಗವರ್ನರ್ ಜನರಲ್ ಪಡೆದಿರಬೇಕಿತ್ತು. ಆದರೆ ಅವನು ಈ ಸ್ಥಾನದಲ್ಲಿ ಚಕ್ರವರ್ತಿಯ ಪ್ರತಿನಿಧಿಯಂತಿರಬೇಕಿತ್ತೇ ವಿನಾ ಒಕ್ಕೂಟ ಸರ್ಕಾರದ ಮುಖ್ಯನಾಗರುವಂತಿರಲಿಲ್ಲ. ಮುಂದುವರಿದು, ವಿದೇಶೀ ವ್ಯವಹಾರಗಳ ಖಾತೆ ಧರ್ಮ ವ್ಯವಹಾರಗಳು ಮತ್ತು ರಕ್ಷಣೆ ಮೊದಲಾದ ಇಲಾಖೆಗಳನ್ನು ಭಾರತೀಯ ಶಾಸಕಾಂಗದ ನಿಯಂತ್ರಣದಿಂದ ಕೈಬಿಟ್ಟಿದ್ದುದರಿಂದ ಇವುಗಳ ಬಗ್ಗೆ ವೈಟ್‌ಹಾಲಿನ ಮೇಲ್ವಿಚಾರಣೆ ಮತ್ತು ನಿರ್ದೇಶನದಿಂದ ಮಾತ್ರವೇ ಗವರ್ನರ್ ಜನರಲ್ ವ್ಯವಹಾರಗಳನ್ನು ನೋಡಿಕೊಳ್ಳಬೇಕಿತ್ತು ; ಬ್ರಿಟಿಷ್ ಪಾರ್ಲಿಮೆಂಟಿಗೆ ಹೊಣೆಯಾಗಿರುವ ಮಂತ್ರಿಗಳ ನಿಯಂತ್ರಣಕ್ಕೆ ವರ್ಗಾಹಿಸಲಾಗಿದ್ದ ಕಾರ್ಯಗಳಿಗೆ ಸಂಬಂಧಿಸಿದಂತೆ ಗವರ್ನರ್ ಜನರಲ್ ಮತ್ತು ಪ್ರಾಂತೀಯ ಗವರ್ನರುಗಳಿಗೆ ವಿಶೇಷ ಅಧಿಕಾರಗಳನ್ನು ನೀಡಲಾಗಿತ್ತು. ಹಾಗಾಗಿ ಭಾರತದ ಸಂವಿಧಾನಾತ್ಮಕ ಮಟ್ಟ "ಕ್ರಮೇಣ ಪ್ರಭುತ್ವದತ್ತ ವಾಲುತ್ತಿದ್ದರೂ" ಹೊಸ ಕಾಯ್ದೆ ಜಾರಿಗೆ ಬಂದರೂ ಅದು ಅಧೀನ ಮಟ್ಟದ್ದಾಗಿಯೇ ಇತ್ತು.

ರಾಜ್ಯಗಳು ಸ್ವತಂತ್ರವಾದ "ಅಸ್ತಿತ್ವ" ಪಡೆದಿದ್ದುದರಿಂದ ಅವನ್ನು ಒಕ್ಕೂಟಕ್ಕೆ ಸೇರುವಂತೆ ಒತ್ತಾಯ ಪಡಿಸುವಂತಿರಲಿಲ್ಲ. ಒಕ್ಕೂಟವನ್ನು ಸೇರಬಯಸುವ ಪ್ರತಿಯೊಂದು ರಾಜ್ಯವೂ ತನ್ನ ರಾಜನ ಮೂಲಕ ಅಂಘೀಕಾರ ಪತ್ರ ಬರೆದುಕೊಡಬೇಕಿತ್ತು. ಅದು ಒಕ್ಕೂಟದ ಸದಸ್ಯ ರಾಜ್ಯವಾಗಿರುವ ಮೊದಲು ಚಕ್ರವರ್ತಿ ಈ ಅಂಗೀಕಾರ ಪತ್ರ ಅಂಗೀಕರಿಸಬೇಕಿತ್ತು. ಎರಡು ಷರತ್ತುಗಳು ಪೂರೈಕೆಯಾದಾಗ ಚಕ್ರವರ್ತಿ ಒಕ್ಕೂಟವನ್ನು ಘೋಷಿಸಬೇಕಿತ್ತು.

(1) ಈ ವಿಷಯದ ಪರವಾಗಿ ಪಾರ್ಲಿಮೆಂಟಿನ ಪ್ರತಿಯೊಂದು ಸದನವೂ ರಾಜನಿಗೆ ಒಂದು ವಿನಂತಿಯನ್ನು ನೀಡಬೇಕಿತ್ತು.

(2) ಒಕ್ಕೂಟದ ಶಾಸಕಾಂಗದ ಮೇಲ್ಮನೆಗೆ ಐವತ್ತೆರಡು ಸದಸ್ಯರಿಗಿಂತ ಕಡಿಮೆಯಿಲ್ಲದೆ ಸದಸ್ಯರನ್ನು ಆಯ್ಕೆ ಮಾಡುವ ಮತ್ತು ಯಾವ ರಾಜ್ಯದ ಜನಸಂಖ್ಯೆ ರಾಜ್ಯಗಳ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತ ಕಡಿಮೆಯಿಲ್ಲವೋ ಅವೂ ಇದಕ್ಕೆ ಸಮ್ಮತಿಸಬೇಕಿತ್ತು.

## 90.1 ಭಾರತೀಯ ಸರ್ಕಾರ ಮತ್ತು ರಾಜ್ಯಗಳ ಆಡಳಿತದ ಸ್ವರೂಪ

ಒಕ್ಕೂಟಕ್ಕೆ ಸಂಬಂಧಿಸಿದ ಕಾಯ್ದೆಯ ಈ ಭಾಗವನ್ನು ಎಂದೂ ಕಾರ್ಯಾಚರಣೆಗೆ ತರದಿದ್ದುದರಿಂದ ಅದರ ಬಗ್ಗೆ ವಿವರವಾಗಿ ಪರಿಶೀಲಿಸುವ ಅಗತ್ಯವಿಲ್ಲ ಮತ್ತು ಅದರ ಷರತ್ತುಗಳನ್ನು ಮಾತ್ರ ಸಂಕ್ಷಿಪ್ತವಾಗಿ ಗಮನಿಸಿದರೆ ಸಾಕು. ಈ ಕಾಯ್ದೆಯಿಂದ ಎರಡು ಭಾಗಗಳಿಂದ ಕೂಡಿದ ದ್ವಿಸಭಾ ಸ್ವರೂಪದ "ಫೆಡರಲ್ ಎಕ್ಸಿಕ್ಯೂಟಿವ್" ಒಂದಕ್ಕೆ ಅವಕಾಶವಿತ್ತು. ಇವುಗಳ ಪೈಕಿ ಒಂದು "ವರ್ಗಾಯಿತ ವಿಭಾಗಗಳ" ಮೇಲ್ವಿಚಾರಣೆಯಲ್ಲಿದ್ದುದು ಶಾಸಕಾಂಗಕ್ಕೆ ಅಧೀನವಾಗಿದ್ದಿತು. ವಿದೇಶಿ ವ್ಯವಹಾರಗಳು, ರಕ್ಷಣೆ ಇತ್ಯಾದಿ ಮೀಸಲು ಇಲಾಖೆಗಳೊಡನೆ ವ್ಯವಹರಿಸುವ ಎರಡನೆ ಭಾಗ ಗವರ್ನರ್ ಜನರಲ್ಲನ ಸಂಪೂರ್ಣ ಅಧಿಕಾರದಲ್ಲಿರಬೇಕಿತ್ತು. ಈ ವಿಷಯಗಳಲ್ಲಿ ಗವರ್ನರ್ ಜನರಲ್ ಬ್ರಿಟಿಷ್ ಪಾರ್ಲಿಮೆಂಟಿಗೆ ಮಾತ್ರ ಹೊಣೆಯಾಗಿದ್ದ. ಮಂತ್ರಿಗಳಿಗೆ ವಹಿಸಿಕೊಡಬೇಕಾಗಿದ್ದ ವಿಷಯಗಳಲ್ಲಿಯೂ ಗವರ್ನರ್ ಜನರಲ್ಲನಿಗೆ ವಿಶೇಷ ಅಧಿಕಾರ ಹಾಗೂ ಹೊಣೆಗಳನ್ನು ವಹಿಸಲಾಗಿದ್ದು ತನ್ನ ಅಧಿಕಾರ ಸ್ಥಾನದಿಂದ ತನಗೆ ಉಚಿತವೆಂದು ಕಂಡುಬಂದಂತೆ ನಡೆದುಕೊಳ್ಳಬಹುದಿತ್ತು.

ಒಕ್ಕೂಟದ ಶಾಸಕಾಂಗ (ಫೆಡರಲ್ ಲೆಜಿಸ್ಲೇಚರ್) ಎರಡು ಶಾಸನ ಸಭೆಗಳುಳ್ಳ (ದ್ವಿಸಭಾ) ಅಂಗವಾಗಿತ್ತು. ಸಭಾ ಸದನ ಅಥವಾ ಫೆಡರಲ್ ಅಸೆಂಬ್ಲಿ ಎಂದು ಪರಿಚಿತವಾಗಿರುವ ಕೆಳಸದನ ಮತ್ತು ಕೌನ್ಸಿಲ್ ಆಫ್ ಸ್ಟೇಟ್ (ರಾಜ್ಯಸಭೆ) ಎಂದು ಪರಿಚಿತವಾಗಿರುವ ಮೇಲ್ಸದನ ಇವೇ ಆ ಎರಡು ಸಭೆಗಳಾಗಿದ್ದವು. ಸಭಾಸದನದಲ್ಲಿ ಬ್ರಿಟಿಷ್ ಇಂಡಿಯಾದ 250 ಸದಸ್ಯರು ಮತ್ತು ಭಾರತದ ರಾಜ್ಯಗಳಿಂದ 125 ಕ್ಕೆ ಮೀರದಂತೆ ಪ್ರತಿನಿಧಿಗಳಿರಬೇಕಿತ್ತು. ಫೆಡರಲ್ ಅಸೆಂಬ್ಲಿಯ ಸದಸ್ಯರನ್ನು ಜನಮತ ಕ್ಷೇತ್ರಗಳಿಂದ ಚುನಾಯಿಸುತ್ತಿರಲಿಲ್ಲ. ಆದರೆ ಪ್ರಾಂತಗಳ ವಿಧಾನ ಸಭೆಗಳಿಂದ (ಲೆಜಿಸ್ಲೇಟಿವ್ ಅಸೆಂಬ್ಲಿ) ಚುನಾಯಿಸಲಾಗುತ್ತಿತ್ತು. ಆಯ್ಕೆಯ ಈ ಪರೋಕ್ಷವಿಧಾನದಲ್ಲಿಯೂ ಸಾರ್ವತ್ರಿಕ (ಹಿಂದೂ) ಮುಸ್ಲಿಂ ಮತ್ತು ಸ್ಥಾನಗಳನ್ನು ಪ್ರಾಂತೀಯ ಸಭೆಗಳಲ್ಲಿ ಈ ಜನಾಂಗದ ಪ್ರತಿನಿಧಿಗಳಿಂದ ಭರ್ತಿಮಾಡಬೇಕಿದ್ದು ಪ್ರತಿಯೊಂದು ಜನಾಂಗಕ್ಕೂ ನಿರ್ದಿಷ್ಟ ಸಂಖ್ಯೆಯ ಸ್ಥಾನಗಳಿಗೆ ಪ್ರತ್ಯೇಕವಾಗಿ ಮತ ಹಾಕಬೇಕಿತ್ತು. ಕೌನ್ಸಿಲ್ ಆಫ್ ಸ್ಟೇಟ್ ಅಥವಾ ಮೇಲಣ ಛೇಂಬರ್‌ನಲ್ಲಿ ಬ್ರಿಟಿಷ್ ಇಂಡಿಯಾಕ್ಕೆ 156 ಜನ ಸದಸ್ಯರು ಮತ್ತು ಒಕ್ಕೂಟದ ರಾಜ್ಯಗಳಿಗೆ 104 ಕ್ಕಿಂತ ಹೆಚ್ಚಿಲ್ಲದಂತೆ ಸದಸ್ಯರಿರಬೇಕಿತ್ತು. ರಾಜ್ಯದ ಸದಸ್ಯರನ್ನು ಕ್ರಮವಾಗಿ ಅವರವರ ರಾಜ್ಯಗಳ ರಾಜರು ನೇಮಕ ಮಾಡಬೇಕಿತ್ತು. ಬ್ರಿಟಿಷ್ ಇಂಡಿಯಾದ ಸದಸ್ಯರಲ್ಲಿ ಅಲ್ಪ ಸಂಖ್ಯಾತ ಜನಾಂಗಗಳು, ನಿಮ್ನ ವರ್ಗಗಳು ಮತ್ತು ಸ್ತ್ರೀಯರಿಗೆ ಸೂಕ್ತ ಪ್ರಾತಿನಿಧ್ಯ ದೊರಕಿಸಲು ಆರು ಸ್ಥಾನಗಳಿಗೆ ಗವರ್ನರ್ ಜನರಲ್ ನಾಮಕರಣ ಮಾಡಬೇಕಿತ್ತು. ಉಳಿದವರನ್ನು ಪ್ರತ್ಯಕ್ಷವಾಗಿ - ಕೆಲವೊಮ್ಮೆ ಪರೋಕ್ಷವಾಗಿ - ಜನಾಂಗ ಚುನಾಯಿಕ ಸಮುದಾಯಗಳು ಮತದಾನದ ಮೂಲಕ ಆಯ್ಕೆ ಮಾಡುತ್ತಿದ್ದವು. ಫೆಡರಲ್ ಅಸೆಂಬ್ಲಿಯ ಅಧಿಕಾರದ ಅವಧಿ ಐದು ವರ್ಷಗಳಾಗಿದ್ದು ಗವರ್ನರ್ ಜನರಲ್ ತನ್ನ ವಿವೇಚನೆಯಿಂದ ಅವಧಿಗೆ ಮೊದಲೇ ಅದನ್ನು ವಿಸರ್ಜಿಸಬಹುದಿತ್ತು. ಕೌನ್ಸಿಲ್ ಆಫ್ ಸ್ಟೇಟ್ ವಿಸರ್ಜನೆಗೆ ಒಳಗಾಗದ ಒಂದು ಖಾಯಂ ಅಂಗವಾಗಿತ್ತು. ಪ್ರತಿಯೊಬ್ಬ ಸದಸ್ಯನ ಅಧಿಕಾರಾವಧಿ ಒಂಬತ್ತು ವರ್ಷಗಳಿಗೆ ಮೀರುವಂತಿರಲಿಲ್ಲ ಮತ್ತು ಒಟ್ಟು ಸದಸ್ಯರಲ್ಲಿ ಮೂರನೆ ಒಂದು ಭಾಗ ಸದಸ್ಯರು ಪ್ರತಿ ಮೂರು ವರ್ಷಗಳಿಗೊಮ್ಮೆ ನಿವೃತ್ತರಾಗಬೇಕಿತ್ತು. ಕೆಲವು ಸಣ್ಣ ಪುಟ್ಟ ವಿವರಗಳನ್ನುಳಿದು ಎರಡೂ ಸಭೆಗಳಿಗೆ ಆರ್ಥಿಕ ವಿಷಯಗಳೂ ಸೇರಿದಂತೆ ಈ ಎಲ್ಲ ವಿಷಯಗಳಲ್ಲಿಯೂ ಸಮಾನ ಅಧಿಕಾರಗಳಿರಬೇಕಿತ್ತು.

ಪ್ರಾಂತೀಯ ಸರ್ಕಾರದ ಗುಣಲಕ್ಷಣ ಮತ್ತು ಸ್ವರೂಪಗಳು 1935 ರ ಕಾಯ್ದೆಯಿಂದ ಸಾಕಷ್ಟು ಬದಲಾವಣೆಗೊಂಡವು. ಪ್ರಾಂತಗಳ ಪುನರ್ ವಿತರಣೆಗೆ ಅದು ಅವಕಾಶ ಕಲ್ಪಿಸಿತು. ಬೊಂಬಾಯಿ ಪ್ರಾಂತದಿಂದ ಪ್ರತ್ಯೇಕಿಸಲಾದ ಸಿಂಧ್ ಮತ್ತು ಒರಿಸ್ಸಾ ಎಂಬ ಎರಡು ಹೊಸ ಪ್ರಾಂತಗಳನ್ನು ರಚಿಸಲಾಯಿತು. ಒರಿಸ್ಸಾದಲ್ಲಿ ಹಳೆಯ ಬಿಹಾರ್ ಮತ್ತು ಒರಿಸ್ಸಾ ಪ್ರಾಂತಗಳ ಪ್ರದೇಶದ ಒಂದು ಭಾಗ, ಮಧ್ಯ ಪ್ರಾಂತ್ಯಗಳ ಭಾಗ ಮತ್ತು ಒರಿಯಾ ಜನರು ವಾಸಿಸುತ್ತಿದ್ದ ಮದ್ರಾಸ್ ಪ್ರಾಂತದ ಕೆಲವು ಪ್ರದೇಶಗಳು ಸೇರಿದ್ದವು. ಬರ್ಮಾವನ್ನು ಬ್ರಿಟಿಷ್ ಇಂಡಿಯಾದಿಂದ ಪ್ರತ್ಯೇಕಿಸಲಾಯಿತು. ಏಡನ್ ಪ್ರಾಂತದ ಭಾಗವಾಗಿದ್ದುದು ರದ್ದಾಯಿತು. ಈಗ ಒಟ್ಟಿನಲ್ಲಿ ಹನ್ನೊಂದು ಗವರ್ನರುಗಳ ಪ್ರಾಂತಗಳೂ, ಆರು ಛೀಫ್ ಕಮೀಷನ್ನರುಗಳ ಪ್ರಾಂತಗಳೂ ಇದ್ದವು. ಛೀಫ್ ಕಮೀಷನ್ನರುಗಳ ಪ್ರಾಂತವನ್ನು ಗವರ್ನರ್ ಜನರಲ್ ತನ್ನ ವಿವೇಚನೆಗನುಗುಣವಾಗಿ ಛೀಫ್ ಕಮೀಷನ್ನರಿನ ಮೂಲಕ ಆಡಳಿತಕ್ಕೆ ಒಳಪಡಿಸುತ್ತಿದ್ದ.

ಗವರ್ನರುಗಳ ಪ್ರಾಂತಗಳಲ್ಲಿ ದ್ವಿಸಭಾ ಪದ್ಧತಿಯನ್ನು ರದ್ದುಗೊಳಿಸಿ ಪ್ರಾಂತೀಯ ಸ್ವಾಯತ್ತತೆಯನ್ನು ಜಾರಿಗೆ ತರಲಾಯಿತು. ಈ ಕಾಯ್ದೆ ಒಂದು ಪ್ರಾಂತದ ಕಾರ್ಯಕಾರಿ ಅಧಿಕಾರವನ್ನು ಚಕ್ರವರ್ತಿಯ ಪ್ರತಿನಿಧಿಯಾಗಿ ಗವರ್ನರನಿಗೇ ದತ್ತವಾಗಿ ನೀಡಿತ್ತು. ಗವರ್ನರನಿಗೆ ವಿಶೇಷ ಅಧಿಕಾರಗಳನ್ನು ವಹಿಸಿದ್ದು ಶಾಂತಿ, ಶಿಸ್ತುಪಾಲನೆ, ಇತ್ಯಾದಿ ಕೆಲವು ವಿಷಯಗಳನ್ನು ಬಿಟ್ಟರೆ ಪ್ರಾಂತೀಯ ಸರ್ಕಾರದ ಎಲ್ಲ ಕ್ಷೇತ್ರಗಳಲ್ಲೂ ಕರ್ತವ್ಯ ನಿರ್ವಹಣೆಯಲ್ಲಿ ನೆರವು ನೀಡಿ ಸಲಹೆ ನೀಡಲು ಮಂತ್ರಿ ಮಂಡಲವೊಂದನ್ನು ಕಾಯ್ದೆ ನೀಡಿತ್ತು. ಶಾಂತಿ ಮತ್ತು ಶಿಸ್ತುಪಾಲನೆ ಇತ್ಯಾದಿ ಕೆಲವು ಕ್ಷೇತ್ರಗಳಲ್ಲಿ ಗವರ್ನರ್ ತನ್ನ ಸಂಪೂರ್ಣ ತೀರ್ಮಾನವನ್ನು ಉಪಯೋಗಿಸುತ್ತಿದ್ದ. ಸಾಮಾನ್ಯವಾಗಿ ಸ್ಥಳೀಯ ಶಾಸನ ಸಭೆಯ ಸದಸ್ಯರಿಂದಲೇ ಮಂತ್ರಿಗಳನ್ನು ಗವರ್ನರ್ ನೇಮಿಸುತ್ತಿದ್ದ ಮತ್ತು ಇವರು ಶಾಸಕಾಂಗಕ್ಕೆ ಜವಾಬ್ದಾರರಾಗಿರಬೇಕಿತ್ತು. ಮಂತ್ರಿ ಮಂಡಲವನ್ನು ರಚಿಸುವಾಗ ಗವರ್ನರ್ ಅಲ್ಪಮತೀಯರ, ಹಿತಾಸಕ್ತಿಗಳಿಗೂ ಸೂಕ್ತ ಗಮನ ಕೊಡಬೇಕಿತ್ತು. ಮಂತ್ರಿಗಳ ಸಂಬಳ ಅವರ ಅಧಿಕಾರಾವಧಿಯಲ್ಲಿ ಬದಲಾಗುತ್ತಿರಲಿಲ್ಲ.

ಪ್ರಾಂತೀಯ ಶಾಸನ ಸಭೆಯು ಚಕ್ರವರ್ತಿಯ ಪ್ರತಿನಿಧಿಯಾಗಿ ಗವರ್ನರ್ ಮತ್ತು ಒಂದು ಅಥವಾ ಎರಡು ಸಭೆಗಳಿಂದ ಕೂಡಿರುತ್ತಿತ್ತು. ಮದ್ರಾಸು, ಬೊಂಬಾಯಿ, ಬಂಗಾಳ, ಸಂಯುಕ್ತ ಪ್ರಾಂತಗಳು, ಬಿಹಾರ ಮತ್ತು ಅಸ್ಸಾಂಗಳಲ್ಲಿ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಎಂಬ ಎರಡು ಸಭೆಗಳಿದ್ದವು. ಉಳಿದ ಪ್ರಾಂತಗಳು, ಪಂಜಾಬ್, ಮಧ್ಯ ಪ್ರಾಂತಗಳು ಹಾಗೂ ಬೀರಾರ್. ವಾಯುವ್ಯ

ಗಡಿ ಪ್ರಾಂತ, ಒರಿಸ್ಸಾ ಮತ್ತು ಸಿಂಧ್‌ಗಳಲ್ಲಿ ವಿಧಾನಸಭೆ ಎಂಬ ಒಂದೇ ಸಭೆ ಇದ್ದಿತು. ವಿಧಾನಸಭೆಯ ಅಥವಾ ಕೆಳಸದನದ ಬಲ ಚುನಾಯಿತರಾದ 50 ರಿಂದ 250 ಸದಸ್ಯರವರೆಗೆ ಬದಲಾಗುತ್ತಿತ್ತು. ಇವರೆಲ್ಲರೂ ಆಯ್ಕೆಯಾದ ಸದಸ್ಯರು. ಇವರ ಅಧಿಕಾರದ ಅವಧಿ ಐದು ವರ್ಷಗಳಾಗಿರುತ್ತಿತ್ತು. ಆದರೆ ಗವರ್ನರ್ ಇದಕ್ಕೆ ಮುಂಚೆಯೇ ವಿಸರ್ಜಿಸಬಹುದಾಗಿತ್ತು. ಶಾಸಕಾಂಗಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಪ್ರತಿಯೊಂದು ಪ್ರಾಂತದಲ್ಲಿನ ಚುನಾಯಕ ಸಮುದಾಯ ಜನಾಂಗಗಳು ಮತ್ತು ಹಿತಾಸಕ್ತಿಗಳ ಮೇಲೆ ಆಧಾರಿತಗೊಂಡಿತ್ತು. ಇದು 1932 ರ ಸೆಪ್ಟೆಂಬರ್ 25 ರ ಪೂನಾ ಒಪ್ಪಂದದಿಂದ ಮಾರ್ಪಾಟುಗೊಂಡ 1932 ರ ಆಗಸ್ಟ್ 4 ರ ಜನಾಂಗ ನಿರ್ಣಯಕ್ಕೆ ಅನುಗುಣವಾಗಿತ್ತು. ವಿಶೇಷ ಚುನಾಯಿಕ ಸಮುದಾಯಗಳ ಪ್ರತಿನಿಧಿಗಳ ಜೊತೆಗೆ ಸಾಮಾನ್ಯ ಸ್ಥಾನಗಳಲ್ಲಿ ಕೆಲವನ್ನು ನಿಮ್ನ ವರ್ಗವೆಂದು ಕರೆಯಲಾಗುವ "ಅನುಸೂಚಿತ ಜಾತಿ" ಯವರಿಗೆ ಮೀಸಲಾಗಿಡಲಾಗಿತ್ತು. ಈ ಕಾಯ್ದೆಯಿಂದ ಭಾರತದ ಜನಕೋಟಿಯ ಶೇಕಡ ಹತ್ತು ಭಾಗಕ್ಕೆ ಚುನಾವಣೆಯ ಹಕ್ಕುಗಳು ದೊರೆತವು ಮತ್ತು ಸ್ತ್ರೀಯರಿಗೆ 1919 ರ ಕಾಯ್ದೆ ನೀಡಿದ್ದಕ್ಕಿಂತ ಹೆಚ್ಚಿನ ಮತ ಚಲಾವಣೆಯ ಹಕ್ಕು ದೊರೆಯಿತು. ವಿಧಾನ ಪರಿಷತ್ತು ಅಥವಾ ಮೇಲ್ಮನೆ ವಿಸರ್ಜನೆಗೊಳಗಾದ ಒಂದು ಖಾಯಂ ಸಭೆಯಾಗಿತ್ತು. ಆದರೆ ಅದರ ಸದಸ್ಯರ ಪೈಕಿ ಸುಮಾರು ಮೂರನೆ ಒಂದು ಭಾಗ ಸದಸ್ಯರು ಪ್ರತಿ ಮೂರು ವರ್ಷಗಳಿಗೊಮ್ಮೆ ನಿವೃತ್ತರಾಗುತ್ತಿದ್ದರು. ಇದೂ ವಿಧಾನ ಸಭೆಯಂತೆಯೇ ಜನಾಂಗೀಯ ಆಧಾರದ ಮೇಲೆ ರೂಪಿತಗೊಂಡಿತ್ತು. ಸರ್ಕಾರಕ್ಕೆ ಕೆಲವು ಅನುದಾನಗಳ ನೀಡಿಕೆಯ ಬಗ್ಗೆ ಮತ ನೀಡುವುದು ಹಾಗೂ ಆರ್ಥಿಕ ಮಸೂದೆಗಳನ್ನು ಮಂಡಿಸುವುದು ವಿಧಾನ ಪರಿಷತ್ತಿನ ಕ್ಷೇತ್ರಕ್ಕೊಳಪಟ್ಟಿದ್ದುದನ್ನು ಬಿಟ್ಟರೆ ಎರಡೂ ಸಭೆಗಳಅಧಿಕಾರ ಒಂದೇ ಸಮನಾಗಿತ್ತು. ಒಂದು ಮಸೂದೆಗೆ ಸಂಬಂಧಿಸಿದಂತೆ ಎರಡೂ ಸದನಗಳ ನಡುವೆ ಭಿನ್ನಾಭಿಪ್ರಾಯವಿದ್ದರೆ ಎರಡೂ ಸದನಗಳ ಭಾರಿ ಅಧಿವೇಶನ ಕಡಿದು ಜಂಟಿ ಅಧಿವೇಶನದಲ್ಲಿ ಬಹುಮತದ ಸದಸ್ಯರ ಅಭಿಪ್ರಾಯಕ್ಕನುಗುಣವಾಗಿ ನಿರ್ಣಯ ಕೈಗೊಳ್ಳುವ ಅಧಿಕಾರ ಗವರ್ನರನಿಗೆ ಇದ್ದಿತು.

ಗವರ್ನರನಿಗೆ ಕೆಲವು ವಿಶೇಷ ಅಧಿಕಾರಗಳನ್ನು ನೀಡಲಾಗಿತ್ತು. ಕೆಲವು ಪರಿಸ್ಥಿತಿಗಳಲ್ಲಿ ಶಾಸಕಾಂಗ ಅಂಗೀಕರಿಸಿದ ಮಸೂದೆಗಳಿಗೆ ತನ್ನ ಸಮ್ಮತಿಯನ್ನು ನಿರಾಕರಿಸಬಹುದಿತ್ತು. ಶಾಸಕಾಂಗ ಅಧಿವೇಶನ ಸೇರದಿದ್ದಾಗ, ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯವೆಂದು ಕಂಡುಬಂದಲ್ಲಿ ಸುಗ್ರೀವಾಜ್ಞೆಗಳನ್ನು ಹೊರಡಿಸಲು ಮಾತ್ರಾ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಯಾವ ಸಮಯದಲ್ಲಾದರೂ ಸುಗ್ರೀವಾಜ್ಞೆಗಳನ್ನು ಹೊರಡಿಸಲು ಅವನಿಗೆ ಅಧಿಕಾರವಿತ್ತು. ನಿಗದಿಗೊಳಿಸಿದ ಅವಧಿಯಲ್ಲಿ ಪ್ರಾಂತೀಯ ಶಾಸಕಾಂಗದ ಕಾಯ್ದೆಗೆ ಇರುವಷ್ಟೇ ಬಲ ಮತ್ತು ಅಧಿಕಾರ ಈ ಸುಗ್ರೀವಾಜ್ಞೆಗಳಿಗೆ ಇರುತ್ತಿತ್ತು. ಅಲ್ಲದೆ ಕೆಲವು ಪರಿಸ್ಥಿತಿಗಳಲ್ಲಿ ಗವರ್ನರ್ ಕೆಲವು ಖಾಯಂ ಕಾಯ್ದೆಗಳನ್ನು ಹೊರಡಿಸಬಹುದಿತ್ತು. ಇವನ್ನು "ಗವರ್ನರ್ ಕಾಯ್ದೆಗಳು" ಎಂದು ಕರೆಯಲಾಗುತ್ತಿತ್ತು. ಹೀಗೆ ಶಾಸನಗಳನ್ನು ರೂಪಿಸುವಲ್ಲಿ ಅದನ್ನು ತಕ್ಷಣವೇ ಹೊರಡಿಸಬಹುದಿತ್ತು ಅಥವಾ ಅಗತ್ಯವೆನಿಸಿದಲ್ಲಿ ಶಾಸಕಾಂಗದ ಸಲಹೆ ಪಡೆದು ಹೊರಡಿಸಬಹುದಿತ್ತು. ಸಂವಿಧಾನಾತ್ಮಕ ವ್ಯವಸ್ಥೆ ವಿಫಲಗೊಂಡಾಗ ಗವರ್ನರ್ ಪ್ರಕಟಣೆಯ ಮೂಲಕ "ತನ್ನ ಕಾರ್ಯಗಳನ್ನು ಪ್ರಕಟಣೆಯಲ್ಲಿ ನಿರ್ದಿಷ್ಟ ಪಡಿಸಿರುವ ತನ್ನ ನಿರ್ಧಾರಕ್ಕನುಗುಣವಾಗಿ ನಡೆಸುವೆನೆಂದು" ಪ್ರಕಟಪಡಿಸಬಹುದಿತ್ತು. ಗವರ್ನರ್ ಆ ಅಧಿಕಾರಗಳನ್ನು ಗವರ್ನರ್ ಜನರಲ್ ಮತ್ತು ಬ್ರಿಟಿಷ್ ಪಾರ್ಲಿಮೆಂಟಿನ ನಿರ್ದೇಶನ ಮತ್ತು ನಿಯಂತ್ರಣದಲ್ಲಿ ಚಲಾಯಿಬೇಕಾಗಿದ್ದಿತು. ಹಾಗಾಗಿ 1935 ರ ಕಾಯ್ದೆ ಪ್ರಾಂತೀಯ ಸರ್ಕಾರಗಳಿಗೆ ಸಾರ್ವಜನಿಕ ಆಡಳಿತದ ವಿಶಾಲ ಕ್ಷೇತ್ರಗಳಲ್ಲಿ ಸ್ವಾಯತ್ತತೆಯನ್ನು ನೀಡಿದ್ದರೂ ಗವರ್ನರ್‌ನ ವಿಶೇಷ ಅಧಿಕಾರಗಳನ್ನು ವಾಸ್ತವ ಜವಾಬ್ದಾರಿ ಸರ್ಕಾರದ ಮೇಲಣ ನಿಯಂತ್ರಣವೆಂದು ಭಾವಿಸಲಾಗಿತ್ತು. ಪ್ರಾಂತೀಯ ಸರ್ಕಾರಗಳಿಗೆ ಸಂಬಂಧಿಸಿದ ಸಂವಿಧಾನಾತ್ಮಕ ಷರತ್ತುಗಳು 1937 ರ ಏಪ್ರಿಲ್ 1 ರಿಂದ ಜಾರಿಗೆ ಬಂದವು. 1937 ರ ಜುಲೈನಲ್ಲಿ ಗವರ್ನರ್ ಪ್ರಾಂತಗಳ ಪೈಕಿ ಹೆಚ್ಚಿನದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲು ರಚಿಸಿತು ಮತ್ತು 1939 ರ ಕೊನೆಯ ತಿಂಗಳುಗಳವರೆಗೆ ಅವು ಅಧಿಕಾರದಲ್ಲಿದ್ದವು.

## 90.2 ಫೆಡರಲ್ ಮತ್ತು ಪ್ರಾಂತ್ಯಗಳ ಸಂಬಂಧಗಳು

ಭಾರತದ ರಾಜಕೀಯ ಜೀವನದಲ್ಲಿನ ಪ್ರಮುಖ ಅಂಶವಾಗಿ ಪ್ರಾಂತ್ಯಗಳ ಅಸ್ತಿತ್ವದಲ್ಲಿದ್ದ ಭಾರತದ ಸಂವಿಧಾನದ ಸಮಸ್ಯೆ ತುಂಬ ಜಟಿಲವಾಗಿಯೇ ಮುಂದುವರಿಯಿತು. ಭಾರತದಲ್ಲಿ ಪ್ರಕ್ಷುಬ್ಧವಾಗಿದ್ದ ರಾಜಕೀಯ ಪರಿಸ್ಥಿತಿಗಳ ದೃಷ್ಟಿಯಿಂದ ಬಂಗಾಳ ವಿಭಜನೆ ಚಳುವಳಿ ಮತ್ತು 1914-18 ರ ಯುದ್ಧದ ಸಂಕಷ್ಟಗಳ ತರುವಾಯ ಕ್ರಮವಾಗಿ ಲಾರ್ಡ್ ಮಿಂಟೋ (II) ಮತ್ತು ಲಾರ್ಡ್ ಹಾರ್ಡಿಂಜ್ (II) ರಾಜ್ಯಗಳ ಬಗ್ಗೆ ಹೆಚ್ಚು ಸಮಾಧಾನದ ಪ್ರವೃತ್ತಿಯನ್ನು ತಳೆದಿದ್ದು, ಅವುಗಳಿಂದ ಹೆಚ್ಚಿನ ಸಹಕಾರ ಪಡೆಯಬಯಸಿದರೂ

ಲಾರ್ಡ್ ಕರ್ಜನ್, ಲಾರ್ಡ್ ಮಿಂಟೋ (II) ಮತ್ತು ಲಾರ್ಡ್ ಹಾರ್ಡಿಂಜ್ (II) ಇವರು ರಾಜ್ಯಗಳ ಮೇಲೆ ಬ್ರಿಟಿಷ್ ಸಾರ್ವಭೌಮತ್ವವನ್ನು ಪ್ರತಿಪಾದಿಸಿದ್ದರು. 1916 ರ ಫೆಬ್ರವರಿ 26 ರಂದು ಜೋಧ್‌ಪುರದ ಮಹಾರಾಜರಿಗೆ ಆಡಳಿತ ಅಧಿಕಾರವನ್ನು ವಹಿಸಿಕೊಡುವ ಸಂದರ್ಭದಲ್ಲಿ ಭಾರತದ ರಾಜರನ್ನು ಲಾರ್ಡ್ ಹಾರ್ಡಿಂಜ್ (II) 'ಸಾಮ್ರಾಜ್ಯದ ಆಳ್ವಿಕೆಯ ಮಹಾಕಾರ್ಯದಲ್ಲಿ ಸಹಾಯಕರು ಮತ್ತು ಸಹೋದ್ಯೋಗಿಗಳಾಗಿದ್ದವರು' ಎಂದು ವಿವರಿಸಿದ್ದ.

ಅನಂತರ ಈ ನೀತಿ ಎರಡು ರೀತಿಗಳಲ್ಲಿ ಪ್ರಕಟಗೊಂಡಿತ್ತು. ಒಂದು ಇಂಪೀರಿಯಲ್ ಸರ್ವೀಸ್ ಪಡೆಗಳ ಅಭಿವೃದ್ಧಿ (ರಾಜ್ಯಗಳು ಇವುಗಳನ್ನು ನಿರ್ವಹಿಸುತ್ತಿದ್ದು ಬ್ರಿಟಿಷ್ ಅಧಿಕಾರಿಗಳು ಇವಕ್ಕೆ ತರಬೇತು ನೀಡುತ್ತಿದ್ದರು) ಇವು ಲಾರ್ಡ್ ಢಫರಿನ್‌ನ (1884-1888) ಕಾಲದಲ್ಲಿಯೇ ಆರಂಭಗೊಂಡವು ಮತ್ತು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅದರಲ್ಲಿಯೂ ವಿಶೇಷವಾಗಿ ಮೊದಲನೆ ಮಹಾಯುದ್ಧದ ಸಮಯದಲ್ಲಿ ಅಮೂಲ್ಯ ಸೇವೆ ಸಲ್ಲಿಸಿದ್ದವು. ವಿವಿಧ ರಾಜ್ಯಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಸಲಹಾ ಅಂಗದ ಬೆಳವಣಿಗೆ ಮತ್ತೊಂದು ಅಂಶವಾಗಿತ್ತು. ಇಂಥ ಒಂದು ವ್ಯವಸ್ಥೆ ರೂಪಿಸಲು ಲಾರ್ಡ್ ಲಿಟ್ಟನ್, ಲಾರ್ಡ್ ಕರ್ಜನ್, ಲಾರ್ಡ್ ಮಿಂಟೋ (II) ಮತ್ತು ಲಾರ್ಡ್ ಹಾರ್ಡೀಂಜ್ ಇವರು ಈ ಮೊದಲೇ ಪ್ರಯತ್ನಿಸಿದ್ದರು ಮತ್ತು ಮೊದಲನೆಯ ಮಹಾಯುದ್ಧದ ತರುವಾಯ ಇದರ ಪ್ರಾಮುಖ್ಯವನ್ನು ಲಾರ್ಡ್ ಚೆಲ್ಮ್ಸ್‌ಫರ್ಡ್ ಚೆನ್ನಾಗಿ ಮನಗಂಡಿದ್ದ. ಮಾಂಟೆಗ್ಯೂ -ಚೆಲ್ಮ್ಸ್‌ಫರ್ಡ್ ವರಧಿ ಇಂತ ವ್ಯವಸ್ಥೆಯ ಬಗ್ಗೆ ಒಂದು ನಿರ್ದಿಷ್ಟ ಶಿಫಾರಸ್ಸು ಮಾಡಿತ್ತು. ಅದರಂತೆ 1921 ರ ಫೆಬ್ರವರಿ 8 ರಂದು ಚಕ್ರವರ್ತಿ ಒಂದು ರಾಜ ಘೋಷಣೆಯ ಮೂಲಕ ಛೇಂಬರ್ ಆಫ್ ಪ್ರಿನ್ಸಸ್‌ನ್ನು ಸ್ಥಾಪಿಸಿದ. ಈ ಛೇಂಬರ್ ಆಫ್ ಪ್ರಿನ್ಸಸ್ ಒಂದು ಸಲಹಾ ಮಂಡಳಿ ಆಗಿದ್ದಿತೇ ವಿನಾ ಕಾರ್ಯ ನಿರ್ವಹಿಸುವ ಅಂಗವಾಗಿರಲಿಲ್ಲ. ರಾಜ್ಯದ ವಿವಿಧ ವರ್ಗಗಳ ಪ್ರತಿನಿಧಿಗಳಿಂದ ಕೂಡಿದ ಈ ಮಂಡಳಿಗೆ ವೈಸರಾಯ್ ಅಧ್ಯಕ್ಷನಾಗಿಯೂ, ಛೇಂಬರ್‌ನ ಸದಸ್ಯರಿಂದ ವರ್ಷಕ್ಕೊಮ್ಮೆ ಆಯ್ಕೆಯಾಗುತ್ತಿದ್ದ ಛಾನ್ಸೆಲರ್ ಮತ್ತು ಪ್ರೊ-ಛಾನ್ಸೆಲರ್ ಇರುತ್ತಿದ್ದರು. ಭಾರತದ ರಾಜ್ಯಗಳ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಾರ್ವತ್ರಿಕವಾಗಿ ಬ್ರಿಟಿಷ್ ಇಂಡಿಯಾ ಮತ್ತು ರಾಜ್ಯಗಳಿಗೆ ಸಂಬಂಧಿಸಿದಂಥ ವಿಷಯಗಳಲ್ಲಿ ವೈಸರಾಯ್ ಸ್ಥಾಯಿ ಸಮಿತಿಯ ಸಲಹೆ ಸಮಾಲೋಚನೆ ಪಡೆಯಬಹುದಿತ್ತು. ಈ ಛೇಂಬರ್ ಭಾರತದ ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ಅಥವಾ ಅದರ ರಾಜರೊಡನೆ ಅಥವಾ ಚಕ್ರವರ್ತಿಯೊಡನೆ ಅವರ ಸಂಬಂಧದ ಬಗ್ಗೆ ವ್ಯವಹರಿಸುವಂತಿರಲಿಲ್ಲ ಅಥವಾ ರಾಜ್ಯಗಳ ಅಸ್ತಿತ್ವದಲ್ಲಿರುವ ಹಕ್ಕುಗಳ ಅಥವಾ ರಾಜ್ಯಗಳ ಕಾರ್ಯಗಳಲ್ಲಿ ಮಧ್ಯೆ ಪ್ರವೇಶಿಸುವಂತಿರಲಿಲ್ಲ ಅಥವಾ ಕಾರ್ಯ ಸ್ವಾತಂತ್ರ್ಯವನ್ನು ನಿರ್ಬಂಧಿಸುವಂತಿರಲಿಲ್ಲ.

ಇದೇ ಸಮಯದಲ್ಲಿ ವಾರಮ್ಯದ ಬೆಳವಣಿಗೆ ಮತ್ತು ರಾಜ್ಯಗಳ ಆಂತರಿಕ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಿಸುವ ಹಕ್ಕುಗಳ ಬಗ್ಗೆ ರಾಜ್ಯಗಳ ರಾಜರು ಸಹಿಸಲಿಲ್ಲ. ಭಾರತ ಸರ್ಕಾರದ ಕ್ರಮೇಣ ಭಾರತೀಕರಣದ ದೃಷ್ಟಿಯಿಂದ ಇವರು ಹೆಚ್ಚು ನಷ್ಟ ಪ್ರವೃತ್ತಿಯವರಾದರು. ಇವರು ಜಕಾತಿನೀತಿ ನಿರೂಪಣೆಯಲ್ಲಿ ಪಾಲ್ಗೊಳ್ಳಲು ಮತ್ತು ಸುಂಕ ತೆರಿಗೆಗಳ ಆದಾಯ ಸಂಗ್ರಹಣೆಯಲ್ಲಿ ಪಾಲುಬೇಕೆಂದು ಒತ್ತಾಯಪಡಿಸಲಾರಂಭಿಸಿದರು. ಹಾಗಾಗಿ 1927 ರ ಡಿಸೆಂಬರ್‌ನಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಭಾರತೀಯ ರಾಜ್ಯಗಳ ಒಂದು ಸಮಿತಿಯನ್ನು ರಚಿಸಿದ. ಇದು ತನ್ನ ಅಧ್ಯಕ್ಷ ಸರ್ ಕೋರ್ಟ್ ಬಟ್ಲರನ ಹೆಸರಿನಿಂದ ಬಟ್ಲರ್ ಸಮಿತಿ ಎಂದು ಪ್ರಸಿದ್ಧವಾಗಿದೆ. ಚಕ್ರವರ್ತಿಯ ಅಧಿಕಾರ ಮತ್ತು ಭಾರತದ ರಾಜ್ಯಗಳ ನಡುವಣ ಸಂಬಂಧದದ ಬಗ್ಗೆ ಪರಿಶೀಲಿಸಲು ಮತ್ತು ಬ್ರಿಟಿಷ್ ಇಂಡಿಯಾ ಹಾಗೂ ಭಾರತೀಯ ರಾಜ್ಯಗಳ ನಡುವೆ ಆರ್ಥಿಕ ಹಾಗೂ ದ್ರವ್ಯ ಸಂಬಂಧಗಳ ಹೊಂದಾಣಿಕೆ ಬಗ್ಗೆ ಶಿಫಾರಸ್ಸು ಮಾಡಲು ಈ ಸಮಿತಿಯು ನೇಮಕವಾಗಿತ್ತು. ಈ ಸಮಿತಿ 1929 ರ ಆದಿಭಾಗದಲ್ಲಿ ತನ್ನ ವರದಿ ಸಲ್ಲಿಸಿತು. ಈ ಸಮಿತಿ ತನ್ನ ಹಲವಾರು ಶಿಫಾರಸ್ಸುಗಳ ಪೈಕಿ ತನ್ನ ದೃಢ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿತ್ತು. "ಸಾರ್ವಭೌಮರ ಅಧಿಕಾರ ಮತ್ತು ರಾಜರ ಸಂಬಂಧಗಳ ನಡುವಣ ಐತಿಹಾಸಿಕ ಸ್ವರೂಪದ ದೃಷ್ಟಿಯಿಂದ ರಾಜರ ಸಮ್ಮತಿ ಇಲ್ಲದೆ, ಭಾರತೀಯ ಶಾಸಕಾಂಗಕ್ಕೆ ಹೊಣೆಯಾಗಿರುವ, ಭಾರತದಲ್ಲಿ ಹೊಸ ಸರ್ಕಾರವೊಂದರೊಡನೆ ಅವರ ಸಂಬಂಧವನ್ನು ವರ್ಗಾಯಿಸಕೂಡದು " ಈ ಶಿಫಾರಸ್ಸುಗಳು ಕಾಲಮಾನಕ್ಕೆ ಅನುಗುಣವಾಗಿಲ್ಲವೆಂದೂ ಭಾರತದಲ್ಲಿನ ಸಂಬಂಧವನ್ನು "ಸಾಮರಸ್ಯ ಪೂರ್ಣವೂ ತೃಪ್ತಿಕರವಾದುದನ್ನಾಗಿಯೂ" ಮಾಡುವುದಿಲ್ಲ ಎಂದು ಈ ಸಮಿತಿಯ ಶಿಫಾರಸ್ಸುಗಳನ್ನು ಟೀಕಿಸಲಾಯಿತು.

## 90.3 ಉಪಸಂಹಾರ

ಆದರೆ, ಒಕ್ಕೂಟದಲ್ಲಿ ಭಾರತದ ರಾಜ್ಯಗಳು ಮತ್ತು ಬ್ರಿಟಿಷ್ ಇಂಡಿಯಾ - ಇವೆರಡೂ ವಿವಿಧ ರೀತಿಗಳಲ್ಲಿ ನಿಕಟವಾಗಿ ಅಂತರ್ ಸಂಬಂಧ ಪಡೆದಿರುವ ಕಾರಣ ಇವೆರಡರ ನಡುವೆ ನಿಕಟ ಸಂಬಂಧದ ಅಗತ್ಯವನ್ನು ಎರಡೂ ಕಡೆಗಳಲ್ಲಿ ಸೀಮಿತ ಅಭಿಪ್ರಾಯದವರು ಮನಗಂಡರು. 1928 ರಲ್ಲಿ ನೆಹರು ಸಮಿತಿ ಮತ್ತು ಇಂಡಿಯನ್ ಸ್ಟ್ಯಾಚುಟರಿ ಆಯೋಗಗಳು ಈ ಅಂಶದ ಬಗ್ಗೆ ಒತ್ತಿ ಹೇಳಿದವು. 1935 ರ ಭಾರತ ಸರ್ಕಾರದ ಕಾಯ್ದೆ ಸಲಹೆ ಮಾಡಲಾಗಿದ್ದು ಒಕ್ಕೂಟಕ್ಕೆ ರಾಜ್ಯಗಳ ಪ್ರವೇಶಕ್ಕೆ ಯಾವ ರೀತಿ ಅವಕಾಶ ಕಲ್ಪಿಸಿತ್ತು ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ.

## 90.4 ಮಾದರಿಯ ಪ್ರಶ್ನೆಗಳು

1. 1935 ರ ಕಾಯಿದೆಯನ್ವಯ ರೂಪುಗೊಂಡ ಫೆಡರಲ್ ಮತ್ತು ಪ್ರಾಂತ್ಯ ಸರ್ಕಾರಗಳ ಲಕ್ಷಣ ಮತ್ತು ಸ್ವರೂಪವನ್ನು ವಿಷದಪಡಿಸಿ?
2. ಫೆಡರಲ್ ಮತ್ತು ಪ್ರಾಂತ್ಯ ಸರ್ಕಾರಗಳ ರಾಜಕೀಯ ಸಂಬಂಧಗಳನ್ನು ಪಟ್ಟಿ ಮಾಡಿ?

## 90.5 ಪರಾಮರ್ಶನ ಕೃತಿಗಳು


1. M.V. Pylee : "Constitutional History of India"
2. R.P. Dutt : "India Today"

## ಟಿಪ್ಪಣಿಗಳು

# ಘಟಕ - 91

## ಬ್ರಿಟಿಷ್ ಭಾರತದ ಲೋಕೋಪಯೋಗಿ ಕಾರ್ಯಗಳು - ರೈಲ್ವೆಗಳು, ರಕ್ಷಣೆ, ವಿದೇಶಿ ನೀತಿ ಮತ್ತು ಸಾರ್ವಜನಿಕ ಸೇವೆಗಳು

91.0 ಪ್ರಸ್ತಾಪನೆ

91.1 ರೈಲ್ವೆಗಳು

91.2 ರಕ್ಷಣೆ

91.3 ವಿದೇಶಿ ನೀತಿ

91.4 ಸಾರ್ವಜನಿಕ ಸೇವೆಗಳು

91.5 ಉಪಸಂಹಾರ

91.6 ಮಾದರಿಯ ಪ್ರಶ್ನೆಗಳು

91.7 ಪರಾಮರ್ಶನ ಕೃತಿಗಳು

## 91.0 ಪ್ರಸ್ತಾವನೆ

ಲಾರ್ಡ್ ಕರ್ಜನ್ ಬಂಗಾಳದ ವಿಭಜನೆ ಮಾಡಿದ ತರುವಾಯ ಉಂಟಾದ ರಾಜಕೀಯ ಚಳುವಳಿ ಕ್ರಮೇಣ ಕ್ರಾಂತಿಯ ಸ್ವರೂಪವನ್ನು ತಳೆಯಿತು. ಕಾಂಗ್ರೆಸ್ಸಿನಲ್ಲಿ ತೀವ್ರಗಾಮಿ ಪಂಗಡ ಅಭಿವೃದ್ಧಿಗೊಂಡುದರ ಜೊತೆಗೆ ವಿಭಜನೆಗೆ ಪ್ರತಿಭಟನೆ ಎಂಬಂತೆ ವಿದೇಶೀ ವಸ್ತುಗಳ ಬಹಿಷ್ಕಾರದ ಚಳುವಳಿ ಬೆಳೆಯಿತು. ಭಾರತದ ವಿವಿಧ ಭಾಗಗಳಲ್ಲಿ ಗುಪ್ತ ಸಂಘಗಳು ಹುಟ್ಟಿಕೊಂಡವು. ಈ ಗುಪ್ತ ಸಂಘಗಳ ಧ್ಯೇಯ ಕೆಲವು ವರ್ಗದ ಅಧಿಕಾರಿಗಳನ್ನು ನಾಶಮಾಡುವುದು. ಬಾಂಬುಗಳ ತಯಾರಿಕೆ ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದು ಹಾಗೂ ಸಾಧ್ಯವಾದಲ್ಲಿ ಶಸ್ತ್ರಾಸ್ತ್ರಗಳೊಡನೆ ದಂಗೆಯೇಳುವುದೂ ಆಗಿತ್ತು. ಬಂಗಾಳದಲ್ಲಿ ಮಾತ್ರವೇ ಅಲ್ಲದೆ ಪಂಜಾಬ್ ಮತ್ತು ಮದ್ರಾಸಿನಂಥ ದೂರ ಪ್ರಾಂತಗಳಲ್ಲೂ "ತೀವ್ರ ಅಶಾಂತಿಯ ಸಾಮಾನ್ಯ ಪರಿಸ್ಥಿತಿ" ಯಿದ್ದಿತು ಮತ್ತು ಸರ್ಕಾರ ಉಗ್ರ ಕ್ರಮಗಳನ್ನು ಕೈಗೊಂಡಿತು. ಜನರ ಚಲನವಲನಗಳು ಮತ್ತು ಪತ್ರಿಕೆಗಳು ಹಾಗೂ ಸಾರ್ವಜನಿಕ ಸಭೆಗಳ ಮೇಲೆ ತೀವ್ರ ನಿರ್ಬಂಧಗಳನ್ನು ವಿಧಿಸುವ ಕಾನೂನುಗಳನ್ನು ಮಾಡಲಾಯಿತು. ಪ್ರಮುಖರ ಪೈಕಿ ಗಲ್ಲಿಗೇರಿಸಲಾಯಿತು. ಇಲ್ಲವೇ ಜೀವಾವಧಿ ಗಡೀಪಾರು ಮಾಡಲಾಯಿತು. ಮತ್ತೆ ಕೆಲವರನ್ನು ಗಲ್ಲಿಗೇರಿಸಲಾಯಿತು. ಇಲ್ಲದೇ ಜೀವವಾಧಿ ಗಡೀಪಾರು ಮಾಡಲಾಯಿತು. ತಿಲಕ್ ಮೊದಲಾದ ಪ್ರಮುಖ ಮುಖಂಡರೂ ಸೇರಿದಂತೆ ಅನೇಕರನ್ನು ವಿವಿಧ ಅವಧಿಗಳ ತುರಂಗವಾಸಕ್ಕೆ ಗುರಿ ಮಾಡಲಾಯಿತು. ಆದರೆ ಈ ಉಗ್ರ ಕ್ರಮಗಳು ಕೊಲೆ ಹಾಗೂ ಅತ್ಯಾಚಾರಗಳನ್ನು ತಡೆಯದಾದವು. ಅಂತಿಮವಾಗಿ ಸರ್ಕಾರ ಲಾರ್ಡ್ ಕರ್ಜನ್‌ನ ಕ್ರಮವನ್ನು ಮಾರ್ಪಾಡು ಮಾಡಲು ನಿರ್ಧರಿಸಿತು. ಈ ವಿಷಯದ ಬಗ್ಗೆ 1911 ರ ಉಗ್ರ ಭಾವನೆಗಳನ್ನು ವಿವರಿಸಿತ್ತು. ಅದು ಬಂಗಾಳಿಗಳ "ಯಥಾರ್ಥವಾದ ವಿಪತ್ತನ್ನು" ಧೈರ್ಯವಾಗಿ ಅಂಗೀಕರಿಸಿತ್ತು. "ಬಂಗಾಳ ಮತ್ತು ಪೂರ್ವ ಬಂಗಾಳಗಳೆರಡೂ ಪ್ರಾಂತಗಳ ಶಾಸಕಾಂಗಗಳಲ್ಲಿ ಅವರ ಸಂಖ್ಯೆ ಅಧಿಕವಾಗಿತ್ತು" ಮತ್ತು ಮಹಮದೀಯರು ಹಾಗೂ ಹಿಂದೂಗಳ ನಡುವೆ ಉಲ್ಬಣಗೊಳ್ಳುತ್ತಿದ್ದ ವಿಮುಖತೆ ದೇಶದ ಅನೇಕ ಭಾಗಗಳಲ್ಲಿ ಪ್ರಕೋಪದ ಪರಿಸ್ಥಿತಿಯನ್ನು ತಲುಪಿತ್ತು" ಎಂಬುದನ್ನು ಅಂಗೀಕರಿಸಿತ್ತು.

## 91.1 ರೈಲ್ವೆಗಳು

ಹೊಸ "ಗ್ಯಾರಂಟಿ" ವ್ಯವಸ್ಥೆಯಿಂದ (1879-1900) ರೈಲ್ವೆಗಳ ಪೈಕಿ ಹೆಚ್ಚಿನವನ್ನು ಸಂಬಂಧಪಟ್ಟ ಕಂಪೆನಿಗಳಿಂದ ಅವುಗಳ ಕರಾರಿನ ಅವಧಿ ಮುಗಿಯುತ್ತಿದ್ದಂತೆ ರಾಜ್ಯಗಳು ಕೊಂಡುಕೊಂಡವು ಅಥವಾ ಅಧೀನಪಡಿಸಿಕೊಂಡವು. ರೈಲ್ವೆ ಮಂಡಳಿ 1905 ರಲ್ಲಿ ಸ್ಪಷ್ಟಗೊಂಡಿತು. ಅವುಗಳ ಆಡಳಿತವನ್ನು ಕಂಪನಿಗಳಿಗೆ ಬಿಟ್ಟುಕೊಡಲಾಗಿದ್ದು ರೈಲ್ವೆ ಮಂಡಳಿಯ ನಿಯಂತ್ರಣಕ್ಕೆ ಇವು ಒಳಗಾಗಿದ್ದವು. ಮೊದಲನೆ ಯುದ್ಧಕ್ಕೆ ಮೊದಲ ಹದಿನಾಲ್ಕು ವರ್ಷಗಳಲ್ಲಿ ರೈಲುಗಳ ವಿಸ್ತರಣೆ ಮತ್ತು ರೈಲ್ವೆ ಲಾಭಗಳಿಸುವಿಕೆಯಿಂದ ಪ್ರಮುಖವಾಗಿತ್ತು. ಆದರೆ 1914-21 ರ ಅವಧಿಯಲ್ಲಿ ಸ್ವಲ್ಪಮಟ್ಟಿಗೆ ಹಿನ್ನಡೆಯುಂಟಾಯಿತು. ಇದಕ್ಕೆ ಯುದ್ಧ ಸಮಯದ ಒತ್ತಡ ಸ್ವಲ್ಪ ಮಟ್ಟಿಗೆ ಕಾರಣವಾದರೆ ಬಂಡವಾಳವ್ಯಯದ ವಾರ್ಷಿಕ ಕಾರ್ಯಕ್ರಮದಲ್ಲಿನ ಇಳುವರಿಯೂ ಸ್ವಲ್ಪ ಮಟ್ಟಿಗೆ ಕಾರಣವಾಗಿತ್ತು.

1919 ರ ಸುಧಾರಣೆಗಳನ್ನು ಜಾರಿಗೆ ತಂದ ಅನಂತರ ರೈಲ್ವೆಗಳು ಕೆಲಸ ಮಾಡುತ್ತಿರುವ ಕ್ರಮಗಳ ಬಗ್ಗೆ ಪರಿಶೀಲಿಸಿ ಅವುಗಳ ಅಭಿವೃದ್ಧಿಗೆ ಸೂಕ್ತ ನೀತಿಯನ್ನು ಸೂಚಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಲಾಯಿತು. ಸರ್ ವಿಲಿಯಂ ಅಕ್‌ವರ್ತ್ ಇದರ ಅಧ್ಯಕ್ಷನಾಗಿದ್ದ. ಈ ಸಮಿತಿ ರೈಲ್ವೆಗಳ ಸುಧಾರಣೆಗೆ ಪ್ರತಿ ಐದು ವರ್ಷಗಳಿಗೆ 150 ಕೋಟಿ ರೂಗಳನ್ನು ವೆಚ್ಚ ಮಾಡಲು ಶಿಫಾರಸ್ಸು ಮಾಡಿತ್ತು ಮತ್ತು ಹೊಸ ರೈಲು ಮಾರ್ಗಗಳನ್ನು ರಾಜ್ಯದ ಏಜೆನ್ಸಿಗಳಿಗೆ ಕೈಗೊಳ್ಳಬೇಕೆಂಬುದರ ಪರವಾಗಿತ್ತು. ಸಂಪರ್ಕಗಳ ಒಂದು ಹೊಸ ವಿಭಾಗದ ಸ್ಥಾಪನೆ, ರೈಲ್ವೆ ಮಂಡಳಿಗಳ ಪುನರ್ ರಚನೆ, ರೈಲ್ವೆ ದರಗಳ ಒಂದು ಟ್ರಿಬ್ಯುನಲ್ ಸ್ಥಾಪನೆ ಹಾಗೂ ಸಾಮಾನ್ಯ ಆಯವ್ಯಯದಿಂದ ರೈಲ್ವೆ ಆಯವ್ಯಯದ ಬೇರ್ಪಡೆ - ಇವುಗಳ ಬಗ್ಗೆಯೂ ಸಮಿತಿ ಶಿಫಾರಸ್ಸು ಮಾಡಿತು. ಭಾರತೀಯ ಸಾರ್ವಜನಿಕ ಅಭಿಪ್ರಾಯ ಯಾವಾಗಲೂ ರೈಲ್ವೆಗಳ ಕಂಪನಿ ಆಡಳಿತದ ವಿರುದ್ಧವಾಗಿತ್ತು ಎಂಬುದು ಗಮನಾರ್ಹವಾದ ವಿಷಯ. ರೈಲ್ವೆಗಳಿಂದ ಬಂದ ಲಾಭ ಭಾರತದ ಹೊರಗೆ ಹೋಗುತ್ತಿದ್ದುದು ಮಾತ್ರವಲ್ಲದೆ ಕಂಪನಿಗಳು ಭಾರತದ ರಾಷ್ಟ್ರೀಯ ಹಿತಾಸಕ್ತಿಗಳ ಬಗ್ಗೆ ಸಹಾನುಭೂತಿ ಪರವಾದುದಾಗಿರಲಿಲ್ಲವೆಂಬುದೂ ಇದರ ಕಾರಣವಾಗಿತ್ತು. ಭಾರತ ಸರ್ಕಾರ ಕಂಪನಿ ಆಡಳಿತವನ್ನು ಅಂತ್ಯಗೊಳಿಸುವ ಬಹುಮತದ ವರದಿಯ ಶಿಫಾರಸ್ಸನ್ನು ಖಚಿತವಾಗಿ ಅಂಗೀಕರಿಸದಿದ್ದರೂ ಭಾರತೀಯರ ಅಭಿಪ್ರಾಯಕ್ಕೆ ಮಣಿದು ಅಂತಿಮವಾಗಿ ಅದು ಈಸ್ಟ್ ಇಂಡಿಯನ್ ರೈಲ್ವೆ (1925 ರ ಜನವರಿ 1), ದಿ ಗ್ರೇಟ್ ಇಂಡಿಯನ್ ಪೆನಿನ್ಸುಲಾಲ್ ರೈಲ್ವೆ (19125 ರ ಜೂನ್ 30) ಬರ್ಮಾ ರೈಲ್ವೆಸ್ (1929 ರ ಜನವರಿ 1) ಮತ್ತು ಸದರನ್ ಪಂಜಾಬ್ ರೈಲ್ವೆಯನ್ನು (1930 ರ ಜನವರಿ 1) ಅದು ತನ್ನ ಆಡಳಿತಕ್ಕೆ

ವಹಿಸಿಕೊಂಡಿತು. ಸರ್ಕಾರ ಎಲ್ಲ ಹೊಸ ರೈಲು ಮಾರ್ಗಗಳ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲಾರಂಭಿಸಿತು. ರೈಲ್ವೆ ಮಂಡಲಿಯನ್ನು ಪುನರ್ ರಚನೆಗೊಳಿಸಲಾಯಿತು. 1936 ರಲ್ಲಿ ಅದು ರೂಪಿತಗೊಂಡಂತೆ ಛೀಫ್ ಕಮೀಷನರ್ ಅಧ್ಯಕ್ಷನಾಗಿದ್ದು, ಆರ್ಥಿಕ ಕಮೀಷನರ್ ಮತ್ತು ಮೂವರು ಇತರ ಸದಸ್ಯರನ್ನು ಒಳಗೊಂಡಿತ್ತು. ದರಗಳ ಸಲಹಾ ಸಮಿತಿ 1926 ರಲ್ಲಿ ರಚಿತವಾಯಿತು ಮತ್ತು ರೈಲ್ವೆ ಮಂಡಳಿಯ ಕೇಂದ್ರ ಪ್ರಚಾರ ಬ್ಯೂರೋವನ್ನು 1927 ರ ಏಪ್ರಿಲ್ 1 ರಂದು ಪ್ರಾರಂಭಿಸಲಾಯಿತು. ಆಕ್‌ವರ್ತ್ ಸಮಿತಿಯ ಶಿಫಾರಸ್ಸಿನಂತೆ, 1925 ರಿಂದ ಸಾಮಾನ್ಯ ಆಯ ವ್ಯಯದಿಂದ ರೈಲ್ವೆ ಆಯವ್ಯಯವನ್ನು ಪ್ರತ್ಯೇಖಿಸಲಾಯಿತು.

## 91.2 ರಕ್ಷಣೆ

ಲಾರ್ಡ್ ಕರ್ಜನ್ ವೈಸರಾಯ್ ಆಗಿದ್ದಾಗ ಸೇನೆಯ ಆಡಳಿತದಲ್ಲಿ ಒಂದು ಮಹತ್ತರ ಬದಲಾವಣೆಯಾಯಿತು. ಅವರೆವಿಗೆ ಗವರ್ನರ್ ಜನರಲ್ಲನ ಕಾರ್ಯನಿರ್ವಾಹಕ ಮಂಡಳಿಯ ವಿಶೇಷ ಸದಸ್ಯ ಕಮ್ಯಾಂಡರ್ ಇನ್ ಛೀಫ್ ಆಗಿರುತ್ತಿದ್ದ. ಆದರೆ ಈ ಮಂಡಳಿಯಲ್ಲಿ "ಸೈನ್ಯಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳಲ್ಲಿಯೂ ವೈಸರಾಯಿಗೆ ಸಾಂವಿಧಾನಾತ್ಮಕ ಸಲಹೆಗಾರನಾಗಿದ್ದ" ಸೇನಾ ಸದಸ್ಯನೂ ಒಬ್ಬ ಈ ಮಂಡಳಿಯಲ್ಲಿ ಇರುತ್ತಿದ್ದ. ಕಮ್ಯಾಂಡರ್ ಇನ್ ಛೀಫ್ ತನ್ನ ಪ್ರಸ್ತಾವನೆಗಳು ಹಾಗೂ ಸಲಹೆ ಯೋಜನೆಗಳನ್ನೆಲ್ಲ ತನಗಿಂತ ಕೆಳದರ್ಜೆಯ ಅಧಿಕಾರಿಯಾಗಿದ್ದ ಸೇನಾನಿಯ ಸೈನ್ಯ ಮೂಲಕ ಕೌನ್ಸಿಲ್ ಮುಂದೆ ಮಂಡಿಸಬೇಕಿತ್ತು. 1902 ರ ನವೆಂಬರ್‌ನಿಂದ ಭಾರತದ ಕಮ್ಯಾಂಡರ್ ಇನ್ ಛೀಫ್ ಆಗಿದ್ದ ಲಾರ್ಡ್ ಕರ್ಜನ್ ಈ ವ್ಯವಸ್ಥೆಯನ್ನು "ಅತಿ ದುಬಾರಿಯಾದ ಹಾಗೂ ವಿಳಂಬಕಾರಿಯಾದ ಮಿಲಿಟರಿ ಅನೌಚಿತ್ಯ" ಎಂದು ಖಂಡಿಸಿದ. ಸೇನಾ ಸದಸ್ಯನ ರದ್ದತಿಗಾಗಿ ಅವನು ಒತ್ತಾಯ ಪಡಿಸಿದ ಮತ್ತು ಕಮ್ಯಾಂಡರ್ ಇನ್ ಛೀಫ್‌ನನ್ನು ಭಾರತ ಸರ್ಕಾರಕ್ಕೆ ಸಂಪೂರ್ಣ ಸೇನಾ ಸಲಹೆಗಾರನಾಗಿ ಮಾಡುವಂತೆ ಒತ್ತಾಯಪಡಿಸಿದ. ಆದರೆ ಸೇನೆ ನಾಗರಿಕ ಅಧಿಕಾರಕ್ಕೆ ಅಧೀನವಾಗಿರಬೇಕೆಂದು ಆಧಾರದ ಮೇಲೆ ಈ ಕ್ರಮವನ್ನು ಲಾರ್ಡ್ ಕರ್ಜನ್ ವಿರೋಧಿಸಿದ. ಈ ವಿವಾದದಿಂದ 1905 ರ ಆಗಸ್ಟ್‌ನಲ್ಲಿ ವೈಸರಾಯ್ ರಾಜೀನಾಮೆ ನೀಡುವಂತಾಯ್ತಿತು. ಬ್ರಿಟಿಷ್ ಕ್ಯಾಬಿನೆಟ್ ಲಾರ್ಡ್ ಕರ್ಜನ್‌ರ ಪರವಾಗಿ ತೀರ್ಮಾನಿಸಿತು ಮತ್ತು ಒಂದು ಸಂಧಾನ ಮಾಡಿಕೊಂಡಿತು. ಆದರೆ ಅಲ್ಪಾವಧಿಯಲ್ಲಿ ಇದು ಕಾರ್ಯ ಸಾದ್ಯವಾಗಲಾರದೆಂಬುದು ಮನದಟ್ಟಾಯಿತು. ತತ್ಪರಿಣಾಮವಾಗಿ ಇದು ರದ್ದುಗೊಂಡಿತು. 1909 ರ ತರುವಾಯ ಕಮ್ಯಾಂಡರ್ ಇನ್ ಛೀಫ್ ಭಾರತ ಸರ್ಕಾರಕ್ಕೆ ಪ್ರಧಾನ ಸೇನಾ ಸಲಹೆಗಾರನಾದ. ಆದರೆ ಅನೇಕ ಮಂದಿ ಅಂತರರಾಷ್ಟ್ರೀಯ ನೀತಿ ವಿಮರ್ಶಕರ ಪ್ರಕಾರ ಲಾರ್ಡ್ ಕರ್ಜನ್‌ನ ನಿಲುವು ಸರಿಯಾದೂದು, ಯುಕ್ತವಾದೂದು ಆಗಿತ್ತು. ಸೇನಾ ಅಧಿಕಾರದಲ್ಲಿ ಕಮ್ಯಾಂಡರ್ ಇನ್ ಛೀಫ್‌ನ ಮೇಲೆ ತಕ್ಷಣದ ಉನ್ನತಾಧಿಕಾರಿಯೆಂದರೆ ಗವರ್ನರ್ ಜನರಲ್ ಇನ್ ಕೌನ್ಸಿಲ್ ಆಗಿರುತ್ತಿದ್ದ. ಭಾರತದಲ್ಲಿ ರಕ್ಷಣಾ ಆಡಳಿತಕ್ಕೆ ಸಂಬಂಧಿಸಿದಂತೆ ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಪಡೆದ ಸಕಲ ಆದೇಶಗಳಿಗೂ ಸೂಕ್ತ ಗೌರವ ಗಮನ ನೀಡಬೇಕಿತ್ತು. ಮಹಾ ಪ್ರಭುವಿನ ಮಂತ್ರಿಗಳಲ್ಲಿ ಒಬ್ಬನಾಗಿ ಸೆಕ್ರೆಟರ ಆಫ್ ಸ್ಟೇಟಿಗೆ ಈ ವಿಷಯದಲ್ಲಿ ವಿಶೇಷ ಅಧಿಕಾರ ಮತ್ತು ಜವಾಬ್ದಾರಿಯಿದ್ದಿತು.

ಭಾರತೀಯ ರಕ್ಷಣಾ ಸಮಸ್ಯೆ ಆಧುನಿಕ ಭಾರತದ ರಾಜಕೀಯದಲ್ಲಿ ಉಗ್ರ ಚರ್ಚೆಗೆ ಗುರಿಯಾದ ವಿಷಯವಾಗಿದೆ. ಭಾರತದಲ್ಲಿ ರಾಷ್ಟ್ರೀಯ ಚಳುವಳಿಯ ಪ್ರಗತಿಯೊಡನೆ ಭಾರತದ ರಕ್ಷಣಾ ಆಡಳಿತದ ಮೇಲೆ ನಿರ್ದಿಷ್ಟ ನಿಯಂತ್ರಣಕ್ಕಾಗಿ ಒತ್ತಾಯಪಡಿಸಿದರು ಮತ್ತು ರಾಜಕೀಯ ಮುಖಂಡರು ದುಬಾರಿ ಸೇನಾ ವೆಚ್ಚಗಳ ಬಗ್ಗೆ ನಿರಂತರವಾಗಿ ದೂರುತ್ತಿದ್ದರು. ಈ ವೆಚ್ಚವನ್ನು "ರಾಷ್ಟ್ರ ನಿರ್ಮಾಣ" ಕಾರ್ಯದತ್ತ ಹರಿಸಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು. ಒಂದನೇ ಮಹಾಯುದ್ಧದಲ್ಲಿ ಭಾರತದ ಸೇನೆಯ ಉಜ್ವಲ ಹಾಗೂ ಪೂರ್ಣ ಸೇವೆಯನ್ನು ಸ್ತುತಿಸಿದ ಮಾಂಟೆಗ್ಯೂ - ಚೆಲ್ಸ್ಮ್ ಫರ್ಡ್ ವರದಿ "ಅದನ್ನು ಮತ್ತಷ್ಟು ಭಾರತೀಕರಣಗೊಳಿಸುಲ" ಸಮಸ್ಯೆಯೊಡನೆ ಹೋರಾಡುವ ಅವಶ್ಯಕತೆಯ ಬಗ್ಗೆ ಮಹತ್ವ ನೀಡಿತು. ನೆಹರು ವರದಿ ಭಾರತದ ಸೇನೆಯ ಮೇಲಣ ಅಧಿಕಾರವನ್ನು ಮಂತ್ರಿಗಳಿಗೆ ವರ್ಗಾಹಿಸಲು ಸಮರ್ಥಿಸಿತ್ತು. 1925 ರ ಜೂನಿನಲ್ಲಿ ಮೇಜರ್ ಜನರಲ್ ಸರ್ ಅಂಡ್ರು ಸ್ಕೀನ್ (ಆನಂತರ ಜನರಲ್ ಸ್ಕೀನ್) ಅಧ್ಯಕ್ಷತೆಯಲ್ಲಿ ಸ್ಕೀನ್ ಸಮಿತಿಯನ್ನು ನೇಮಕ ಮಾಡಲಾಯಿತು. ಸ್ಕೀನ್ ಅಗ್ರ ಭಾರತದಲ್ಲಿ ಸೇನೆಯ ಛೀಫ್ ಆಫ್ ಸ್ಟಾಫ್ ಆಗಿದ್ದ. ಈ ಸಮಿತಿ "ಭಾರತೀಯ ಸ್ಯಾಂಡ್ ಹರ್ಸ್ಟ್ ಸಮಿತಿ" ಎಂದೂ ಪರಿಚಿತವಾಗಿದೆ. 1923 ರಲ್ಲಿ ಭಾರತದಲ್ಲಿ ಕಮ್ಯಾಂಡರ್ ಇನ್ ಛೀಫ್ ಆಗಿದ್ದ ಲಾರ್ಡ್ ರಾಲಿನ್ ಸನ್ ಘೋಷಿಸಿದ "ಎಂಟು ಯೂನಿಟ್‌ಗಳ ಯೋಜನೆಯನ್ನು" ರದ್ದುಗೊಳಿಸಿ 1933 ರ ವೇಳೆಗ ಭಾರತೀಯ "ಸ್ಯಾಂಡ್ ಹರ್ಸ್ಟನ್" ಸ್ಥಾಪನೆಗೆ (ಸ್ಯಾಂಡ್ ಹರ್ಸ್ಟ್ ಸ್ಯಾಂಡ್ ಹರ್ಸ್ಟಿನಲ್ಲಿ ಬ್ರಿಟಿಷ್ ಪದಾತಿಗಳ ಮತ್ತು ರಾವುತರ ಸೈನ್ಯ ಶಿಕ್ಷಣ ಶಾಲೆ) ಈ ಸಮಿತಿ ಶಿಫಾರಸ್ಸು ಮಾಡಿತು. ಈ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಕಾರ್ಯ ರೂಪಕ್ಕೆ ತರಲಿಲ್ಲ.

ಭಾರತದ ನಿಬಂಧನೆಗಳ ಆಯೋಗ ರಾಷ್ಟ್ರ ರಕ್ಷಣೆಯ "ಪ್ರಧಾನ ಸಮಸ್ಯೆ" ಯನ್ನು ವಿವಿಧ ದೃಷ್ಟಿಕೋನಗಳಿಂದ ಗಮನಿಸಿತು ಮತ್ತು ಮೂರು ಅಂಶಗಳ ದೃಷ್ಟಿಯಿಂದ ಗಡಿನಾಡ ರಕ್ಷಣೆ, ಆಂತರಿಕ ಸುಭದ್ರತೆ ಮತ್ತು ಭಾರತೀಯ ರಾಜ್ಯಗಳಿಗೆ ಹೊಣೆ - ಭಾರತೀಯ ಸೇನೆಯಲ್ಲಿ ಬ್ರಿಟಿಷ್ ಅಂಶದ ಇರುವಿಕೆಗೆ ಒತ್ತಾಯ ಪಡಿಸಿತು. ಅದು "ಬ್ರಿಟಿಷ್ ಅಂಶದಿಂದ ಕೂಡಿದ ಸೈನ್ಯದ ನಿಯಂತ್ರಣವನ್ನು ಭಾರತೀಯ ಶಾಸಕಾಂಗಕ್ಕೆ ವಹಿಸಿಕೊಡಲಾಗುವುದಿಲ್ಲ" ಮತ್ತು ಭಾರತದಲ್ಲಿ ಈಗ ಸೇನೆ ನಿರ್ವಹಿಸುತ್ತಿರುವ ಕಾರ್ಯಗಳನ್ನು ಯಾವ ಸಹಾಯವೂ ಪಡೆಯದೆ ನಿರ್ವಹಿಸಲಿಲ್ಲ ಸಂಪೂರ್ಣವಾಗಿ ಭಾರತೀಯ ಸೇನಾ ಪಡೆಯ ವಿಕಾಸ ಅತಿವಿಧಾನ ಗಡಿಯದಾಗುತ್ತದೆ", ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಭಾರತ ಸರ್ಕಾರದ 1935 ರ ಕಾಯ್ದೆಯಿಂದ ಭಾರತದ ರಕ್ಷಣೆಯ ವಿಷಯದಲ್ಲಿ ಯಾವ "ಗಣನೀಯ ಬದಲಾವಣೆ" ಯನ್ನು ಮಾಡಲಿಲ್ಲ.

ಸೇನೆಯ ವ್ಯವಸ್ಥೆಗೆ ಸಂಬಂಧಿಸಿದಂತೆ ನಾವು ಗಮನಿಸಬಹುದಾದ ಅಂಶ 1904 ರಲ್ಲಿ ಲಾರ್ಡ್ ಕಿಚನ್‌ರ್ ಜಾರಿಗೆ ತಂದಿದ್ದ ಕಮ್ಯಾಂಡ್ ಪದ್ಧತಿಯನ್ನು ಭಾರತದ ಸೇನೆ 1907 ರಲ್ಲಿ ಉತ್ತರ ಮತ್ತು ದಕ್ಷಿಣ ಭಾಗಗಳಾಗಿ ಎರಡು ವಿಭಾಗಗಳಾಗಿ ವಿಭಜನೆಗೊಂಡಾಗ ಅವನೇ ರದ್ದುಪಡಿಸಿದ 1914-18 ರ ಸಮರ ಸಮಯದಲ್ಲಿ ಎಲ್ಲ ರೀತಿಯ ಭಾರತೀಯ ಪಡೆಗಳು ಅತ್ಯಮೂಲ್ಯ ಸೇವೆ ಸಲ್ಲಿಸಿದವು. ಈ ವ್ಯವಸ್ಥೆಯ ಲೋಪ ದೋಷಗಳು ಹೊರಬಂದವು ಮತ್ತು ಯುದ್ಧಾನಂತರ ಇದನ್ನು ಪುನರ್ ವ್ಯವಸ್ಥೆಗೊಳಿಸಲಾಯಿತು. ಭಾರತೀಯ ಪ್ರದೇಶವನ್ನು ನಾಲ್ಕು ಕಮ್ಯಾಂಡ್‌ಗಳಾಗಿ, ಹದಿನಾಲ್ಕು ತುಕಡಿಗಳಾಗಿ ಉಪವಿಭಾಗಿಸಲಾಯಿತು. ಪ್ರತಿಯೊಂದು ತುಕಡಿ ನಿರ್ದಿಷ್ಟ ಸಂಖ್ಯೆಯ ಬ್ರಿಗೇಡ್ ಕಮ್ಯಾಂಡ್‌ಗಳನ್ನು ಪಡೆದಿತ್ತು. ಇವುಗಳ ಪೈಕಿ ಒಂದಾದ ಪಶ್ಚಿಮ ಕಮ್ಯಾಂಡ್ ಅನ್ನು 1938 ರ ನವೆಂಬರ್ 1 ರಂದು ರದ್ದುಗೊಳಿಸಲಾಯಿತು.

1939 ರಲ್ಲಿ ಭಾರತದ ರಕ್ಷಣಾ ಪಡೆಗಳ ವ್ಯವಸ್ಥೆ ಮುಂದಿನಂತಿತ್ತು. ಬ್ರಿಟಿಷ್ ಸೇನೆಯ ಯುನಿಟ್‌ಗಳಿಂದ ಕೂಡಿದ ಕ್ರಮವಾದ ಸೇನೆ; ಸಹಾಯಕ ದಳಗಳು - ಇದಕ್ಕೆ ಯುರೋಪಿಯನ್ ಬ್ರಿಟಿಷ್ ಪ್ರಜೆಗಳಿಗೆ ಮಾತ್ರ ಪ್ರವೇಶ ಸೀಮಿತವಾಗಿತ್ತು. ಪ್ರಾದೇಶಿಕ ಪಡೆ - ಪ್ರಾಂತೀಯ ಬೆಟಾಲಿಯನ್‌ಗಳು, ನಗರ ಯೂನಿಟ್‌ಗಳು ಮತ್ತು ಯೂನಿವರ್ಸಿಟಿ ಟ್ರೈನಿಂಗ್ ಕೋಡ್ ಯೂನಿಟ್‌ಗಳ ಪ್ರಧಾನ ವರ್ಗಗಳಿಂದ ಕೂಡಿತ್ತು. 1932 ರ ಅಕ್ಟೋಬರ್‌ನಿಂದ ರಾಯಲ್ ಏರ್‌ಫೋರ್ಸ್ 1934 ರ ಅಕ್ಟೋಬರ್‌ನಿಂದ ರಾಯಲ್ ಇಂಡಿಯನ್ ನೇವಿ ಎಂದು ನಾಮಕರಣಗೊಂಡ ರಾಯಲ್ ಇಂಡಿಯನ್ ಮೇರಿನ್ ಭಾರತೀಯ ರಾಜ್ಯಪಡೆಗಳೂ ಇದ್ದವು. ಇವು ಮೊದಲಿಗೆ ಇಂಪೀರಿಯಲ್ ಸರ್ವೀಸ್ ಟ್ರೂಪ್ಸ್ ಎಂದು ಪ್ರಸಿದ್ಧವಾಗಿದ್ದವು. ಇವನ್ನು ರಾಜ್ಯದ ರಾಜರೇ ತಮ್ಮ ಸ್ವಂತ ವೆಚ್ಚದಲ್ಲಿ, ರಾಜ್ಯದ ಸೇವೆಗಾಗಿ ನಿರ್ವಹಿಸಿಕೊಂಡು ಬರುತ್ತಿದ್ದರು.

ಭಾರತದ ಸೇನೆಯಲ್ಲಿ ಅಧಿಕಾರಿಗಳ ಎರಡು ಪ್ರಧಾನ ವರ್ಗಗಳಿದ್ದವು. ಒಂದು ಕಿಂಗ್ಸ್ ಕಮೀಷನ್ ಪಡೆದಿದ್ದುದು, ಮತ್ತೊಂದು ವೈಸರಾಯಿಯ ಕಮೀಷನ್ ಪಡೆದಿದ್ದುದು, ವೈಸರಾಯ್ ಕಮೀಷನ್ ಪಡೆಯುತ್ತಿದ್ದವರೆಲ್ಲ ಭಾರತೀಯರಾಗಿದ್ದು ಇವರಿಗೆ ಸೀಮಿತ ಸ್ಥಾನವಿದ್ದು ಇವರ ಕಮ್ಯಾಂಡ್‌ನ ಅಧಿಕಾರವೂ ಸೀಮಿತವಾಗಿತ್ತು. ಕಿಂಗ್ಸ್ ಕಮೀಷನ್‌ಗೆ ಸಂಬಂಧಿಸಿದಂತೆ, ಭಾರತೀಯರು 1918 ರಿಂದ ಮೂರು ವಿಧಗಳಲ್ಲಿ ಅರ್ಹರಾಗಿದ್ದರು.

(1) ಸ್ಯಾಂಡ್ ಹರ್ಸ್ಟ್‌ನ ರಾಯಲ್ ಮಿಲಿಟರಿ ಕಾಲೇಜು ಮತ್ತು ಡೆಹರೂಡಿನಿನ ಭಾರತೀಯ ಸೇನಾ ಅಕಾಡೆಮಿಯಲ್ಲಿ (1932 ರ ಅಕ್ಟೋಬರಿನಲ್ಲಿ ತೆಗೆದುದು) ಕೇಡೆಟುಗಳಾಗಿ ಅರ್ಹತೆ ಪಡೆಯುವುದು.

(2) ದಕ್ಷ ಭಾರತೀಯ ಅಧಿಕಾರಿಗಳಿಂದ ಆಯ್ಕೆ ಅಥವಾ ರೆಜಿಮೆಂಟುಗಳಲ್ಲಿ ನಾಸ್ ಕಮೀಷನ್ ಅಧಿಕಾರಿಗಳಿಗೆ ಬಡ್ತಿ ನೀಡುವುದು ಮತ್ತು

(3) ವಯೋವೃದ್ಧರಾಗಿರುವುದರಿಂದಲೋ ಅಥವಾ ಶಿಕ್ಷರಾದ ಅಭಾವದಿಂದಲೋ ಅರ್ಹತೆ ಪಡೆಯಲು ಸಾಧ್ಯವಿಲ್ಲದ ಅಧಿಕಾರಿಗಳಿಗೆ ಗೌರವಾನ್ವಿತ ಕಿಂಗ್ಸ್ ಕಮೀಷನ್ ನೀಡುವುದು - ಈ ವಿಧಗಳಾಗಿದ್ದವು. ಸರ್ಕಾರ 1932 ರಲ್ಲಿ ಎಲ್ಲ ಪಡೆಗಳ ಒಂದು ಡಿವಿಷನ್ ಮತ್ತು ಒಂದು ಅಶ್ವದಳದ ಬ್ರಿಗೇಡನ್ನು ಭಾರತೀಕರಣಗೊಳಿಸುವ ತನ್ನ ಧ್ಯೇಯವನ್ನು ಪ್ರಕಟಿಸಿತು. ಭಾರತದ ಸೇನೆಯ ಭಾರತೀಕರಣದ ಮತ್ತೊಂದು ಮುಖ್ಯ ಹಂತವೆಂದರೆ, 1934 ರ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಶಾಸಕಾಂಗ ಭಾರತೀಯ ಸೇನಾ ಕಾಯ್ದೆಯನ್ನು (ತಿದ್ದುಪಡಿ) ಅಂಗೀಕರಿಸಿದುದರಿಂದ ಬಂದಿತು. ಈ ಕ್ರಮದ ಪ್ರಕಾರ ಭಾರತೀಯ ಸೇನಾ ಅಕಾಡೆಮಿಯಿಂದ ಕಮೀಷನ್ ಪಡೆದ ಅಧಿಕಾರಿಗಳು ನ್ಯಾಯಬದ್ಧ ಸ್ಥಾನಮಾನಗಳ ಸೌಲಭ್ಯ ಪಡೆಯಲು ಮತ್ತು ಅವರನ್ನು "ಇಂಡಿಯನ್ ಕಮೀಷನ್ ಅಧಿಕಾರಿಗಳು" ಎಂದು ಕರೆಯಲಾರಂಭಿಸಿದರು.

## 91.3 ವಿದೇಶಿ ನೀತಿ

ಲಾರ್ಡ್ ಕರ್ಜನ್ 1899 ರ ಜನವರಿಯಲ್ಲಿ ಭಾರತಕ್ಕೆ ಆಗಮಿಸಿದ. ವಾಯುವ್ಯ ಗಡಿನಾಡಿನ ಉಪದ್ರವಕಾರಿ ಸಮಸ್ಯೆ ಅವನ ತೀವ್ರ ಗಮನ ಸೆಳೆಯಿತು. ಬ್ರಿಟಿಷ್ ಗಡಿನಾಡಿನ ಅತ್ತ ಸುಮಾರು 10,000 ಜನರ ಬ್ರಿಟಿಷ್ ಪಡೆಯಿರುವುದನ್ನು ಅವನು ಗಮನಿಸಿದ. ಹೊಸ ವೈಸರಾಯ್ ಈ ಗುಡ್ಡಗಾಡು ಪ್ರದೇಶಗಳಿಗೆ ಸಂಬಂಧಿಸಿದಂತೆ "ಹಿಮ್ಮೆಟ್ಟುವ ಮತ್ತು ಗಮನ ಕೇಂದ್ರೀಕರಿಸುವ" ಎಂದು ಕರೆಯಲಾಗಿರುವ ಒಂದು ನೀತಿಯನ್ನು ಅನುಸರಿಸಿದ. ಚಿತ್ರಾಲನ್ನು ಉಳಿಸಿಕೊಂಡದ್ದು ಮತ್ತು ಅಲ್ಲಿಂದ ಪೇಷಾವರ್‌ನವರೆವಿಗೆ ರಸ್ತೆ ಮಾಡಿದುದನ್ನು ಅವನು ಸಮರ್ಥಿಸಿದ. ಆದರೆ ಇತರ ವಿಷಯಗಳಲ್ಲಿ ಅವನು "ಉಗ್ರಗಾಮಿ" ಗಳ ನೀತಿಯಿಂದ ದೂರವಾದನು. ಅವನ ಆದೇಶದ ಮೇರೆಗೆ ಖೈಬರ್ ಕಣಿವೆ, ಕುರ್ರಂ ಕಣಿವೆ, ವಾಜಿರಿಸ್ಥಾನ್ ಮತ್ತು ಗುಡ್ಡಗಾಡು ಪ್ರದೇಶಗಳಿಂದ ಸಾಮಾನ್ಯವಾಗಿ ಹೆಚ್ಚಿನ ಸಂಖ್ಯೆಯ ಬ್ರಿಟಿಷ ಪಡೆಗಳನ್ನು ಹಿಂದೆಗೆದುಕೊಳ್ಳಲಾಯಿತು. ಆದರೆ ಚಕ್ದರ್ರಾ, ಮಾಲಖಂಡ್ ಮತ್ತು ದರ್ಗಾಯ್‌ಗಳಲ್ಲಿನ ಕೆಲವು ರಾಜ್ಯಗಳನ್ನು ಉಳಿಸಿಕೊಂಡು, ಅವುಗಳನ್ನು ಬಲಪಡಿಸಲಾಯಿತು. ಹಿಂದೆಗೆದುಕೊಳ್ಳಲಾದ ಬ್ರಿಟಿಷ್ ಪಡೆಗಳ ಸ್ಥಾನವನ್ನು ಬ್ರಿಟಿಷ್ ಅಧಿಕಾರಿಗಳ ನಾಯಕತ್ವದಲ್ಲಿ ಗುಡ್ಡಗಾಡು ದಳದಿಂದ ಅಥವಾ ಸೇನಾ ಪೋಲಿಸರಿಂದ ತುಂಬಲಾಯಿತು. ಆದರೂ ಬ್ರಿಟಿಷ್ ಕೋಟೆ ಕೊತ್ತಲಗಳ ಸಾಲಿನಲ್ಲಿ ಬ್ರಿಟಿಷ್ ಪಡೆಗಳನ್ನು ಕೇಂದ್ರೀಕರಿಸಲಾಯಿತು ಮತ್ತು ಮೂಲಖಂಡ್‌ನ ತಪ್ಪಲಿನ ದರ್ಗಾಯ್‌ವರೆವಿಗೆ, ಖೈಬರ್ ಕಣಿವೆಯ ಆರಂಭದ ಜಾಮ್ರುದ್‌ನ ವರೆವಿಗೆ, ಕುರ್ರಂ ಕಣಿವೆಯ ಮುಖದ ತಾಲ್‌ವರೆವಿಗೆ ರೈಲು ಮಾರ್ಗಗಳನ್ನು ಹಾಕಲಾಯಿತು. ಇಡೀ ಸಮಯದಲ್ಲಿ ಲಾರ್ಡ್ ಕರ್ಜನ್, ಗುಡ್ಡಗಾಡು ಜನರು ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಮಿತಿಹಾಕಿ ನಿರ್ಬಂಧ ವಿಧಿಸುವುದರ ಬಗ್ಗೆ ಎಚ್ಚರ ವಹಿಸಿದ್ದ ಮತ್ತು ಪ್ರಮುಖ ಪಂಗಡಗಳು ಶಾಂತಿ ಸಮಾಧಾನಗಳಿಂದಿರಲು ಪ್ರೋತ್ಸಾಹಿಸಿದ ಮತ್ತು ನಿಯತ ಅವಧಿಗಳಲ್ಲಿ ಅವರಿಗೆ ಭತ್ಯೆಗಳನ್ನು ನೀಡುವುದರ ಮೂಲಕ ಅಪರಾಧಗಳನ್ನು ತಡೆಗಟ್ಟಿದ.

ಹಾಗೆಯೇ ಬ್ರಿಟಿಷ್ ಭಾರತದ ವಿದೇಶಿ ವಿನಿಮಯ ಆಫ್‌ಘಾನಿಸ್ತಾನ, ಪರ್ಷಿಯಾ, ಈಶಾನ್ಯ ಸರಹದ್ದು ರಾಜ್ಯಗಳಾದ ಟಿಬೇಟ್, ಅಸ್ಸಾಂ ಮತ್ತು ಬರ್ಮಾ ದೇಶಗಳೊಂದಿಗೆ ಸಂಬಂಧ ಹೊಂದಿದ್ದರು.

## 91.4 ಸಾರ್ವಜನಿಕ ಸೇವೆಗಳು

ಇಪ್ಪತ್ತನೇ ಶತಮಾನದ ಪ್ರಾರಂಭದ ವರ್ಷಗಳಲ್ಲಿ ಭಾರತೀಯರು ಸಾರ್ವಜನಿಕ ಸೇವೆಗಳಲ್ಲಿ ಹೆಚ್ಚಿನ ಭಾಗಕ್ಕಾಗಿ ಚಳುವಳಿ ಮುಂದುವರಿಸಿದರು. 1912 ರ ಸೆಪ್ಟೆಂಬರ್‌ನಲ್ಲಿ ಭಾರತದಲ್ಲಿ ಸಾರ್ವಜನಿಕ ಸೇವೆಗಳ ಬಗ್ಗೆ ಲಾರ್ಡ್ ಐಲಿಂ ಗೌಟನ್ ಅಧ್ಯಕ್ಷತೆಯಲ್ಲಿ ಒಂದು ರಾಯಲ್ ಕಮೀಷನ್ ಅನ್ನು ನೇಮಿಸಲಾಯಿತು. ಜಿ.ಕೆ. ಗೋಖಲೆ, ಲಾರ್ಡ್ ರೋನಾಲ್ಡ್‌ಷೇ (ಆನಂತರ ಲಾರ್ಡ್ ಜಿಟ್ ಲ್ಯಾಂಡ್) ಸರ್ ವ್ಯಾಲಂಟೈನ್ ಫಿರೋಲ್, ರ್‍ಯಾಮ್‌ಸೇ ಮ್ಯಾಕ್‌ಡೊನಾಲ್ಡ್, ಹರ್ಬರ್ಟ್ ಫಿಷರ್ (ಆನಂತರ ಆಕ್ಸ್‌ಫರ್ಡಿನ ನ್ಯಾಲೇಜಿನ ವಾರ್ಡನ್) ಮತ್ತು ಸರ್ ಅಬ್ದುರ್ ರಹೀಮತ್ - ಇವರು ಕಮೀಷನ್ನಿನ ಸದಸ್ಯರಲ್ಲಿ ಸೇರಿದ್ದರು. ಮೊದಲನೆಯ ಮಹಾಯುದ್ಧದ ಆರಂಭದಿಂದಾಗಿ ಈ ಆಯೋಗದ ವರದಿಯ ಪ್ರಕಟಣೆಯನ್ನು 1917 ರವರೆಗೆ ಮುಂದೂಡಲಾಯಿತು. ಲಂಡನ್ ಪರೀಕ್ಷೆಯ ಮೂಲಕ ಐ.ಸಿ. ಎಸ್‌ಗೆ ಭಾರತೀಯರನ್ನು ನೇಮಕ ಮಾಡಿಕೊಳ್ಳುವುದರ ಜೊತೆಗೆ, ಉನ್ನತ ಸಿವಿಲ್ ಸರ್ವೀಸ್ ಹುದ್ದೆಗಳಲ್ಲಿ ಶೇ. 25 ಭಾಗಕ್ಕೆ ಭಾರತೀಯರನ್ನು ಭಾಗಶಃ ನೇರ ಆಯ್ಕೆಯಿಂದಲೂ ಭಾಗಶಃ ಕೆಳವರ್ಗದ ಸರ್ವೀಸ್‌ನಲ್ಲಿರುವವರಿಗೆ ಬಡ್ತಿ ನೀಡಿ ಭರ್ತಿ ಮಾಡಬೇಕೆಂದೂ ಅದು ಶಿಫಾರಸ್ಸು ಮಾಡಿತು. ಈ ಯೋಜನೆ ಕಾರ್ಯ ಸಾಧ್ಯವಾಗಲು ಸಿವಿಲಿಯನ್ ಹುದ್ದೆಗಳಿಗೆ ನೇಮಿಸಲು ಭಾರತದಲ್ಲಿ ಒಂದು ಪರೀಕ್ಷೆ ನಡೆಸಬೇಕೆಂದೂ ಅದು ಶಿಫಾರಸ್ಸು ಮಾಡಿತು. ಈ ರೀತಿ ಸುಮಾರು ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ಭಾರತೀಯರು ಒತ್ತಾಯ ಪಡಿಸುತ್ತಿದ್ದುದಕ್ಕೆ ಸ್ವಲ್ಪಮಟ್ಟಿಗೆ ಬದಲಾದ ಸಮ್ಮತಿ ದೊರಕಿತು.

ಇಂಡಿಯನ್ ಸಿವಿಲ್ ಸರ್ವೀಸ್‌ನ ಭಾರತೀಕರಣದ ಪ್ರಶ್ನೆಯ ಬಗ್ಗೆ ಐಲಿಂಗ್‌ಟನ್ ಆಯೋಗಕ್ಕಿಂತ ಮಾಂಟೆಗ್ಯೂ-ಚೆಲ್ಸ್‌ಫರ್ಡ್ ವರದಿಯ ಲೇಖಕರು ಹೆಚ್ಚು ಉದಾರ ಹಾಗೂ ಸಹಾನುಭೂತಿ ದೃಷ್ಟಿಕೋನ ತಳೆದರು. ಅದರ ಪ್ರಸ್ತಾಪಗಳು ಹೀಗಿದ್ದುವು:

(1) "ಉನ್ನತ ಹುದ್ದೆಗಳಲ್ಲಿ ಶೇ. 33 ಭಾಗಕ್ಕೆ ಭಾರತದಲ್ಲಿಯೇ ನೇಮಕ ಮಾಡಿಕೊಂಡು ಈ ಶೇಕಡ ಪ್ರಮಾಣವನ್ನು ವರ್ಷಕ್ಕೆ ಶೇ, 11 ಅಥವಾ 12 ರ ಪ್ರಮಾಣದಲ್ಲಿ ಹೆಚ್ಚಿಸಬೇಕು. ಈ ಕ್ರಮವನ್ನು ಒಂದು ಆಯೋಗ ಪುನರ್ ವಿಮರ್ಶಿಸುವವರೆಗೂ ಮುಂದುವರಿಸಬೇಕು.

(2) ನೇಮಕಗಳಲ್ಲಿ ಇರುವ ಎಲ್ಲ ರೀತಿಯ ಜನಾಂಗ ಭೇದಗಳನ್ನು ರದ್ದು ಮಾಡಬೇಕು. ಮತ್ತು

(3) ಯುರೋಪಿಯನ್ನರಿಗೆ ಮತ್ತು ಭಾರತೀಯರಿಗೆ ಒಂದೇ ರೀತಿಯ ಪ್ರವೇಶಾವಕಾಶವಿರುವ, ಇಂಗ್ಲೆಂಡಿನಲ್ಲಿ ಆಯ್ಕೆ ಮಾಡಲಾಗುವ ಸಾರ್ವಜನಿಕ ಸೇವೆಯ ಸಕಾಲ ಹುದ್ದೆಗಳಿಗೂ ಭಾರತದಲ್ಲಿಯೂ ನೇಮಕದ ಒಂದು ವ್ಯವಸ್ಥೆ ಇರಬೇಕು. ಭಾರತೀಯರನ್ನು ನೇಮಕ ಮಾಡಿಕೊಳ್ಳುವ ವಿಷಯದಲ್ಲಿ ಮಾಂಟೆಗ್ಯೂ-ಚೆಲ್ಸ್ಮ್ ಫರ್ಡ್ ವರದಿಯಲ್ಲಿ ಸೂಚಿಸಲಾಗಿದ್ದ ನೀತಿಯನ್ನೇ ಸುಮಾರು ನಾಲ್ಕು ವರ್ಷಗಳವರೆಗೆ ಅನುಸರಿಸಲಾಯಿತು. ಆದರೆ ಉನ್ನತ ಸೇವೆಗಳ ಸದಸ್ಯರು ಹುದ್ದೆಗಳಲ್ಲಿ ಹೆಚ್ಚುತ್ತಿದ್ದ ಭಾರತೀಕರಣದಿಂದ ಕೆರಳಿದರು. ಹಾಗಾಗಿ ಮಾಂಟೆಗ್ಯೂ-ಚೆಲ್ಸ್ಮ್ ಫರ್ಡ್ ವರದಿಯ ಶಿಫಾರಸ್ಸಿಗನುಗುಣವಾಗಿ, ಕೌನ್ಸಿಲ್‌ನಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಒಂದು ಯೋಜನೆಯನ್ನು ಜಾರಿಗೆ ತಂದನು. ಈ ಯೋಜನೆಯ ಪ್ರಕಾರ 1920 ರ ಜನವರಿ 1 ರ ಮೊದಲು ಆಯ್ಕೆಗೊಂಡಿದ್ದು ಭಾರತ ಸರ್ಕಾರದ ಖಾಯಂ ಸೇವೆಯಲ್ಲಿಲ್ಲದ ಅಖಿಲ ಭಾರತೀಯ ಅಧಿಕಾರಿಗಳು ಸಾಮಾನ್ಯ ಸೇವಾ ಅವಧಿ ಪೂರ್ಣಗೊಳ್ಳುವ ಮೊದಲೇ, ಅವರ ಸೇವಾವಧಿಗನುಗುಣವಾದ ವಿಶ್ರಾಂತಿ ವೇತನದೊಡನೆ ನಿವೃತ್ತಿ ಹೊಂದಲು ಅನುಮತಿ ನೀಡಲಾಯಿತು.

ಆದರೆ ಸೇವಾ ಹುದ್ದೆಗಳ ಬಗ್ಗೆ ಕೆಲವು ತೊಂದರೆಗಳು ಇನ್ನೂ ಇದ್ದವು. ಈ ತೊಂದರೆಗಳನ್ನು ಪರಿಹರಿಸಲು ಒಂದು ರಾಯಲ್ ಆಯೋಗವನ್ನು 1923 ರ ಜೂನ್‌ನಲ್ಲಿ ರಚಿಸಲಾಯಿತು. ಫಾರ್ ಹ್ಯಾಮ್‌ನ ಲಾರ್ಡ್ ಲೀ ಇದರ ಅಧ್ಯಕ್ಷನಾಗಿದ್ದನು. ಲೀ ಆಯೋಗ 1924 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಆಯೋಗ ಮಾಡಿದ್ದ ಶಿಫಾರಸ್ಸುಗಳ ಪೈಕಿ ಹೆಚ್ಚಿನವನ್ನು ಸರ್ಕಾರ ಅಂಗೀಕರಿಸಿ ಕಾರ್ಯರೂಪಕ್ಕೆ ತಂದಿತು. ಇಂಡಿಯನ್ ಸಿವಿಲ್ ಸರ್ವೀಸ್, ಇಂಡಿಯನ್ ಪೋಲೀಸ್ ಸರ್ವೀಸ್, ಸರ್ವೀಸ್ ಆಫ್ ಇಂಜಿನಿಯರ್ಸ್‌ನ ನೀರಾವರಿ ವಿಭಾಗ ಮತ್ತು ಇಂಡಿಯನ್ ಫಾರೆಸ್ಟ್ ಸರ್ವೀಸ್‌ನ ಅಖಿಲ ಭಾರತೀಯ ಅಧಿಕಾರಿಗಳನ್ನು ಕೌನ್ಸಿಲಿನಲ್ಲಿನ ಸೆಕ್ರೆಟರಿ ಆಫ್ ಸ್ಟೇಟ್ ನೇಮಕ ಮಾಡಿ ನಿಯಂತ್ರಿಸಬೇಕು. ಇಂಡಿಯನ್ ಮೆಡಿಕಲ್ ಸರ್ವೀಸ್ ಒಂದನ್ನು ಬಿಟ್ಟು ಉಳಿದ ವರ್ಗಾಹಿತ ವಿಭಾಗಗಳ ಸೇವಾ ಹುದ್ದೆಗಳನ್ನು ಪ್ರಾಂತೀಯ ಸರ್ಕಾರಗಳೇ ನಿಯಂತ್ರಿಸಬೇಕು ಎಂದು ಆಯೋಗ ಶಿಫಾರಸ್ಸು ಮಾಡಿತ್ತು. ಪ್ರತಿಯೊಂದು ಪ್ರಾಂತವೂ ತನ್ನ ಸಾರ್ವಜನಿಕ ವೈದ್ಯಕೀಯ ಇಲಾಖೆಯಲ್ಲಿ ಭಾರತದಲ್ಲಿನ ಸೇನಾ ವೈದ್ಯ ವಿಭಾಗ ಎರವಲು ನೀಡುವ ಕೆಲವು ಮಂದಿ ಅಧಿಕಾರಿಗಳನ್ನು ನೇಮಿಸಿಕೊಳ್ಳಬೇಕಿತ್ತು. ಇನ್ನೂ ಸೆಕ್ರೆಟರಿ ಆಫ್ ಸ್ಟೇಟಸ್‌ನಿಂದಲೇ ನಿಯಂತ್ರಣಗೊಳ್ಳುತ್ತಿದ್ದ ಸೇವಾ ಹುದ್ದೆಗಳ ಭಾರತೀಕರಣಕ್ಕೆ ಸಂಬಂಧಿಸಿದಂತೆ ಆಯೋಗ ಮಾಡಿದ ಶಿಫಾರಸ್ಸು ಎಂದರೆ ಅಧಿಕಾರಿಗಳ ಪೈಕಿ ಶೇ. 20 ಭಾಗವನ್ನು ಪ್ರಾಂತೀಯ ಸಿವಿಲ್ ಸರ್ವೀಸ್‌ನ ನೌಕರರಿಗೆ ಬಡ್ತಿ ನೀಡುವುದರ ಮೂಲಕ ಮತ್ತು ಉಳಿದ ಶೇ. 80 ಭಾಗದಲ್ಲಿ ಅರ್ಧ ಭಾಗ ಭಾರತೀಯರೂ ಅರ್ಧಭಾಗ ಬ್ರಿಟಿಷರೂ ಇರುವುದು ಎಂದಿತ್ತು. ಈ ನೀತಿಯನ್ನು ಅನುಸರಿಸುವುದರಿಂದ 1939 ರ ವೇಳೆಗೆ ಉನ್ನತ ಸಿವಿಲ್ ಸರ್ವೀಸ್ ಹುದ್ದೆಗಳಲ್ಲಿ ಯುರೋಪಿಯನ್ನರು ಮತ್ತು ಭಾರತೀಯರು ಸಮ ಸಂಖ್ಯೆಯಲ್ಲಿ ಇರುವುದು ಎಂದು ಗಣಿಸಲಾಯಿತು. ಆದರೆ ಈ ಲೆಕ್ಕಾಚಾರ ತಪ್ಪಾಗಿತ್ತು ಮತ್ತು ಸೈಮನ್ ಆಯೋಗ 1939 ರ ಜನವರಿ 1 ರ ವೇಳೆಗೆ ಉನ್ನತ ಸಿವಿಲ್ ಸರ್ವೀಸ್‌ನಲ್ಲಿ 643 ಭಾರತೀಯರಿಗೆ ಪ್ರತಿಯಾಗಿ 715 ಯುರೋಪಿಯನ್ನರು ಇರುವರು ಎಂಬುದನ್ನು ಸೂಚಿಸಿತು. 1919 ರ ಭಾರತ ಸರ್ಕಾರದ ಕಾಯ್ದೆ ಕಮೀಷನನ್ನು (ಸಾರ್ವಜನಿಕ ಸೇವಾ ಆಯೋಗ) ಆರಂಭಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಐವರು ಪೂರ್ಣ ಕಾಲಿಕ ಅಧಿಕಾರಿಗಳಿಂದ ಕೂಡಿದ ಅಂಥ ಆಯೋಗವನ್ನು 1925 ರಲ್ಲಿ ರಚಿಸಲಾಯಿತು. ಅಲ್ಲದೆ 1922 ರ ತರುವಾಯ ಇಂಡಿಯನ್ ಸಿವಿಲ್ ಸರ್ವೀಸ್‌ನ ಕೆಲವು ಅಧಿಕಾರಿಗಳನ್ನು ಪ್ರತಿ ವರ್ಷ ಭಾರತದಲ್ಲಿ ನಡೆಸುತ್ತಿದ್ದ ಸ್ಪರ್ಧಾಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತಿತ್ತು.

ಭಾರತ ಸರ್ಕಾರದ 1939 ರ ಕಾಯ್ದೆಯ 10 ನೇ ಭಾಗ ಪ್ರಾಂತಗಳಲ್ಲಿ ಮತ್ತು ಸಲಹೆ ಮಾಡಲಾಗಿದ್ದ ಫೆಡರೇಷನ್ನಿನಲ್ಲಿ ಪೌರ ಹಾಗೂ ಸೇನಾ ಅಧಿಕಾರಿಗಳ ಹಕ್ಕು ಮತ್ತು ಸ್ಥಾನಮಾನಗಳನ್ನು ವಿವರಿಸಿತ್ತು ಮತ್ತು ಅಸ್ತಿತ್ವದಲ್ಲಿದ್ದ ವೇತನ, ಬಡ್ತಿ, ರಜೆ, ನಿವೃತ್ತಿ ವೇತನ ಇತ್ಯಾದಿಗಳ ಬಗ್ಗೆ ಭರವಸೆ ನೀಡಿತು. ಅದು ಫೆಡರಲ್ ಪಬ್ಲಿಕ್ ಸರ್ವೀಸ್ ಕಮೀಷನ್ ಮತ್ತು ಪ್ರಾಂತೀಯ ಪಬ್ಲಿಕ್ ಸರ್ವೀಸ್ ಕಮೀಷನ್‌ಗಳ ಸ್ಥಾಪನೆಗೆ ಅವಕಾಶ ನೀಡಿತು; ಆದರೆ ಎರಡು ಅಥವಾ ಮೂರು ಪ್ರಾಂತಗಳು "ಒಂದೇ ಕಮೀಷನ್ನಿನ ಒಂದು ಗುಂಪಿಗೆ ಅಥವಾ ಎಲ್ಲ ಪ್ರಾಂತಗಳೂ ಒಂದೇ ಕಮೀಷನ್ನಿನ ಪ್ರಯೋಜನ ಪಡೆಯಬಹುದೆಂದು ಅಂಗೀಕರಿಸಬಹುದಿತ್ತು". ಆಯೋಗದ ಕಾರ್ಯಗಳು ಸಂಪೂರ್ಣವಾಗಿ ಸಲಹಾ ರೀತಿಯಾಗಿದ್ದವು. ಅವರು ಕೇವಲ ಹೆಸರುಗಳ ಬಗ್ಗೆ ಶಿಫಾರಸ್ಸು ಮಾಡಬೇಕಿತ್ತು. ಮಂತ್ರಿಗಳು ಅವನ್ನು ಕೆಲವು ಸಂದರ್ಭಗಳಲ್ಲಾದರೂ ಸಮ್ಮತಿಸಬಹುದಿತ್ತು ಅಥವಾ ತಿರಸ್ಕರಿಸಬಹುದಿತ್ತು.

## 91.5 ಉಪಸಂಹಾರ

ಹೀಗೆ ಬ್ರಿಟಿಷ್ ಭಾರತದ ಸರ್ಕಾರವು ಲೋಕೋಪಯೋಗಿ ಕಾರ್ಯಗಳಿಗಾಗಿ, ಆದ್ಯತೆಯನ್ನು ನೀಡಿದ್ದು, ಇದಕ್ಕಾಗಿ ಬ್ರಿಟಿಷ್ ಭಾರತ ಸರ್ಕಾರ ಇಂತಹ ಹಲವಾರು ಸುಧಾರಣೆಗಳಿಗಾಗಿ ತಳಹದಿ ಹಾಕಿತ್ತು.

## 91.6 ಮಾದರಿಯ ಪ್ರಶ್ನೆಗಳು

1. ಬ್ರಿಟಿಷ್ ಭಾರತದಲ್ಲಿ ಸಾರ್ವಜನಿಕ ಸೇವೆಗಳ ಬೆಳವಣಿಗೆಯನ್ನು ವಿವರಿಸಿ.
2. ಬ್ರಿಟಿಷ್ ಭಾರತದಲ್ಲಿ ಆರ್ಥಿಕ ವ್ಯವಸ್ಥೆಯ ಮೇಲೆ ರೈಲ್ವೆಗಳು ಬೀರಿದ ಪ್ರಭಾವವನ್ನು ಚರ್ಚಿಸಿ.

## 91.7 ಪರಾಮರ್ಶನ ಕೃತಿಗಳು


1. Sumith Sarkar : Modern India
2. R.C. Majumdar : Advanced History of India.

## ಟಿಪ್ಪಣಿಗಳು

# ಘಟಕ - 92

## ನ್ಯಾಯಾಂಗ ಪದ್ಧತಿ - ಭಾರತ ಸರ್ಕಾರ

92.0 ಪ್ರಸ್ತಾವನೆ

92.1 ನ್ಯಾಯಾಂಗ ಪದ್ಧತಿ

92.2 ಪೋಲೀಸ್ ಮತ್ತು ಜೈಲುಗಳು

92.3 ಉಪಸಂಹಾರ

92.4 ಮಾದರಿಯ ಪ್ರಶ್ನೆಗಳು

92.5 ಪರಾಮರ್ಶನ ಕೃತಿಗಳು

## 92.0 ಪ್ರಸ್ತಾವನೆ

ಭಾರತ ಸರ್ಕಾರದ ನ್ಯಾಯಾಂಗ ಪದ್ಧತಿಯು ಬಹಳ ವಿಶಿಷ್ಟವಾದಂತಹ ಲಕ್ಷಣಗಳಿಂದ ಕೂಡಿತ್ತು. ಅದು ತನ್ನದೇ ಆದಂತಹ ನ್ಯಾಯಾಂಗ ವ್ಯವಸ್ಥೆಯನ್ನು ರೂಪಿಸಿತ್ತು. ಆ ವ್ಯವಸ್ಥೆ ಈ ಕೆಳಗಿನಂತಿದೆ.

## 92.1 ನ್ಯಾಯಾಂಗ ಪದ್ಧತಿ

1861 ರಲ್ಲಿ ಕಲ್ಕತ್ತಾ, ಮದ್ರಾಸ್ ಮತ್ತು ಬೊಂಬಾಯಿಗಳಲ್ಲಿ ಹೈಕೋರ್ಟ್‌ಗಳ ಸ್ಥಾಪನೆಯಾದವು. ಹಿಂದೆ ಇದ್ದ ಸುಪ್ರೀಂಕೋರ್ಟ್‌ಗಳು ಮತ್ತು ಸದರ್ ನ್ಯಾಯಾಲಯಗಳನ್ನು ಇದರಲ್ಲಿಯೇ ಸೇರಿಸಲಾಯಿತು. ಹೈಕೋರ್ಟ್‌ಗಳ ನ್ಯಾಯಾಧೀಶರ ಪೈಕಿ ಕನಿಷ್ಟ ಪಕ್ಷ ಮೂರನೆ ಒಂದು ಭಾಗದವರನ್ನು ಭಾರತದಲ್ಲಿ ಚಕ್ರವರ್ತಿಯ ಸಿವಿಲ್ ಸರ್ವೀಸ್‌ನಿಂದ (Her Majesty's Civil Service) ನೇಮಕ ಮಾಡಬೇಕಿತ್ತು. ಮೂರನೆ ಒಂದು ಭಾಗವನ್ನು ಇಂಗ್ಲೆಂಡಿನ ಬ್ಯಾರಿಸ್ಟರುಗಳು ಅಥವಾ ಸ್ಕಾಟ್ಲೆಂಡಿನ ಅಡ್ವೋಕೇಟರ ಪೈಕಿ ನೇಮಕ ಮಾಡಬೇಕಿತ್ತು ಮತ್ತು ಉಳಿದವರನ್ನು ಹೈಕೋರ್ಟಿನ ನ್ಯಾಯವಾದಿಗಳು ಅಥವಾ ಅಧೀನ ನ್ಯಾಯಾಲಯಗಳ ಅಧಿಕಾರಿಗಳ ಪೈಕಿ ನೇಮಕ ಮಾಡಬಹುದಿತ್ತು. ಹೈಕೋರ್ಟಿನ ಮುಖ್ಯ ನ್ಯಾಯಾಧೀಶರನ್ನು ಇಂಗ್ಲೆಂಡಿನ ಬ್ಯಾರಿಸ್ಟರುಗಳು ಅಥವಾ ಸ್ಕಾಟ್ಲೆಂಡಿನ ಅಡ್ವೋಕೇಟರ ಪೈಕಿ ನೇಮಕ ಮಾಡಬೇಕಿತ್ತು. 1911 ರ ಭಾರತೀಯ ಹೈಕೋರ್ಟ್‌ಗಳ ಕಾಯ್ದೆಯ ಆಧಾರದ ಮೇಲೆ ಪಾಟ್ನಾ, ಲಾಹೋರ್ ಮತ್ತು ರಂಗೂನ್‌ಗಳಲ್ಲಿ ಹೈಕೋರ್ಟ್‌ಗಳ ಸ್ಥಾಪನೆಯಾದವು. ನ್ಯಾಯ ಸ್ಥಾನದಿಂದ ಪೌರ ಅಂಶವನ್ನು ತೆಗೆದು ಹಾಕಬೇಕೆಂದು ಭಾರತೀಯ ಜನಾಭಿಪ್ರಾಯ ಒತ್ತಾಯ ಮಾಡಿತ್ತು. ಆದರೆ ಭಾರತ ಸರ್ಕಾರದ 1935 ರ ಕಾಯ್ದೆಯ ಅಂಶ ಈ ಒತ್ತಾಯವನ್ನು ಅಷ್ಟಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಅದು ಹಳೆಯ ಪ್ರಮಾಣಾನುಗುಣ ವ್ಯವಸ್ಥೆಯನ್ನು ರದ್ದುಗೊಳಿಸಿತು ಮತ್ತು ಅನುಕೂಲಕ್ಕನುಗುಣವಾಗಿ ಈ ಮೂರು ವರ್ಗಗಳಿಂದ - ಆದರೆ "ಅತ್ಯಗತ್ಯವಾಗಿ ಹಳೆಯ ಪ್ರಮಾಣಾನುಗುಣದಲ್ಲಲ್ಲ" - ನ್ಯಾಯಾಧೀಶರನ್ನು ನೇಮಕ ಮಾಡುವುದು ಎಂದು ವಿಧಿಸಿತ್ತು. ಹಾಗಾಗಿ ಇಂಡಿಯನ್ ಸಿವಿಲ್ ಸರ್ವೀಸಿನ ಸದಸ್ಯರಿಗೆ ಹಿಂದೆ ಇದ್ದುದಕ್ಕಿಂತ ಈ ವಿಷಯದಲ್ಲಿ ಈಗ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿತು. ಮುಖ್ಯ ನ್ಯಾಯಾಧೀಶರನ್ನು ಬ್ಯಾರಿಸ್ಟರುಗಳು ಅಥವಾ ಅಡ್ವೋಕೇಟರಿಂದಲೇ ಆಯ್ಕೆ ಮಾಡಬೇಕೆಂದು ಹಳೆಯ ನಿಯಮವನ್ನು ಈಗ ಅವರನ್ನು ಹೈಕೋರ್ಟಿನ ನ್ಯಾಯವಾದಿಗಳಿಂದ ಇಲ್ಲವೆ ಇಂಡಿಯನ್ ಸಿವಿಲ್ ಸರ್ವೀಸಿನ ಅಧಿಕಾರ ವರ್ಗದಿಂದ ಆಯ್ಕೆ ಮಾಡಬಹುದು ಎಂಬ ಮಟ್ಟಿಗೆ ಮಾರ್ಪಾಟುಗೊಳಿಸಲಾಯಿತು.

ಪ್ರಸ್ತಾಪಿತ ಫೆಡರೇಷನ್‌ನಿಂದಾಗಿ ನ್ಯಾಯಾಂಗದಲ್ಲಿ ಮತ್ತೊಂದು ಬದಲಾವಣೆ ಅಗತ್ಯವಾಯಿತು. ಭಾರತ ಸರ್ಕಾರದ 1935 ರ ಕಾಯ್ದೆಯ ಪ್ರಕರಣ 200 ಮತ್ತು ಪ್ರಕರಣ 203 ಫೆಡರಲ್ ಕೋರ್ಟಿನ ಸ್ಥಾಪನೆಗೆ ಅವಕಾಶ ಕಲ್ಪಿಸಿತ್ತು. ಈ ನ್ಯಾಯಾಲಯ ದೆಹಲಿಯಲ್ಲಿದ್ದು ಇದರಲ್ಲಿ ಒಬ್ಬ ಮುಖ್ಯ ನ್ಯಾಯಾಧೀಶ ಹಾಗೂ ಅದಕ್ಕಿಂತ ಹೆಚ್ಚಿಲ್ಲದಂತೆ ಕಿರಿಯ ನ್ಯಾಯಾಧೀಶರು ಇರಬೇಕಿತ್ತು. ನ್ಯಾಯಾಧೀಶರನ್ನು ಚಕ್ರವರ್ತಿ ನೇಮಕ ಮಾಡುತ್ತಿದ್ದ. ನ್ಯಾಯಾಧೀಶರು ಅರವತ್ತೈದು ವರ್ಷಗಳವರೆಗೆ ಅಧಿಕಾರದಲ್ಲಿರುತ್ತಿದ್ದರು. ಪ್ರಾಂತ - ಪ್ರಾಂತಗಳ ನಡುವೆ, ಒಂದು ಪ್ರಾಂತ ಹಾಗೂ ಒಂದು ಒಕ್ಕೂಟದ ರಾಜ್ಯದ ನಡುವೆ ಮತ್ತು ಒಂದು ಪ್ರಾಂತ ಹಾಗೂ ಒಕ್ಕೂಟದ ಅಧಿಕಾರ ವರ್ಗದವರ ನಡುವೆ ಸಂವಿಧಾನಾತ್ಮಕ ವಿವಾದಗಳಲ್ಲಿ ಫೆಡರಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯಿದ್ದಿತು. ಭಾರತ ಸರ್ಕಾರದ ಕಾಯ್ದೆ ಅಥವಾ ಅಧರ ಅಧೀನದಲ್ಲಿ ಕೌನ್ಸಿಲಿನಲ್ಲಿ ಮಡಲಾದ ಯಾವುದೇ ಆದೇಶದ ವಿವರಣೆಯ ವ್ಯಾಖ್ಯಾನಗಳಿಗೆ ಸಂಬಂಧಿಸಿದ ನ್ಯಾಯದ ಮೂಲಭೂತ ಪ್ರಶ್ನೆಗಳಿಗೆ ಸಂಬಂಧಿಸಿದುದರ ಬಗ್ಗೆ ಅಫೀಲು ಎಂಬ ಬಗ್ಗೆ ಹೈಕೋರ್ಟ್ ಪ್ರಮಾಣಪಡಿಸಿದಲ್ಲಿ ಅದು ಹೈಕೋರ್ಟಿನ ಅಫೀಲುಗಳ ಬಗ್ಗೆಯೂ ವಿಚಾರಣೆ ನಡೆಸುತ್ತಿತ್ತು. 1937 ರ ಅಕ್ಟೋಬರ್ 1 ರಂದು ಫೆಡರಲ್ ಕೋರ್ಟಿನ ರಚನೆಯಾಯಿತು.

## 92.2 ಪೋಲೀಸ್ ಮತ್ತು ಜೈಲುಗಳು

1861 ಪೋಲೀಸ್ ಕಾಯ್ದೆಯಿಂದ ಸ್ಥಾಪಿತವಾದ ಪೋಲೀಸ್ ವ್ಯವಸ್ಥೆ ಕಾರ್ಯಾಚರಣೆಯಲ್ಲಿ ತೀವ್ರ ದೋಷಗಳಿಂದ ಕೂಡಿತ್ತು. ಇದಕ್ಕೆ ಕಾರಣ ಶಾಂತಿ ಮತ್ತು ಶಿಸ್ತನ್ನು ಪಾಲಿಸುವ ಜವಾಬ್ದಾರಿಯುತ ಕರ್ತವ್ಯವನ್ನು ಸಾಕಷ್ಟು ತರಪೇತಿ ಪಡೆಯದ ಜನರಿಗೆ ವಹಿಸಿದುದರಿಂದ ಅದನ್ನು ಬೇಜವಾಬ್ದಾರಿ ವ್ಯಕ್ತಿಗಳಿಗೆ ವಹಿಸಿದಂತಾಗಿತ್ತು. ಪೋಲೀಸ್ ಆಡಳಿತದ ಸ್ಥಿತಿಗತಿಗಳನ್ನು ಪರಿಶೀಲಿಸಲು 1902 ರಲ್ಲಿ ಒಂದು ಪೋಲೀಸ್ ಆಯೋಗವನ್ನು ನೇಮಕ ಮಾಡಲಾಯಿತು. ಪೋಲೀಸ್ ವ್ಯವಸ್ಥೆಯ ವಿವಿಧ ಅಂಶಗಳಿಗೆ ಸಂಬಂಧಿಸಿದಂತೆ

ಆಯೋಗ ಅನೇಕ ಶಿಫಾರಸ್ಸುಗಳನ್ನು ಮಾಡಿತು. ಈ ಶಿಫಾರಸ್ಸುಗಳನ್ನು ಬಹುಮಟ್ಟಿಗೆ ಅಲ್ಲಿ ಇಲ್ಲಿ ಸಣ್ಣ ಪುಟ್ಟ ಮಾರ್ಪಾಟುಗಳೊಡನೆ ಅಂಗೀಕರಿಸಲಾಯಿತು. ಈ ಆಯೋಗ ವಿಶೇಷ ಪೋಲೀಸ್ ಪಡೆಯನ್ನು ಸೃಷ್ಟಿಸಿತು. ಇದು ಅಪರಾಧ ತನಿಖಾ ವಿಭಾಗ (ಕ್ರಿಮಿನಲ್ ಇನ್ವೆಸ್ಟಿಗೇಷನ್ ಡಿಪಾರ್ಟ್‌ಮೆಂಟ್) ಆಗಿದ್ದು ಪ್ರತಿಯೊಂದು ಪ್ರಾಂತದಲ್ಲೂ ಇದಕ್ಕೆ ವಿಶೇಷ ಹಾಗೂ ಉದ್ಯೋಗನಿರತ ಅಪರಾಧಿಗಳನ್ನು ಪತ್ತೆ ಹಚ್ಚುವ ಕಾರ್ಯವಿದ್ದಿತು. ಇಷ್ಟೇ ಅಲ್ಲದೆ, ಎಲ್ಲ ಪ್ರಾಂತೀಯ ಅಪರಾಧ ತನಿಖಾ ವಿಭಾಗಗಳಿಂದ ಮಾಹಿತಿ ಸಂಗ್ರಹಿಸಿ ಅಂತರ ಪ್ರಾಂತೀಯ ಸಂಪರ್ಕದ ಕಾರ್ಯ ನಿರ್ವಹಿಸಲು ಭಾರತ ಸರ್ಕಾರದ ಗೃಹಶಾಖೆಯಲ್ಲಿ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋವನ್ನು ರೂಪಿಸಲಾಯಿತು.

ನಿಷ್ಪಕ್ಷವಾಗಿ ಹೇಳಬೇಕೆಂದರೆ, ಭಾರತೀಯ ಅಥವಾ ಅಖಿಲ ಭಾರತೀಯ ಪೋಲೀಸ್ ವ್ಯವಸ್ಥೆಯನ್ನೇನೂ ರೂಪಿಸಲಿಲ್ಲ. 1861 ರ ಕಾಯ್ದೆಯಿಂದ ಸ್ಥಾಪನೆಗೊಂಡ ಪೋಲೀಸ್ ಬಹುಮಟ್ಟಿಗೆ ಪ್ರಾಂತೀಯ ವ್ಯವಸ್ಥೆಯಾಗಿತ್ತು. ಸಂಬಂಧಪಟ್ಟ ಸ್ಥಳೀಯ ಸರ್ಕಾರ ಇದರ ಆಡಳಿತ ನೋಡಿಕೊಳ್ಳುತ್ತಿದ್ದು, ಇದು ಕೇಂದ್ರ ಸರ್ಕಾರದ ಸಾಮಾನ್ಯ ಹತೋಟಿಗೆ ಒಳಪಟ್ಟಿರಲಿಲ್ಲ. ಪ್ರತಿಯೊಂದು ಪ್ರಾಂತದಲ್ಲಿ ಪೋಲೀಸು ವ್ಯವಸ್ಥೆಯ ಮುಖ್ಯಸ್ಥನಾಗಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಇದ್ದು ಇಲಾಖೆಯ ಮೇಲೆ ನಿಯಂತ್ರಣ ಅಧಿಕಾರ ಪಡೆದಿದ್ದ. ಪ್ರಾಂತಗಳ ಭಾಗಗಳ ಅಧೀನ ಅಧಿಕಾರವನ್ನು ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ಲುಗಳಿಗೆ ನೀಡಲಾಗಿತ್ತು. ಪ್ರತಿಯೊಂದು ಜಿಲ್ಲೆಯಲ್ಲಿ ಇಲಾಖೆಯ ಮುಖ್ಯನಾಗಿ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್‌ನನ್ನು ನೇಮಕ ಮಾಡಲಾಗುತ್ತಿತ್ತು. ಇವನ ಅಧೀನದಲ್ಲಿ ಉಪ ವಿಭಾಗಗಳು ಅಥವಾ ಠಾಣಾಗಳು ಎಂದು ಕರೆಯಲಾಗುತ್ತಿದ್ದು ವಿಭಾಗಗಳ ಮೇಲ್ವಿಚಾರಣೆಯಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್, ಸಬ್‌ಇನ್‌ಸ್ಪೆಕ್ಟರುಗಳು ಮತ್ತು ಕಾನ್‌ಸ್ಟೇಬಲ್‌ಗಳು ಇರುತ್ತಿದ್ದರು. ಗ್ರಾಮಗಳಲ್ಲಿ 'ಚೌಕಿದಾರರು' ಇರುತ್ತಿದ್ದರು. ಇವರಿಗೆ ವೇತನ ನೀಡುತ್ತಿರಲಿಲ್ಲ. ಆದರೆ ಇವರು ಗ್ರಾಮಸ್ಥರಾದ ಇನಾಮನ್ನು ಅಥವಾ ಕಂದಾಯ ರಹಿತ ಭೂಮಿಯನ್ನು ಅಥವಾ ಸರ್ಕಾರದಿಂದ ಸ್ವಲ್ಪ ಹಣವನ್ನು ಪಡೆಯುತ್ತಿದ್ದರು. ಕಲ್ಕತ್ತಾ, ಮದ್ರಾಸು ಮತ್ತು ಬೊಂಬಾಯಿಯಂಥ ಪ್ರೆಸಿಡೆನ್ಸಿ ನಗರಗಳಲ್ಲಿ ಪೋಲೀಸು ಕಮೀಷನರನ ಕೈಕೆಳಗೆ ಒಂದು ಏಕೀಕೃತ ಪೋಲೀಸ್ ಪಡೆಯಿರುತ್ತಿತ್ತು. ಇದು ಪ್ರಾಂತೀಯ ಇನ್‌ಸ್ಪೆಕ್ಟರ್ ಜನರಲ್ಲನ ಅಧೀನದಲ್ಲಿ ಕಾರ್ಯ ನಿರ್ವಹಿಸದೆ ಸರ್ಕಾರದೊಡನೆ ನೇರವಾಗಿ ವ್ಯವಹರಿಸುತ್ತಿದ್ದು, ಶಾಂತಿ ಮತ್ತು ಶಿಸ್ತು ಪಾಲನೆಗೆ, ಇಲಾಖೆಯಲ್ಲಿನ ದಕ್ಷತೆ ಮತ್ತು ತರಪೇತಿಗೆ ಹೊಣೆಯಾಗಿತ್ತು.

ಪೋಲೀಸು ಇಲಾಖೆಯಲ್ಲಿ ಇಂದಿಗೂ ಸಂಪೂರ್ಣವಾದ ಸುಧಾರಣೆಗಳಾಗಬೇಕೆಂಬುದರ ಬಗ್ಗೆ ಸಂದೇಹವಿಲ್ಲ. ಅತ್ಯಗತ್ಯವಾಗಿರುವ ಒಂದು ಅಂಶವೆಂದರೆ, ಅಧಿಕಾರಿಗಳು ತಮ್ಮ ಅಧಿಕಾರವನ್ನು ಹೆಚ್ಚಿಸಿ ವಿವೇಚನೆಯಿಂದ ಚಲಾಸಿಯುವಂತಾಗಲು ಪೋಲೀಸು ಅಧಿಕಾರಿಗಳ "ನೈತಿಕ ಸ್ಥಿತಿ ಮತ್ತು ಯುಕ್ತಿಯನ್ನು" ಸುಧಾರಿಸಲೇಬೇಕಾಗಿದೆ. ಈಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಕ್ಷರಸ್ಥ ಪೋಲೀಸು ಪೇದೆಗಳ ನೇಮಕ ಮಾಡಿಕೊಳ್ಳುವಿಕೆ ಮತ್ತು ಸ್ಥಳೀಯ ಪ್ರದೇಶಗಳ ರಕ್ಷಣೆಗೆ ಗೃಹರಕ್ಷಕ ದಳದವರ ನೇಮಕ ಇವು ಪ್ರೋತ್ಸಾಹಕರ ಅಂಶಗಳಾಗಿವೆ.

1894 ರ ಭಾರತೀಯ ಬಂದೀಖಾನೆಗಳ ಕಾಯ್ದೆಯಿಂದ ಮತ್ತು ಅದರಿಂದ ಭಾರತ ಸರ್ಕಾರ ಹಾಗೂ ಪ್ರಾಂತೀಯ ಸರ್ಕಾರಗಳು ಹೊರಡಿಸಿರುವ ನಿಯಮಗಳಿಂದ, ಈಚಿನ ದಿನಗಳಲ್ಲಿ ಭಾರತದಲ್ಲಿ ಬಂದೀಖಾನೆಗಳ ಆಡಳಿತ ಕ್ರಮಬದ್ಧಗೊಂಡಿದೆ. ಕೇಂದ್ರ ಜಿಲ್ಲಾ ಮತ್ತು ಸಹಾಯಕ ಬಂದೀ ಖಾನೆಗಳು ಎಂಬ ಮೂರು ರೀತಿಯ ಬಂದೀಖಾನೆಗಳನ್ನು ಸ್ಥಾಪಿಸಲಾಯಿತು. ಪ್ರತಿ ಪ್ರಾಂತದಲ್ಲೂ ಜೈಲು ಇಲಾಖೆ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ಲನ ಅಧೀನದಲ್ಲಿರುತ್ತಿತ್ತು. ಈ ಅಧಿಕಾರ ಸಾಮಾನ್ಯವಾಗಿ ಜೈಲುಗಳ ಬಗ್ಗೆ ಅನುಭವ ಪಡೆದ ಇಂಡಿಯನ್ ಮೆಡಿಕಲ್ ಸರ್ವೀಸಿನ ಸದಸ್ಯನಾಗಿರಬೇಕಿತ್ತು. ಕೇಂದ್ರಿಯ ಬಂದೀಖಾನೆಗಳು ಸೂಪರಿಂಟೆಂಡೆಂಟನ ಅಧೀನದಲ್ಲಿರುತ್ತಿದ್ದವು. ಇವನನ್ನು ಸಹ ಅದೇ ಸೇವಾ ವರ್ಗದಿಂದ ನೇಮಕ ಮಾಡಿಕೊಳ್ಳಲಾಗುತ್ತಿತ್ತು ಮತ್ತು ದೊಡ್ಡ ಕೇಂದ್ರೀಯ ಬಂದೀಖಾನೆಗಳಲ್ಲಿ ಇವನಿಗೆ ಸಹಾಯಕರಾಗಿ ಡೆಪ್ಯುಟಿ ಸೂಪರಿಂಟೆಂಡೆಂಟ್‌ಗಳು ಇರುತ್ತಿದ್ದರು. ಜಿಲ್ಲಾ ಬಂದೀಖಾನೆ ಸಿವಿಲ್ ಸರ್ಜನನ ಅಧೀನದಲ್ಲಿರುತ್ತಿತ್ತು. ಇವನ ಅಧೀನದಲ್ಲಿ ಜೈಲರುಗಳು, ಉಪ ಮತ್ತು ಸಹಾಯಕ ಜೈಲರುಗಳು ಹಾಗೂ ವಾರ್ಡರುಗಳ ಸಹಾಯಕ ಸಿಬ್ಬಂದಿಯಿರುತ್ತಿತ್ತು. ಅನೇಕ ಬೃಹತ್ ನಗರಗಳಲ್ಲಿ 1899 ರಿಂದ ಶಿಕ್ಷಣ ಇಲಾಖೆ ನೋಡಿಕೊಳ್ಳುತ್ತಿರುವ ಸುಧಾರಣಾ ಶಾಲೆಗಳಿವೆ.

ಬಂದೀಖಾನೆಗಳ ಆಡಳಿತದ ಸುಧಾರಣೆ ಮಾಡುವ ದೃಷ್ಟಿಯಿಂದ ಭಾರತ ಸರ್ಕಾರ 1919 ರಲ್ಲಿ ಬಂದೀಖಾನೆಗಳ ಸಮಿತಿಯನ್ನು ನೇಮಿಸಿತು. ಈ ಸಮಿತಿ ಭಾರತದ ಬಂದೀಖಾನೆಗಳ ಆಡಳಿತದ ಸಮಗ್ರ ಸರ್ವೇಕ್ಷಣೆ ನಡೆಸಿತು ; ಮತ್ತು "ಹಾಲಿ ಇರುವ ಬಂದೀಖಾನೆಗಳ

ಸ್ಥಳವನ್ನು ಹೆಚ್ಚಿಸುವುದು ಮತ್ತು ಅವುಗಳನ್ನು ಉತ್ತಮಗೊಳಿಸುವುದು; ವಾರ್ಡರುಗಳ ಹುದ್ದೆಗಳಿಗೆ ಉತ್ತಮ ವರ್ಗದವರನ್ನು ನೇಮಕ ಮಾಡಿಕೊಳ್ಳುವುದು, ಸರ್ಕಾರದ ಗ್ರಾಹಕ ಇಲಾಖೆಗಳ ಅಗತ್ಯಗಳನ್ನು ಪೂರೈಸಲು ಬಂದೀಖಾನೆ ಕೈಗಾರಿಕೆಗಳ ಅಭಿವೃದ್ಧಿಯ ಅಗತ್ಯ ಮತ್ತು ಪ್ರಾಮುಖ್ಯ" ಇವುಗಳ ಬಗ್ಗೆ ಗಮನ ನೀಡಿತ್ತು. ಕ್ರಿಮಿನಲ್ ಅಪರಾಧಿಗಳಿಂದ ಸಿವಿಲ್ ಅಪರಾಧಗಳನ್ನು ಬೇರ್ಪಡಿಸುವುದರ ಬಗ್ಗೆ ಮತ್ತು ಬಾಲ ನ್ಯಾಯಾಲಯಗಳ ಸ್ಥಾಪನೆಯ ಬಗ್ಗೆ ಶಿಫಾರಸ್ಸು ಮಾಡಿತು ಮತ್ತು ಈ ವ್ಯವಸ್ಥೆಯ ಸುಧಾರಣಾ ಅಂಶದತ್ತ ವಿಶೇಷ ಗಮನ ಸೆಳೆದಿತ್ತು. ಈ ಶಿಫಾರಸ್ಸುಗಳನ್ನು ಹೆಚ್ಚು ಕಡಿಮೆ ಕಾರ್ಯರೂಪಕ್ಕೆ ತರಲು ಪ್ರಾಂತೀಯ ಸರ್ಕಾರಗಳು ಪ್ರಯತ್ನಿಸಿವೆ.

## 92.3 ಉಪಸಂಹಾರ

ಭಾರತ ಸರ್ಕಾರದ 1919 ರ ಕಾಯ್ದೆಯ ಪ್ರಕಾರ ಬಂದೀಖಾನೆಗಳ ಆಡಳಿತ ಪ್ರಾಂತೀಯ ಸರ್ಕಾರಗಳ ಕ್ಷೇತ್ರಕ್ಕೆ ಸೇರಿತ್ತು. ಆದರೂ ಇದು ಅಖಿಲ ಭಾರತೀಯ ಶಾಸನಕ್ಕೊಳಪಟ್ಟಿತ್ತು. 1937 ರ ಏಪ್ರಿಲ್ 1 ರಿಂದ ಪ್ರಾಂತೀಯ ಸ್ವಾಯತ್ತತೆ ಜಾರಿಗೆ ಬಂದುದರಿಂದ ಬಂದೀಖಾನೆಗಳ ಆಡಳಿತ ಪ್ರಾಂತೀಯ ವಿಷಯವಾಯಿತು ಮತ್ತು ಈ ದೃಷ್ಟಿಯಲ್ಲಿ ಶಾಸಕಾಂಗದ ಅಧಿಕಾರ ಪ್ರಾಂತೀಯ ಸರ್ಕಾರಗಳಿಗೇ ಸೇರಿತು. ಬಂದಿಗಳು ಮತ್ತು ಅಪರಾಧಿಗಳನ್ನು ಒಂದು ಘಟಕದಿಂದ ಮತ್ತೊಂದು ಘಟಕಕ್ಕೆ ವರ್ಗಾಯಿಸುವ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪ್ರಾಂತೀಯ ಸರ್ಕಾರದೊಡನೆ ಸಮ್ಮತಿ ನೀಡುವ ನ್ಯಾಯರೂಪಣೆಯ ಅಧಿಕಾರ ಮಾತ್ರ ಚಲಾಯಿಸುತ್ತಿತ್ತು.

## 92.4 ಮಾದರಿಯ ಪ್ರಶ್ನೆಗಳು

1. ಬ್ರಿಟಿಷ್ ಭಾರತದ ನ್ಯಾಯಾಂಗ ಪದ್ಧತಿಯ ಪ್ರಮುಖ ಲಕ್ಷಣಗಳನ್ನು ಚಿತ್ರಿಸಿ.
2. ಭಾರತದ ನ್ಯಾಯಾಂಗ ವ್ಯವಸ್ಥೆಯ ಮೇಲೆ ಬ್ರಿಟಿಷರ ಕಾನೂನು ಮತ್ತು ಪೋಲೀಸ್ ವ್ಯವಸ್ಥೆ ಬೀರಿದ ಪ್ರಭಾವವನ್ನು ಚರ್ಚಿಸಿ.

## 92.5 ಪರಾಮರ್ಶನ ಕೃತಿಗಳು


1. Sumith Sarkar : Modern India
2. R.C. Majumdar : Advanced History of India

# ಟಿಪ್ಪಣಿಗಳು

# ಘಟಕ - 93

## ಒಕ್ಕೂಟ ಮತ್ತು ಪ್ರಾಂತೀಯ ಸರ್ಕಾರಗಳು 1935 ರ ಕಾಯಿದೆಯ ಕಾರ್ಯಾಚರಣೆ

93.0 ಪ್ರಸ್ತಾವನೆ

93.1 ನೂತನ ಶಾಸನದನ್ವಯ ಸಚಿವ ಸಂಪುಟಗಳು (ಒಕ್ಕೂಟ)

93.2 ನೂತನ ಕಾಯಿದೆಯ ಪ್ರಕಾರ ಸಚಿವ ಸಂಪುಟಗಳ ರಚನೆ (ಕಾಂಗ್ರೆಸ್ ಪ್ರಾಂತ್ಯಗಳು)

93.3 ಪ್ರಾಂತೀಯ ಕಾಂಗ್ರೆಸ್ ಸಂಪುಟಗಳ ಮೇಲೆ ಕೇಂದ್ರದ ಹತೋಟಿ

93.4 ಉಪಸಂಹಾರ

93.5 ಮಾದರಿಯ ಪ್ರಶ್ನೆಗಳು

93.6 ಪರಾಮರ್ಶನ ಕೃತಿಗಳು

## 93.0 ಪ್ರಸ್ತಾವನೆ

1935 ರ ಗವರ್ನಮೆಂಟ್ ಆಫ್ ಇಂಡಿಯಾ ಮಸೂದೆಯಲ್ಲಿ ಬ್ರಿಟಿಷ್ ಇಂಡಿಯಾ ಭಾರತೀಯ ರಾಜ್ಯಗಳೊಂದಿಗೆ ಒಕ್ಕೂಟವಾಗುವುದಕ್ಕೆ ಅವಕಾಶ ಕೊಡುವ ಭಾಗವು ಸತ್ತು ಹುಟ್ಟಿದ ಮಗುವಾಯಿತು. ದುಂಡು ಮೇಜಿನ ಪರಿಷತ್ತಿನ ಮೊದಲನೆಯ ಅಧಿವೇಶನದಲ್ಲಿ ಒಕ್ಕೂಟವನ್ನು ಸೂಚಿಸಿದಾಗ ರಾಜ್ಯಗಳ ಅರಸರು ಅದನ್ನು ಕುರಿತು ತುಂಬಾ ಉತ್ಸಾಹವನ್ನು ವ್ಯಕ್ತಪಡಿಸಿದ್ದರು. ಅವರ ಉತ್ಸಾಹವು ಕ್ರಮೇಣ ತಣ್ಣಗಾಗಿ ಅದಕ್ಕೆ ವಿರುದ್ಧವಾದರು. 1935 ರಲ್ಲಿ ಬೊಂಬಾಯಿಯಲ್ಲಿ ನಡೆದ ರಾಜರುಗಳ ಮತ್ತು ರಾಜ್ಯಗಳ ಸಚಿವರ ಪ್ರಾತನಿಧಿಕ ಸಭೆಯೊಂದರಲ್ಲಿ ಈ ಪ್ರಶ್ನೆಯನ್ನು ಚರ್ಚಿಸಲಾಯಿತು. ಶಾಸನವು ನಿರೂಪಿಸಿದ್ದಂತೆ ಒಕ್ಕೂಟಕ್ಕೆ ಸೇರಲು ಅರಸರು ಹಿಂದೆಗೆಯುತ್ತಿದ್ದರು ಎನ್ನುವುದು ಸಭೆಯ ಕಾರ್ಯಕಲಾಪಗಳಿಂದ ಸುಸ್ಪಷ್ಟವಾಯಿತು. ಈ ಸಭೆಯಲ್ಲಿ ಕೆಲವು ಮೂಲಭೂತ ವಿಚಾರಗಳು ರಾಜಮಹಾರಾಜರ ಮನೋಭಾವ ಹೇಗಿದ್ದಿತೆಂಬುದನ್ನು ವಿವರಿಸುತ್ತವೆ. ಅವುಗಳನ್ನು ಸ್ವಲ್ಪ ವಿವರವಾಗಿ ನೋಡಬಹುದು.

## 93.1 ನೂತನ ಶಾಸನದನ್ವಯ ಸಚಿವ ಸಂಪುಟಗಳು (ಒಕ್ಕೂಟ)

ಅ. ಕಾಂಗ್ರೇಸ್ಸೇತರ ಪ್ರಾಂತಗಳು

(a) ಬಂಗಾಳ ಬಂಗಾಳದ ಮೊದಲನೆಯ ಲೆಜೆಸ್ಲೇಟಿವ್ ಅಸೆಂಬ್ಲಿಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಸ್ಥಿತಿಯು 1935 ರ ಶಾಸನದಲ್ಲಿ ಚುನಾಯಿತವಾದಂತೆ ಹೀಗಿತ್ತು.

1. ಕಾಂಗ್ರೆಸ್ - 60
2. ಸ್ವತಂತ್ರ ಮುಸ್ಲಿಮರು - 41
3. ಮುಸ್ಲಿಂಲೀಗ್ - 40
4. ಪ್ರಜಾಪಕ್ಷ - 35
5. ಯುರೋಪಿಯನ್ನರು - 25
6. ಸ್ವತಂತ್ರ ಪರಿಶಿಷ್ಟ ಜಾತಿ (ದಲಿತ ವರ್ಗದ) ಹಿಂದುಗಳು - 23
7. ಸ್ವತಂತ್ರ ಜಾತಿ ಹಿಂದೂಗಳು - 14

ಕಾಂಗ್ರೆಸ್ಸಿನ 60 ಜನರೂ ಒಂದು ಪಂಗಡವಾಗಿರಲಿಲ್ಲ, ಏಕೆಂದರೆ ಅವರಲ್ಲಿ 17 ಜನರು ವಿಶಿಷ್ಟ ವರ್ಗಗಳಿಂದ (ಪರಿಶಿಷ್ಟ ಜಾತಿಗಳು, ಕಾರ್ಮಿಕರು, ಮತ್ತು ತಿಪ್ಪೆರ ಕೃಷಿಕರ ಸಂಘ) ಬಂದವರು, ಪ್ರಜಾಪಕ್ಷವು ಮುಖ್ಯವಾಗಿ ಕೃಷಿ ಗೇಣಿದಾರರನ್ನು ಪ್ರತಿನಿಧಿಸುವ ಮುಸ್ಲಿಂ ಪಕ್ಷವಾಗಿತ್ತು.

ಯಾವುದೇ ಒಂದು ಪಕ್ಷವು ಸಚಿವ ಸಂಪುಟವನ್ನು ರಚಿಸಲು ಶಕ್ತವಾಗಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ಸಮ್ಮಿಶ್ರ ಸಂಪುಟವು ಅನಿವಾರ್ಯವಾಗಿತ್ತು. ಪ್ರಜಾ ಪಕ್ಷದ ನಾಯಕ ಫಜಲ್-ಉಲ್- ಹಕ್ ಒಬ್ಬ ರಾಷ್ಟ್ರೀಯವಾದಿ ಮುಸ್ಲಿಂ ಆಗಿದ್ದು ಕಾಂಗ್ರೆಸ್ಸಿನ ಸಹಕಾರದಿಂದ ಮಂತ್ರಿಮಂಡಲವನ್ನು ರಚಿಸಲು ಪ್ರಾಮಾಣಿಕ ಪ್ರಯತ್ನಗಳನ್ನು ಅವರು ಮಾಡಿದರು. ಸ್ಥಳೀಯ ಕಾಂಗ್ರೆಸ್ ಪಕ್ಷವು ಈ ಸಲಹೆಯನ್ನು ಒಪ್ಪಿದರೂ ಕಾಂಗ್ರೆಸ್ ಅಧಿಕಾರವನ್ನು ಸ್ವೀಕರಿಸಬೇಕೇ ಬೇಡವೇ ಎಂಬುದು ಇನ್ನೂ ನಿರ್ಧಾರವಾಗಿರಲಿಲ್ಲವಾದ್ದರಿಂದ ಕಾಂಗ್ರೆಸ್ ಹೈಕಮಾಂಡ್ ಅದನ್ನು ತಳ್ಳಿಹಾಕಿತು. ತಾತ್ವಿಕ ಸಮರ್ಥನೆ ಏನೇ ಇರಲಿ, ನಿರ್ಣಯವು ಅತ್ಯಂತ ಅವಿವೇಕದ್ದಾಯಿತು. ಏಕೆಂದರೆ ಫಜಲ್-ಉಲ್-ಹಕ್ ಮುಸ್ಲಿಂ ಲೀಗಿನೊಂದಿಗೆ ಒಪ್ಪಂದಕ್ಕೆ ಬಂದು ಆ ಮತೀಯ ಪಕ್ಷವು ಬಂಗಾಳದಲ್ಲಿ ಅಧಿಕಾರಕ್ಕೆ ಬರಲು ಮತ್ತು ಪ್ರಾಧಾನ್ಯ ಪಡೆಯಲು ದಾರಿ ಮಾಡಿಕೊಟ್ಟಿತು. ಬಂಗಾಳದ ಮಿಶ್ರ ಮಂತ್ರಿ ಮಂಡಲವು ಮೇಲಿನ ಪಟ್ಟಿಯ 3,4,6

ಮತ್ತು 7 ನೆಯ ಪಕ್ಷಗಳ ಕೂಡುವಿಕೆಯ ಮೇಲೆ ಆಧಾರಿತವಾಗಿತ್ತು. ಫಜಲ್-ಉಲ್-ಹಕ್ ಮುಖ್ಯಮಂತ್ರಿಯಾದರು. ಮಿಕ್ಕ 10 ಜನ ಸಚಿವರಲ್ಲಿ ಐವರು ಹಿಂದೂಗಳು ಮತ್ತು ಐವರು ಮುಸ್ಲಿಮರು. ಈ ಕೂಟವು ಬಲಶಾಲಿಯೂ ಆಗಲಿಲ್ಲ. ಸ್ಥಿರವೂ ಆಗಲಿಲ್ಲ; ಏಕೆಂದರೆ ಆಂತರಿಕ ಭಿನ್ನಾಭಿಪ್ರಾಯಗಳಿದ್ದುದರ ಜೊತೆಗೆ ಕೂಟದ ಹೊರಗಿನಿಂದಲೂ ವಿವಿಧ ಪಂಗಡಗಳ ಬೆಂಬಲ ಅದಕ್ಕೆ ಬೇಕಾಗಿತ್ತು. ಆ ಬೆಂಬಲ ಯಾವಾಗಲೂ ಅನಿಶ್ಚಿತವೇ ಆಗಿತ್ತು.

ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆಗೆ ಬರಲು ಫಜಲ್-ಉಲ್-ಹಕ್ ಮತ್ತೆ ಮತ್ತೆ ಪ್ರಾಮಾಣಿಕವಾಗಿ ಪ್ರಯತ್ನಿಸಿ ವಿಫಲ ಹೊಂದಿದ್ದು ಅಸೆಂಬ್ಲಿಯಲ್ಲಿದ್ದ ಮುಸ್ಲಿಂ ಪಕ್ಷಗಳು ಹೆಚ್ಚು ನಿಕಟವಾಗಿ ಬೆಸೆದುಕೊಳ್ಳಲು ಕಾರಣವಾಯಿತು. ಮಂತ್ರಿ ಮಂಡಲವು ಸ್ಥಿರವಾಗಿ ನಿಂತಿತು. ಆದರೆ ಸ್ವರೂಪದಲ್ಲಿ ಮತೀಯವಾಯಿತು. ಜಿನ್ನಾ ಅವರು ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಮಂತ್ರಿ ಮಂಡಲದ ಮೇಲೆ ಲೀಗಿನ ಪ್ರಭುತ್ವವನ್ನು ಹೇರಲು ಪ್ರಯತ್ನಿಸಿದರು. ಕೆಲವು ಸದಸ್ಯರನ್ನು ಬದಲಾಯಿಸಬೇಕಾಯಿತು. ಆದರೆ ಮಿಶ್ರ ಮಂತ್ರಿ ಮಂಡಲವು ಮುಂದುವರಿಯಿತು. ಮಂತ್ರಿ ಮಂಡಲಕ್ಕೆ ಶಕ್ತಿಯ ಶಿಖರಗಳಂತಿದ್ದ ಇಬ್ಬರು ಹಿಂದೂ ಮಂತ್ರಿಗಳು ನಳನೀರಂಜನ ಸರ್ಕಾರ್ ಮತ್ತು ಶ್ಯಾಮ ಪ್ರಸಾದ್ ಮುಖರ್ಜಿ ಬೇರೆ ಬೇರೆ ಕಾರಣಗಳಿಂದ ರಾಜೀನಾಮೆ ಕೊಟ್ಟರು. ಇದರಿಂದ ಗಣನೀಯವಾಗಿ ದುರ್ಬಲವಾದರೂ ಫಜಲ್-ಉಲ್-ಹಕ್ ಮಂತ್ರಿ ಮಂಡಲವು ಎರಡನೆಯ ಮಹಾಯುದ್ಧವು ಪ್ರಾರಂಭವಾದಾಗಲೂ ಮುಂದುವರಿದಿತ್ತು.

ಫಜಲ್-ಉಲ್-ಹಕ್ ಮಂತ್ರಿ ಮಂಡಲದ ಕಾರ್ಯ ಸ್ವರೂಪವನ್ನು ವಿವರವಾಗಿ ಪರಿಶೀಲಿಸಲು ಇಲ್ಲಿ ಅವಕಾಶವಿಲ್ಲ . ಆದರೆ ಕೆಲವು ಮುಖ್ಯವಾದ ಲಕ್ಷಣಗಳನ್ನು ಗುರುತಿಸಬಹುದು.

ಒಂದು, ಜನತಾ ಮಂತ್ರಿಮಂಡಲವು ಅಸ್ತಿತ್ವಕ್ಕೆ ಬಂದುದರಿಂದ ದಮನಕಾರಿ ಶಾಸನಗಳು ರದ್ದಾಗುತ್ತವೆ. ರಾಜಕೀಯ ಬಂಧಿತರನ್ನು ಬಿಡುಗಡೆ ಮಾಡಲಾಗುತ್ತದೆ ಎಂಬ ಆಸೆ ಮೂಡಿತು. ಆದರೆ ಈ ನಿರೀಕ್ಷೆಗಳು ಕೇವಲ ಭಾಗಶಃ ಪೂರೈಕೆಯಾದುವು. ಯಾವುದೇ ದಮನಕಾರಿ ಕಾನೂನನ್ನು ರದ್ದು ಪಡಿಸಲಿಲ್ಲ. ಆದರೆ 2304 ಜನಬಂಧಿತರೆಲ್ಲರನ್ನೂ ಬಿಡುಗಡೆ ಮಾಡಲಾಯಿತು. ಅಪರಾಧಿಗಳನ್ನು ಕುರಿತಂತೆ, ಗಂಭೀರವಾದ ಅಥವಾ ದೀರ್ಘಕಾಲಿಕವಾದ ಕಾಯಿಲೆಯಿಂದ ಬಳಲುತ್ತಿದ್ದವರನ್ನು ಒಡನೆಯೇ ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿತು. ಪ್ರತಿಯೊಂದು ಮೊಕದ್ದಮ್ಮೆಯನ್ನು ಪರೀಕ್ಷಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು. ಇದರ ಫಲವಾಗಿ 1939 ರ ಅಕ್ಟೋಬರ್ ವೇಳೆಗೆ 12 ಜನ ಉಗ್ರಗಾಮಿಗಳನ್ನು ಯಾವ ಷರತ್ತೂ ಇಲ್ಲದೆ ಬಿಡುಗಡೆಗೊಳಿಸಲಾಯಿತು; 41 ಜನರನ್ನು ಕೆಲವು ಷರತ್ತುಗಳಿಗೆ ಒಳಪಟ್ಟು ಬಿಡುಗಡೆಗೊಳಿಸಲಾಯಿತು. 7 ಜನರಿಗೆ ಶಿಕ್ಷೆಯನ್ನು ತಗ್ಗಿಸಲಾಯಿತು; 41 ಜನರನ್ನು ಹಾಗೆಯೇ ಉಳಿಸಲಾಯಿತು. ಒಟ್ಟಿನಲ್ಲಿ ಭಯೋತ್ಪಾದಕರೆಂದು ಶಂಕಿತರಾಗಿದ್ದ ಅಥವಾ ಭಯೋತ್ಪಾದನೆಯೊಂದಿಗೆ ಸಂಬಂಧಿಸಿದ್ದ 2000 ಕ್ಕಿಂತಲೂ ಹೆಚ್ಚು ಸಂಖ್ಯೆಯ ವ್ಯಕ್ತಿಗಳನ್ನು ಬಿಡುಗಡೆ ಮಾಡಲಾಯಿತು.

ಸರ್ಕಾರದ ನೀತಿಯನ್ನು ಅದರ ಫಲವು ಸಮರ್ಥಿಸಿತು ಎನ್ನಬೇಕು. ಏಕೆಂದರೆ ಹಿಂದಿನ ಮಾದರಿಯ ಹಿಂಸಾಚಾರ ಮರುಕಳಿಸಲಿಲ್ಲ. ಆದರೆ ಬೇರೊಂದು ಬಗೆಯ ಕಷ್ಟಗಳು ಕಾಣಿಸಿಕೊಂಡವು. ಕಲ್ಕತ್ತೆಯಲ್ಲಿದ್ದ ಬ್ಲ್ಯಾಕ್ ಹೋಲ್ ಸ್ಮಾರಕವನ್ನು ತೆಗೆದು ಹಾಕಬೇಕೆಂದು ಒಂದು ಚಳುವಳಿ ನಡೆಯಿತು. ಅದು ಸಿರಾಜುದ್ದೌಲನ ಒಳ್ಳೆಯ ಹೆಸರಿಗೆ ಹತ್ತಿದ ಕಳಂಕ ಎಂದು ಪರಿಗಣಿಸಲಾಯಿತು. ಸುಭಾಸ್ ಬೋಸರು ಒಂದು ಸತ್ಯಾಗ್ರಹವನ್ನು ಆಯೋಜಿಸಿದರು. ವಿದ್ಯಾರ್ಥಿಗಳು ಸಾಮಾನ್ಯ ಮುಷ್ಕರದ ಬೆದರಿಕೆಯನ್ನು ಒಡ್ಡಿದರು. ಪೋಲೀಸರಿಗೂ ವಿದ್ಯಾರ್ಥಿಗಳಿಗೂ ನಡುವೆ ಘರ್ಷಣೆಯಾಯಿತು. ಸಾರ್ವಜನಿಕ ಅಸಮಧಾನ ಎಷ್ಟು ತೀವ್ರವಾಯಿತೆಂದರೆ, ಮುಖ್ಯಮಂತ್ರಿಯು ಮಾರನೆಯ ದಿನವೇ ಆ ಸ್ಮಾರಕವನ್ನು ತೆಗೆದು ಹಾಕಲಾಗುವುದು ಎಂದು ಘೋಷಿಸಿದನು.

1940 - 41 ರಲ್ಲಿ ಹಲವು ಸ್ಥಳಗಳಲ್ಲಿ ನಡೆದ ಮತೀಯ ದಂಗೆಗಳಿಂದಾಗಿ ದೇಶದ ಶಾಂತಿಯು ಕದಡಿತು. ಇವುಗಳಲ್ಲಿ ಅತ್ಯಂತ ಗಂಭೀರವಾದದ್ದು ಡಾಕಾದಲ್ಲಿ ಮತ್ತೆ ಮತ್ತೆ ಭುಗಿಲೆದ್ದ ವಿಕ್ಷೋಬೆಗಳು. ಹಲವು ದಿನಗಳ ಕಾಲ ಇರಿತ, ಲೂಟಿ ಮತ್ತು ಬೆಂಕಿಯಿಡುವಿಕೆಗಳು ಮುಂದುವರಿದವು. ಟಿಯಡ್‌ಗ್ಯಾಸ್ ಪ್ರಯೋಗಿಸಲಾಯಿತು. ಸೇನೆಗಳನ್ನು ಬಳಸಲಾಯಿತು. 50 ಕ್ಕಿಂತಲೂ ಹೆಚ್ಚು ಜನರು ಮಡಿದರು ಮತ್ತು ಬಹುಸಂಖ್ಯೆಯ ಜನರು ಗಾಯಗೊಂಡರು. ಗಲಭೆಗಳು ಗ್ರಾಮಾಂತರ ಪ್ರದೇಶಗಳಿಗೂ ಹರಡಿದುವು. ಹಲವು ಹಿಂದೂ ಗ್ರಾಮಗಳನ್ನು ಲೂಟಿ ಮಾಡಿ ಸುಟ್ಟು ಹಾಕಲಾಯಿತು. 10,000 ಕ್ಕೂ ಹೆಚ್ಚು ಜನ ಹಿಂದೂಗಳು ನಿರ್ವಸಿತರಾಗಿ ಓಡಿ ಹೋದರು. ಅಧಿಕಾರಿಗಳು ಮುಸ್ಲಿಮರ ಪರವಾಗಿ ಪಕ್ಷಪಾತ ತೋರಿಸಿದರೆಂದು ಹಿಂದೂಗಳು ದೂರಿದರು. ಬಂಗಾಳದಲ್ಲಿ

ವೇಗವಾಗಿ ಪ್ರಾಮುಖ್ಯಗಳಿಸಿಕೊಳ್ಳುತ್ತಿದ್ದ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾ ಎರಡು ಪಕ್ಷಗಳು ಹಿಂದು ಜನಾಂಗದ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಾನಮಾನಗಳನ್ನು ನಾಶಪಡಿಸಲು ಉದ್ದೇಶಪೂರ್ವಕ ಪ್ರಯತ್ನಿಸಿದೆ ಎಂದು ಫಜಲ್-ಉಲ್-ಹಕ್ ಮಂತ್ರಿ ಮಂಡಲವನ್ನು ಖಂಡಿಸಿದವು. ಆಗಾಗ ಕೊರತೆಗಳು ಕಂಡು ಬಂದಿದ್ದರೂ ಅವು ಕೃತಿಗಿಂತ ಹೆಚ್ಚಾಗಿ ಮಾತಿನಲ್ಲಾಗಿದ್ದವು. ಒಟ್ಟಾರೆ ಫಜಲ್-ಉಲ್-ಹಕ್ ಮತೀಯ ಪ್ರಭಾವಕ್ಕೆ ಒಳಗಾಗಿರಲಿಲ್ಲ. ಕಾಂಗ್ರೆಸ್‌ನೊಂದಿಗೆ ರಾಜಕೀಯ ಸಂಧಾನವನ್ನು ಮಾಡಿಕೊಳ್ಳಲು ಅವರು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಆದರೆ ಕಾಂಗ್ರೆಸ್ ಅದೆಲ್ಲವನ್ನೂ ನಿರಾಕರಿಸಿತು. ಬಂಗಾಳದ ಮತೀಯ ದಂಗೆಗಳು ಉಲ್ಬಣಾವಸ್ಥೆಯಲ್ಲಿದ್ದಾಗ, ಮುಸ್ಲಿಂ ಲೀಗ್ ಕಾಂಗ್ರೆಸ್‌ನೊಂದಿಗೆ ಒಂದು ಒಪ್ಪಂದಕ್ಕೆ ಬರುವಂತೆ ಮಾಡಬೇಕೆಂದು ಫಜಲ್-ಉಲ್-ಹಕ್ ಜಿನ್ನಾರಿಗೆ ಸಲಹೆ ಮಾಡಿದರು. "ತಮಗೂ ಒಂದು ಪರಿಹಾರ ಮಾರ್ಗವನ್ನು ಕಂಡು ಹಿಡಿಯುವ ಬಯಕೆಯಿರುವುದಾಗಿಯೂ, ಆದರೆ ಕಾಂಗ್ರೆಸ್ ಪಕ್ಷವೂ ಮುಸ್ಲಿಮರನ್ನು ಕೈಬಿಟ್ಟು ತನ್ನ ಬೇಡಿಕೆಗಳನ್ನು ಒಪ್ಪುವಂತೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಪಡಿಸುತ್ತಿರುವಾಗ ಅದು ಸಾಧ್ಯವಾಗುವುದಿಲ್ಲ ಎಂದರು. ಈ ಮಾತಿಗೆ ಫಜಲ್-ಉಲ್-ಹಕ್ ಒಪ್ಪಿಕೊಳ್ಳಬೇಕಾಯಿತು.

ಮೊದಲಿನಿಂದ ಕೊನೆಯವರೆಗೂ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗಳ ಅಖಿಲ ಭಾರತ ನೀತಿಯ ವೇದಿಕೆಯ ಮೇಲೆ ಬಂಗಾಳದ ಹಿತಾಸಕ್ತಿಯನ್ನು ಬಲಿಗೊಡಲಾಯಿತು ಎಂಬ ಆಪಾದನೆಯನ್ನು ಅಲ್ಲಗೆಳೆಯುವುದು ಬಹಳ ಕಷ್ಟವಾಗುತ್ತದೆ.

ಎಲ್ಲಾ ರಾಜಕೀಯ ಪಕ್ಷಗಳ ಪ್ರಕಾರ, ಒಡನೆಯೇ ಕಾರ್ಯಗತಗೊಳಿಸಬೇಕಾಗಿದ್ದ ಸುಧಾರಣೆಗಳಲ್ಲಿ ಒಂದು ಕೃಷಿಕ ವರ್ಗಕ್ಕೆ ಪರಿಹಾರವನ್ನೊದಗಿಸುವುದು. ಅಧಿಕ ತೆರಿಗೆ, ಸಾಲದ ಹೊರೆ, ಅನ್ಯಾಯವಾದ ಗೇಣಿ ನಿಯಮಗಳು ಇವುಗಳಿಂದ ಅವರು ಬಹಳ ಕಾಲದಿಂದಲೂ ನರಳುತ್ತಿದ್ದರು. ಈ ಕಷ್ಟಗಳನ್ನು ಪರಿಹರಿಸಿ ಕಡ್ಡಾಯ ಪ್ರಾಥಾಮಿಕ ಶಿಕ್ಷಣವನ್ನು ಜಾರಿಗೊಳಿಸುವುದು ಫಜಲ್-ಉಲ್-ಹಕ್ ಹಾಕಿಕೊಂಡಿದ್ದ ಚುನಾವಣಾ ಕಾರ್ಯಕ್ರಮಗಳ ಮೊದಲಿನೆರಡು ಅಂಶಗಳಾಗಿದ್ದುವು.

ಭೂಕಂದಾಯದ ಪ್ರಶ್ನೆಯನ್ನು ಖಾಯಂ ಜಮೀನ್ದಾರಿ ಪದ್ಧತಿಗೆ ಸಂಬಂಧಪಟ್ಟಂತೆ ಪರೀಕ್ಷಿಸಿ ವರದಿ ಮಾಡಲು ಸರ್ ಫ್ರಾನ್ಸಿಸ್ ಫ್ಲಾಡ್‌ನ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ಸರಕಾರವು ನೇಮಿಸಿತು. ಆದರೆ ಅದರಿಂದ ಸರಿಯಾದ ಫಲ ದೊರಕಲಿಲ್ಲ. ಆದ್ದರಿಂದ ಚಾಲ್ತಿಯಲ್ಲಿರುವ ಪದ್ದತಿಯಲ್ಲಿಯೇ ಒಂದು ಗೇಣಿ ನಿಯಮ ಸುಧಾರಣಾ ಕ್ರಮವನ್ನು ಸರಕಾರ ಕೈಗೊಳ್ಳಲು ಬಯಸಿತು. "ಬೆಂಗಾಲ್ ಟೆನೆನ್ಸಿ (ಅಮೆಂಡ್‌ಮೆಂಟ್) ಮಸೂದೆಯ ಕಾಂಗ್ರೆಸ್ ಪ್ರಾಂತಗಳಲ್ಲಿ ಅದಕ್ಕೆ ಸಂವಾದಿಯಾಗಿದ್ದ ಕಾನೂನುಗಳನ್ನು ತಕ್ಕ ಮಟ್ಟಿಗೆ ಹೋಲುತ್ತಿತ್ತು. ಅದರ ಉದ್ದೇಶಗಳಲ್ಲಿ ಕೆಲವು ಗೇಣಿಯನ್ನು ವಸೂಲಿ ಮಾಡುವುದರಲ್ಲಿ ಜಮೀನ್ದಾರರಿಗಿದ್ದ ಅಧಿಕಾರಗಳನ್ನು ಮೊಟಕುಗೊಳಿಸುವುದು, ಹಿಡುವಳಿಯ ವರ್ಗಾವಣೆಗೆ ಜಮೀನ್ದಾರನು ವಿಧಿಸುತ್ತಿದ್ದ ಶುಲ್ಕದ ರದ್ಧತಿ, ಗೇಣಿಯ ಖಾತೆಯ ಮೇಲಣ ಬಡ್ಡಿಯನ್ನು ಶೇ. 12.5 ರಿಂದ ಕೆಳಗಿಳಿಸಿ ಶೇ. 6.25 ಎಂದು ನಿಗಧಿಪಡಿಸಿದ್ದು, ಹತ್ತು ವರ್ಷಗಳ ಕಾಲ ತೆರಿಗೆಯನ್ನು ಹೆಚ್ಚಿಸುವ ಸಂಬಂಧವಾದ ಅವಕಾಶಗಳೆಲ್ಲವನ್ನೂ ರದ್ದು ಪಡಿಸಿದ್ದು ಇವು". ಮಸೂದೆಯು 1938 ರಲ್ಲಿ ಶಾಸನವಾಯಿತು. ಅಡಮಾನ ಮತ್ತು ಕಂದಾಯ ಬಾಕಿಗಳಿಗೆ ಸಂಬಂಧಪಟ್ಟಂತೆ ಗೇಣಿದಾರರ ಹಿತವನ್ನು ರಕ್ಷಿಸುವ ಸಲುವಾಗಿ ರೂಪುಗೊಂಡಿದ್ದ ಇನ್ನೊಂದು ಟೆನೆನ್ಸಿ ಮಸೂದೆಯನ್ನು 1941 ರಲ್ಲಿ ಅಂಗೀಕರಿಸಲಾಯಿತು. ಗ್ರಾಮೀಣ ಋಣಭಾರವನ್ನು ಪರಿಹರಿಸುವ ಮತ್ತೊಂದು ಮಸೂದೆಯನ್ನು 1940 ರಲ್ಲಿ ಅಂಗೀಕರಿಸಲಾಯಿತು. ಅದು ಭರವಸೆಯಲ್ಲಿದ್ದ ಮತ್ತು ಭರವಸೆಯಿರದ ಸಾಲಗಳಿಗೆ ಕ್ರಮವಾಗಿ ಬಡ್ಡಿದರವನ್ನು ಶೇ. 10 ಮತ್ತು ಶೇ. 8 ಎಂದು ನಿಗಧಿಪಡಿಸಿತು.

**(b) ಪಂಜಾಬ್**

ಪಂಜಾಬಿನ ಜನಸಂಖ್ಯೆಯಲ್ಲಿ ಶೇ. 57 ಮುಸ್ಲಿಮರು, ಶೇ. 26.5 ಹಿಂದೂಗಳು ಮತ್ತು ಶೇ. 13.5 ಸಿಖ್ಖರು. ಪಂಜಾಬ್ ವಿಧಾನ ಸಭೆಯಲ್ಲಿ ಸ್ಥಾನಗಳ ಹಂಚಿಕೆ ಬಹಳ ತೊಡಕಿನ ಸಮಸ್ಯೆಯಾಯಿತು. ಏಕೆಂದರೆ ಭಾರತೀಯ ಸೇನೆಗೆ ತಮ್ಮ ಜನಾಂಗದ ಅಪಾರ ಕೊಡುಗೆಗಳಿಂದಲೂ ಒಂದು ಶತಮಾನಕ್ಕಿಂತಲೂ ಸ್ವಲ್ಪ ಹಿಂದೆ ಇಡೀ ಪ್ರಾಂತವನ್ನು ತಾವೇ ಆಳುತ್ತಿದ್ದರೆಂಬ ಕಾರಣದಿಂದಲೂ ತಮಗೆ ಅಧಿಕ ಸವಲತ್ತು ನೀಡಿದ ಕೋಮು ನಿರ್ಣಯದಿಂದಾಗಿ 1932 ರಲ್ಲಿ ಪ್ರಶ್ನೆಯನ್ನು ಇತ್ಯರ್ಥಪಡಿಸಲಾಯಿತು.

ಪಂಜಾಬ್ ರಾಜಕಾರಣದಲ್ಲಿ ಕಾಂಗ್ರೆಸ್ ಮತ್ತು ಮಸ್ಲೀಂ ಲೀಗ್ ಎರಡಕ್ಕೂ ಪ್ರಾಧಾನ್ಯವಿರಲಿಲ್ಲ. ಆದರೆ 1919 ರಿಂದಲೂ ಅಲ್ಲಿನ ರಾಜಕೀಯವು ಮತೀಯವೇ ಆಗಿತ್ತು. ಸೈಮನ್ ಆಯೋಗವು ಬರೆದಂತೆ, 'ಕೌನ್ಸಿಲಿನ ಮುಖ್ಯ ಲಕ್ಷಣವು ಆಳವಾದ ಮತೀಯ

ಒಡಕುಗಳಿಂದ ತುಂಬಿದೆ. ಮಂತ್ರಿ ಮಂಡಲಗಳ ಸ್ಥಿರತೆಯು ಒಂದು ಕಡೆ ಮಹಮ್ಮದೀಯರು, ಇನ್ನೊಂದು ಕಡೆ ಸಿಖ್ ಮತ್ತು ಹಿಂದೂಗಳು ಈ ಎರಡು ವರ್ಗಗಳ ನಡುವೆ ಸಮತೋಲನವನ್ನು ಸಾಧಿಸುವ ಸ್ಥಿತಿಯಲ್ಲಿ ಅಧೀಕೃತ ಪಂಗಡವು ಇದೆಯೇ ಎನ್ನುವುದನ್ನು ಅವಲಂಬಿಸಿದೆ'.

1937 ರ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಅಧಿಕೃತ ಪಂಗಡವು ಇಲ್ಲದೆ ಹೋದರೂ ನ್ಯಾಷನಲ್ ಯುನಿಯನಿಸ್ಟ್ ಪಕ್ಷದ ಸರ್ ಸಿಕಂದರ್ ಹಯಾತ್‌ಖಾನ್ ಒಂದು ಸ್ಥಿರವಾದ ಮಂತ್ರಿಮಂಡಲವನ್ನು ರಚಿಸಿದರು. ಏಕೆಂದರೆ ಆ ಪಕ್ಷವು 175 ಸದಸ್ಯರ ಶಾಸನ ಸಭೆಯಲ್ಲಿ 96 ಸ್ಥಾನಗಳನ್ನು ಪಡೆದಿತ್ತು. ಸರ್ ಸಿಕಂದರ್ ತಮ್ಮ ಸರ್ಕಾರದ ಈ ಬಲವನ್ನೂ ಜನಪ್ರಿಯತೆಯನ್ನೂ 1942 ರ ಡಿಸೆಂಬರ್ 26 ರಂದು ನಿಧನ ಹೊಂದುವವರೆಗೂ ಉಳಿಸಿಕೊಂಡು ಬಂದರು.

ಬಂಗಾಳದಂತೆಯೇ ಪಂಜಾಬಿನ ಮಂತ್ರಿ ಮಂಡಲವೂ ಸೆಡಿಯಾಳುಗಳ ಬಿಡುಗಡೆಯ ಬೇಡಿಕೆಯನ್ನು ಎದುರಿಸಿತು. ಇಲ್ಲಿ ಬಂಧಿತರಾಗಿದ್ದವರು 44 ಜನ. ಅಸೆಂಬ್ಲಿ ಭವನದ ಬಳಿ ಎರಡು ಉಪವಾಸ ಮುಷ್ಕರಗಳು, ಸುಮಾರು 20,000 ಜನರ ಬೃಹತ್ ಪ್ರದರ್ಶನವೂ ನಡೆದುವು. 1938 ರ ಮಾರ್ಚಿಯಲ್ಲಿ 7 ಜನ ತೀವ್ರಗಾಮಿಗಳಿಲ್ಲದ ಸೆರೆಯಾಳುಗಳನ್ನೂ, ಏಪ್ರಿಲ್‌ನಲ್ಲಿ 5 ಜನ ಉಗ್ರಗಾಮಿಗಳನ್ನು ಬಿಡುಗಡೆ ಮಾಡಲಾಯಿತು. ಅಂಡಮಾನಿನಲ್ಲಿದ್ದ ಪಂಜಾಬಿ ಸೆರೆಯಾಳುಗಳನ್ನು ಪಂಜಾಬಿನ ಜೈಲುಗಳಿಗೆ ವರ್ಗಾಯಿಸಲಾಯಿತು.

ನೂತನ ಸಚಿವ ಸಂಪುಟವು ಸ್ಥಾಪನೆಗೊಂಡ ಕೆಲವೇ ತಿಂಗಳುಗಳಲ್ಲಿ ಮುಸ್ಲಿಮರು ಮತ್ತು ಸಿಖ್ಖರ ನಡುವೆ ಮೂರು ಹೋರಾಟಗಳೂ ಹಿಂದೂ ಮತ್ತು ಮುಸ್ಲಿಮರ ನಡುವೆ ಒಂದು ಘರ್ಷಣೆಯೂ ನಡೆದುವು.

1938 ರ ಪ್ರಾರಂಭದಲ್ಲೆ ಮುಸ್ಲಿಂ-ಹಿಂದೂಗಳ ಇನ್ನೊಂದು ಘರ್ಷಣೆಯೂ ನಡೆಯಿತು. ಸಾಹಿದ್ ಗಂಜ್ ಮಸೀದಿಯನ್ನು ಕುರಿತು ಒಂದು ಗಂಭೀರ ರೂಪದ ಪರಿಸ್ಥಿತಿಯು ನಿರ್ಮಾಣವಾಯಿತು. ಅದು ಶತಮಾನ ಕಾಲ ಸಿಖ್ಖರ ವಶದಲ್ಲಿತ್ತು. ಅದಕ್ಕೆ ನ್ಯಾಯಾಂಗದ ಅನುಮತಿಯೂ ಇತ್ತು. ಅದನ್ನು ವಶಪಡಿಸಿಕೊಳ್ಳಲು ಮುಸ್ಲಿಮರು ಚಳುವಳಿ ಹೂಡಿದರು. ಅದರ ಮುಖ್ಯವಾದ ಒಂದು ಭಾಗವನ್ನು ಕಾಂಗ್ರೆಸ್ಸಿಗೆ ಬೆಂಬಲ ಕೊಡುತ್ತಿದ್ದ ಅಲ್ಪಸಂಖ್ಯಾತ ಮುಸ್ಲಿಮರ ಆಹ್ರಾರಂ ವರ್ಗವು ವಶಪಡಿಸಿಕೊಂಡಿತು. ಅವರು ಸತ್ಯಾಗ್ರಹ ಚಳುವಳಿಯನ್ನು ಪ್ರಾರಂಭಿಸಿದರು. ವಾಯುವ್ಯ ಗಡಿ ಪ್ರಾಂತ, ದೆಹಲಿ ಮತ್ತು ಯು.ಪಿ ಗಳಿಂದ ಬಂದ ಸ್ವಯಂ ಸೇವಕರು ಅವರ ಜೊತೆಗೆ ಸೇರಿಕೊಂಡರು. ಅವರು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಮಸೀದಿಗೆ ನಡೆದು ಬಂಧನಕ್ಕೊಳಗಾದರು. ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು ಹೀಗೆ ಬಂಧನಕ್ಕೊಳಗಾದ ಮೇಲೆ ಚಳುವಳಿಯು ವೇಗವಾಗಿ ಕುಸಿದುಬಿದ್ದಿತು.

1938 ರಲ್ಲಿ ಮುಲ್ತಾನಿನಲ್ಲಿ ಒಂದು ಗಂಭೀರ ರೂಪದ ಮತೀಯ ದಂಗೆಯು ಎದ್ದಿತು. ಮುಂದಿನ ವರ್ಷ ಅಮೃತಸರದಲ್ಲಿ ನಡೆದ ದಂಗೆಯಲ್ಲಿ ಹಲವರು ಪ್ರಾಣತೆತ್ತರು, ಗಾಯಗೊಂಡರು. ಅನೇಕ ಮನೆಗಳು ಸುಟ್ಟು ಹೋದವು. ಎರಡೂ ಸಂದರ್ಭಗಳಲ್ಲಿ ದಂಗೆಯನ್ನು ಅಡಗಿಸಲು ಸೇನೆಯನ್ನು ಕರೆಸಬೇಕಾಯಿತು.

ಬಂಗಾಳದಲ್ಲಿದ್ದಂತೆಯೇ ಪಂಜಾಬಿನಲ್ಲಿ ಕೃಷಿಕರ ಸಮಸ್ಯೆ ಸಚಿವ ಸಂಪುಟದ ಗಮನವನ್ನು ಮುಖ್ಯವಾಗಿ ಸೆಳೆಯಿತು. 1942 ರ ವೇಳೆಗೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಯಿತು.

1. 1900 ರ ಪಂಜಾಬ್ ಏಲಿಯನೇಷನ್ ಆಫ್ ಲ್ಯಾಂಡ್ ಶಾಸನಗಳ ತಿದ್ದುಪಡಿ ಮಾಡುವ ಮೂರು ಶಾಸನಗಳು, ಕೃಷಿ ಭೂಮಿಯನ್ನು ಸಾಹುಕಾರರಿಗೆ, ಅಡಮಾನ ಮಾಡಿ ಕೊಂಡವರಿಗೆ ಖಾಯಂ ಆಗಿ ವರ್ಗಾಯಿಸುವುದರ ಮೇಲೆ ಇನ್ನಷ್ಟು ಮಿತಿಗಳನ್ನು ಹೇರಿದುವು.

2. ರೆಸ್ಟಿಟ್ಯೂಷನ್ ಆಫ್ ಮಾರ್ಟ್‌ಗೇಜ್ಡ್ ಲ್ಯಾಂಡ್ಸ್ ಶಾಸನವು 1901 ಕ್ಕಿಂತ ಮೊದಲು ನಡೆದಿದ್ದ ಎಲ್ಲಾ ಅಡಮಾನಗಳನ್ನು ಸುಲಭವಾದ ಷರತ್ತುಗಳ ಮೇಲೆ ರದ್ದುಪಡಿಸಿತು.

3. ಅಗ್ರೀಕಲ್ಚರಲ್ ಮಾರ್ಕೆಟ್ಸ್ ಪ್ರಾಡಕ್ಟ್ ಆಕ್ಟ್ ಮಾರುಕಟ್ಟೆಗಳಲ್ಲಿ ಅಜ್ಞಾನಿಯಾದ ರೈತನಿಗೆ ನ್ಯಾಯವಾಗಿ ಸಲ್ಲಬೇಕಾದ ಹಣವನ್ನು ಕೊಡದೆ ಮೋಸ ಮಾಡುತ್ತಿದ್ದಂತಹ ಆಕ್ರಮಗಳನ್ನು ತಡೆಯುವ ಉದ್ದೇಶವನ್ನು ಹೊಂದಿತ್ತು.

4. ರಿಜಿಸ್ಟ್ರೇಷನ್ ಆಫ್ ಮನಿಲೆಂಡರ್ಸ್ ಆಕ್ಟ್, ಬಡ್ಡಿಗೆ ಸಾಲ ಕೊಡುವವನು ಲೈಸೆನ್ಸ್ ಪಡೆದಿರದಿದ್ದರೆ ಅಥವಾ ಅರ್ಜಿ ಹಾಕಿರದಿದ್ದರೆ. ತಾನುಕೊಟ್ಟ ಸಾಲವನ್ನು ವಸೂಲಿ ಮಾಡುವುದರಲ್ಲಿ ನ್ಯಾಯಾಲಯಗಳು ಅವನಿಗೆ ಸಹಾಯ ಮಾಡದಂತೆ ಅವಕಾಶ ಕಲ್ಪಿಸಿತು.

5. ರಿಲೀಫ್ ಆಫ್ ಇಂಡೆಟೆಡ್‌ನೆಸ್ ಆಕ್ಟ್, ಬಂಗಾಳ ಮತ್ತು ಇತರ ಪ್ರಾಂತಗಳಲ್ಲಿನ ಇಂಥವೇ ಶಾಸನಗಳಂತೆ, ಬಡ್ಡಿಯ ದರಕ್ಕೆ ಮಿತಿಯನ್ನು ಹಾಕಿತು. ಸಾಲ ಪಡೆದವರನ್ನು ಬಂಧಿಸುವುದನ್ನು ನಿಷೇಧಿಸಿತು. ಸಾಲ ವಸೂಲಿಗಾಗಿ ಸಾಲ ಕೊಟ್ಟವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದನ್ನು ತಡೆಯಿತು.

1940 ರ ಕೊನೆಗೆ ಸರ್ಕಾರವು ಮೂರು ಕ್ರಮಗಳನ್ನು ಕೈಗೊಂಡಿತು.

1) ನಗರದ ಸ್ಥಿರ ಸ್ವತ್ತುಗಳ ಮೇಲಿನ ತೆರಿಗೆ

2) ನಗರ ಪ್ರದೇಶದಲ್ಲಿ ತೆರಿಗೆಯನ್ನು, ಮಿತಿಗೊಳಿಸುವುದು. ಆ ಮೂಲಕ ಜಮೀನ್ದಾರರು ತೆರಿಗೆತ ಹೊರೆಯನ್ನು ಗೇಣಿದಾರರ ಮೇಲೆ ಹೊರಿಸದಂತೆ ಮಾಡುವ ಮಸೂದೆ ಮತ್ತು

3) ಸಾಮಾನ್ಯವಾದ ಮಾರಾಟ ತೆರಿಗೆ. ಈ ಎಲ್ಲಾ ಕ್ರಮಗಳನ್ನು ವಿಶೇಷವಾಗಿ ಮೂರನೆಯದನ್ನು ತೀವ್ರವಾಗಿ ನಿರೋಧಿಸಲಾಯಿತು. ಸ್ಥಳೀಯ ಕಾಂಗ್ರೆಸ್ಸಿಗರಿಗೆ ಹೈಕಮಾಂಡ್‌ನ ಬೆಂಬಲವಿದ್ದಿತು. ಹೈಕಮಾಂಡ್‌ನ ಆದೇಶದಂತೆ ಅವರು ಅಸೆಂಬ್ಲಿಯಿಂದ ಹೊರಕ್ಕೆ ಬಂದರು, ಅದರ ನೆರವಿನಿಂದ ಚಳುವಳಿಯನ್ನು ಹೊರಗೆ ವ್ಯಾಪಕವಾಗಿಯೂ ಪರಿಣಾಮಕಾರಿಯಾಗಿಯೂ ವ್ಯವಸ್ಥಿತಗೊಳಿಸಲಾಯಿತು. 1940 ರ ಡಿಸೆಂಬರ್‌ನಲ್ಲಿ ಅಮೃತಸರದಲ್ಲಿ ಸ್ಥಳೀಯ ಹರತಾಳ ನಡೆಯಿತು; 1941 ರ ಮೇ ತಿಂಗಳಲ್ಲಿ ಇನ್ನೂ ವ್ಯಾಪಕವಾಗಿ ನಡೆಯಿತು". ಕಷ್ಟಗಳು ಬಹಳ ಕಾಲ ಹಾಗೆಯೇ ಮುಂದುವರಿದಿದ್ದವು. ಲಾಹೋರ್ ನಗರದ ರಸ್ತೆಗಳಲ್ಲಿ ರೌಡಿತನ ತಾಂಡವವಾಡಿತು. ಮೆರವಣಿಗೆಗಳನ್ನು ಪೋಲೀಸರು ಚದುರಿಸಿದರು. ಅಸೆಂಬ್ಲಿಯ ಆರು ಜನ ಕಾಂಗ್ರೆಸ್ ಸದಸ್ಯರನ್ನು ಬಂಧಿಸಲಾಯಿತು. ಆದರೆ 1942 ರ ಫೆಬ್ರವರಿ ವೇಳೆಗೆ ಪರಿಸ್ಥಿತಿ ಶಾಂತವಾಯಿತು. ಸರಕಾರವು ಕೈಗೊಂಡ ಮುಖ್ಯ ಕ್ರಮಗಳಲ್ಲಿ ಈ ಕೆಲವು ವಿಶೇಷ ಗಮನಕ್ಕೆ ಅರ್ಹವಾಗಿವೆ.

### (c) ಅಸ್ಸಾಂ

ಅಸ್ಸಾಮಿನ ಜನಸಂಖ್ಯೆ 10 ಮಿಲಿಯನ್ ಮಾತ್ರ. ನಗರದ ಅಥವಾ ಕೈಗಾರಿಕೆಯ ಅಭಿವೃದ್ಧಿಯನ್ನುವುದು ಇರಲಿಲ್ಲ. ಆದರೂ ಹದಿನಾಲ್ಕಕ್ಕೆ ಕಡಿಮೆಯಿಲ್ಲದಷ್ಟು ಸಂಖ್ಯೆಯ ರಾಜಕೀಯ ಪಕ್ಷಗಳಿದ್ದವು. "ಅಸೆಂಬ್ಲಿಯ 108 ಸ್ಥಾನಗಳಲ್ಲಿ 35 ಕಾಂಗ್ರೆಸ್‌ಗರಿಗೆ ಹೋದವು. (ಅವರಲ್ಲಿ ಒಬ್ಬ ಮುಸ್ಲಿಂ) 34 ಸ್ಥಾನಗಳು ಮುಸ್ಲಿಂ ಪಕ್ಷಗಳಿಗೆ (14 ಸ್ವತಂತ್ರ ಮುಸ್ಲಿಮರು, 9 ಮುಸ್ಲಿಂ ಲೀಗ್, 5 ಅಸ್ಸಾಂ ಕಣಿವೆ ಮುಸ್ಲಿಮರು, 5 ಸುರ್ಮಾ ಕಣಿವೆ ಮುಸ್ಲಿಮರು, 1 ಪ್ರಜಾಪಕ್ಷ), 10 ಸ್ವತಂತ್ರ ಹಿಂದೂಗಳಿಗೆ, 4 ಸ್ಥಾನಗಳು ಕಾರ್ಮಿಕರಿಗೆ, 3 ಯುನೈಟೆಡ್ ಪೀಪಲ್ಸ್ ಪಾರ್ಟಿಗೆ, 2 ಇಂಡಿಯನ್ ಪ್ಲಾಂಟರ್ನ್‌ಗೆ, 1ಭಾರತೀಯ ಕ್ರಿಶ್ಚಿಯನ್ನರಿಗೆ, 1 ಸ್ವತಂತ್ರ ಮಹಿಳೆಗೆ, 9 ಸ್ಥಾನಗಳು ಯುರೋಪಿಯನ್ನರಿಗೆ ಸೇರಿದವು. ಕೌನ್ಸಿಲ್ ಅಥವಾ ಮೇಲ್ಮನೆಯ 21 ಸದಸ್ಯರ ಪೈಕಿ 10 ಜನ ಮಧ್ಯಗಾಮಿಗಳು (ಹಿಂದೂ) 6 ಸ್ವತಂತ್ರ ಮುಸ್ಲಿಮರು, 2 ಯುರೋಪಿಯನ್ನರು ಮತ್ತು 3 ಜನ ನಾಮಕರಣ ಸದಸ್ಯರು".

"ಪ್ರಸಿದ್ಧ ಮುಸ್ಲಿಂ ವಕೀಲ ಸರ್ ಸಯ್ಯದ್ ಮಹಮ್ಮದ್ ಸಲಿದುಲ್ಲಾ ಅವರನ್ನು ಸರ್ಕಾರ ರಚಿಸುವಂತೆ ಹೇಳಲಾಯಿತು. ಇಬ್ಬರು ಮುಸ್ಲಿಮರು, ಒಬ್ಬ ಭಾರತೀಯ ಕ್ರಿಶ್ಚಿಯನ್ ಮತ್ತು ಒಬ್ಬ ಕಾಂಗ್ರೆಸೇತರ ಹಿಂದೂ (ಆರ್. ಚೌಧರಿ) ಇವರನ್ನು ತನ್ನ ಸಹೋದ್ಯೋಗಿಗಳನ್ನಾಗಿ ಆರಿಸಿಕೊಂಡು ಅವರು ಸಾಕಷ್ಟು ಪ್ರಮಾಣದಲ್ಲಿ ವಿರೋಧೀ ಮುಸ್ಲಿಂ ಒಣಗಳಿಂದಲೂ ಸಹಕಾರ ಪಡೆಯುವಲ್ಲಿ ಯಶಸ್ವಿಯಾದರು. ಯುರೋಪಿಯನ್ನರು ಮತ್ತು ಕೆಲವು ಸ್ವತಂತ್ರರೂ ಸೇರಿ ಅವರಿಗೆ ಅಸೆಂಬ್ಲಿಯಲ್ಲಿ ಬಹುಮತವು ದೊರಕಿತು".

ಬಹುಮತವು ಹೊಯ್ದಾಡುವ ಸ್ಥಿತಿಯಲ್ಲಿತ್ತು. ಸಮ್ಮಿಶ್ರ ಸರ್ಕಾರವನ್ನು ರಚಿಸಲು ಕಾಂಗ್ರೆಸ್ ನಿರಾಕರಿಸಿತು. ಸಲಿದುಲ್ಲಾ ಅವರ ಇಬ್ಬರು ಮುಸ್ಲಿಂ ಸಹೋದ್ಯೋಗಿಗಳು ತುಂಬಾ ಅಸಮರ್ಥರಾಗಿದ್ದರು. ಮಾರ್ಚಿಯಲ್ಲಿ ಮಂಡಿಸಲಾದ ಅವಿಶ್ವಾಸ ಸೂಚನೆಯು

ಒಂದು ಓಟಿನಿಂದ ಬಿದ್ದುಹೋಗಿ ಸಂಪುಟ ಉಳಿದುಕೊಂಡಿತಾದರೂ ಸೆಪ್ಟೆಂಬರ್‌ನಲ್ಲಿ ಅಂಥವೇ ನಾಲ್ಕು ಅವಿಶ್ವಾಸ ಸೂಚನೆಗಳನ್ನು ಮಂಡಿಸಿದಾಗ ಸಂಪುಟವು ರಾಜೀನಾಮೆ ಕೊಟ್ಟಿತು. ಆಮೇಲೆ ಕಾಂಗ್ರೆಸ್ ನಾಯಕ ಗೋಪೀನಾಥ ಬರ್ದೋಲಾಯ್ ಸಚಿವ ಸಂಪುಟವನ್ನು ರಚಿಸಿದರು. ಅದು ನಿಜವಾಗಿಯೂ ಸಮ್ಮಿಶ್ರ ಸಂಪುಟವಾಗಿತ್ತು. ಏಕೆಂದರೆ 8 ಜನ ಮಂತ್ರಿಗಳಲ್ಲಿ ಇಬ್ಬರು ಮಾತ್ರ ಕಾಂಗ್ರೆಸಿಗರಾಗಿದ್ದರು. ಆಡಳಿತ ಬಹಳ ದುರ್ಬಲವಾಗಿತ್ತು. ಮುಖ್ಯವಾಗಿ ಕೈಗೊಂಡ ಕ್ರಮಗಳು ಇವು.

1. ಬಡಕೃಷಿಕರು ಕೊಡಬೇಕಾದ ಬಾಕಿಯನ್ನು ಇಳಿಸಿದುದು;
2. ಪ್ರಾಂತದಲ್ಲಿ ಸೆರೆಯಾಗಿದ್ದ ಕೆಲವು ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿದುದು, ಮತ್ತು
3. ಎರಡು ಡಿವಿಜನಲ್ ಕಮೀಷನರ್ ಹುದ್ದೆಗಳಲ್ಲಿ ಒಂದನ್ನು ರದ್ದುಪಡಿಸಿದುದು.

**(d) ಸಿಂಧ್**

ಸಿಂಧ್ ಪ್ರಾಂತ್ಯದ ಜನಸಂಖ್ಯೆ 45 ಲಕ್ಷ ಮಾತ್ರ. ಇವರಲ್ಲಿ ಶೇ. 71 ರಷ್ಟು ಮುಸ್ಲಿಮರು ಮತ್ತು ಶೇ. 27 ಹಿಂದೂಗಳು. ವಾಸ್ತವವಾಗಿ ಅದನ್ನು ಬೊಂಬಾಯಿಯಿಂದ ಕಳಚಿ ಕೇವಲ ಮತೀಯ ಆಧಾರದ ಮೇಲೆ ಪ್ರತ್ಯೇಕ ಪ್ರಾಂತ್ಯವನ್ನಾಗಿ ಮಾಡಲಾಗಿತ್ತು. ಮುಸ್ಲಿಂ ಬಹುಮತದ ಪ್ರಾಂತಗಳ ಸಂಖ್ಯೆಯನ್ನು ಹೆಚ್ಚಿಸಬೇಕೆನ್ನುವುದು ಅದರ ಹಿಂದಿದ್ದ ಉದ್ದೇಶವಾಗಿತ್ತು. ಆದರೆ ಜನಸಂಖ್ಯೆಯ ಪರಿಣಾಮವು ಸಿಂಧ್‌ನಲ್ಲಿ ಎರಡೂ ಸಮುದಾಯಗಳ ಸಾಪೇಕ್ಷ ಪ್ರಾಮುಖ್ಯದ ಸರಿಯಾದ ಚಿತ್ರವನ್ನು ಕೊಡುವುದಿಲ್ಲ. ಸಾಗರೋತ್ತರ ವಾಣಿಜ್ಯವೂ ಸೇರಿದಂತೆ ವ್ಯವಹಾರವು ಸಂಪೂರ್ಣವಾಗಿ ಹಿಂದೂಗಳ ಮತ್ತು ಕೆಲವು ಪಾರ್ಸಿಗಳ ಕೈಗಳಲ್ಲಿತ್ತು. ಹಾಗಾಗಿ ಅವರು ಇಡೀ ಸಮುದಾಯದ ಮೇಲೆ ಆರ್ಥಿಕ ಹತೋಟಿಯನ್ನು ಹೊಂದಿದ್ದರು. ಧಾರ್ಮಿಕ ಆಧಾರದ ಮತೀಯತೆಯ ಲೌಕಿಕ ಹಿತಾಸಕ್ತಿಗಳಿಂದ ಕಹಿಗೊಂಡಿದ್ದಿತು. ಏಕತೆಯ ಕೊರತೆ, ಹಾಗೂ ಹಿಂದೂ-ಮುಸ್ಲಿಂ ಇಬ್ಬರಲ್ಲೂ ಪಕ್ಷಗಳ ಅಧಿಕ ಸಂಖ್ಯೆ ಇವುಗಳಿಂದಾಗಿ ಪರಿಸ್ಥಿತಿಯು ಇನ್ನೂ ಕೆಟ್ಟುಹೋಗಿದ್ದಿತು.

"ಚುನಾವಣಾ ಫಲಿತಾಂಶವು ಅಸೆಂಬ್ಲಿಯ 60 ಸ್ಥಾನಗಳಲ್ಲಿ 18 ಸ್ಥಾನಗಳನ್ನು ಸಿಂಧ್ ಯುನೈಟೆಡ್ ಪಾರ್ಟಿಗೆ ಕೊಟ್ಟಿತು. ಅದೇ ಮುಖ್ಯವಾದ ಮುಸ್ಲಿಂ ಪಕ್ಷ. 11 ಸ್ಥಾನ ಸಿಂಧ್ ಹಿಂದೂ ಸಭಾಕ್ಕೆ ಹೋಯಿತು. 9 ಜನ ಸ್ವತಂತ್ರ ಮುಸ್ಲಿಂರಿದ್ದರು. 8 ಕಾಂಗ್ರೆಸ್ಸಿಗರು, 4 ಸ್ಥಾನವಾದ ಸಿಂಧ್ ಮುಸ್ಲಿಂ ಪಾರ್ಟಿ, 3 ಸಿಂಧ್, ಅಜಾದ್ ಪಾರ್ಟಿ (ಕಾಂಗ್ರೆಸಿನೊಂದಿಗೆ ಸಹಯೋಗವಿದ್ದ ಇನ್ನೊಂದು ಮುಸ್ಲಿಂ ಪಕ್ಷ), 2ಸ್ವತಂತ್ರ ಹಿಂದೂಗಳು, 1 ಸ್ಥಾನ ಕಾರ್ಮಿಕ ಸ್ವತಂತ್ರ, 4 ಜನ ಯಾವುದೇ ಪಕ್ಷದ ಹೆಸರು ಹಾಕಿಕೊಂಡಿರದ ಸ್ವತಂತ್ರರು". ಮುಸ್ಲಿಮರೆಲ್ಲರನ್ನು ಒಂದು ಗುಂಪಾಗಿ ಸಂಘಟಿಸಲು ವಿಫಲರಾದುದರಿಂದ ಯುನೈಟೆಡ್ ಪಕ್ಷದ ಒಬ್ಬ ಮುಸ್ಲೀಂ ಜಮೀನ್‌ದಾರ ಸರ್ ಗುಲಾಂ ಹುಸೇನ್ ಹಿದಾಯುತುಲ್ಲಾ ಒಂದು ಸಮ್ಮಿಶ್ರ ಸಚಿವ ಸಂಪುಟವನ್ನು ರಚಿಸಿದರು. ಒಬ್ಬ ಹಿಂದೂ ಮತ್ತು ಒಬ್ಬ ಮುಸ್ಲೀಂ ಸಹೋದ್ಯೋಗಿಗಳೊಂದಿಗೆ ಮೂರು ಜನರ ಸಚಿವ ಸಂಪುಟ ರಚಿತವಾಯಿತು. ಹಿಂದೂ ಮತ್ತು ಮುಸ್ಲೀಂ ಪಕ್ಷಗಳಲ್ಲಿನ ವಿರೋಧಿ ಬಣಗಳ ಕಚ್ಚಾಟದಿಂದ ಸಂಪುಟವು 1938 ರ ಮಾರ್ಚಿಯಲ್ಲಿ ರಾಜೀನಾಮೆಯಿತ್ತಿತು. ಇನ್ನೊಬ್ಬ ದೊಡ್ಡ ಜಮೀನುದಾರ ಖಾನ್ ಬಹಾಮರ್ ಅಲ್ಲಾಭಕ್ಷ್, ಯಿನೈಟೆಡ್ ಪಾಜಯ ಮತ್ತೊಬ್ಬ ಸದಸ್ಯ, ಒಬ್ಬ ಹಿಂದೂ ಸ್ವತಂತ್ರ ಸದಸ್ಯ ಇವರನ್ನು ಆರಿಸಿಕೊಂಡು ಸಂಪುಟ ರಚಿಸಿದರು. ಕಾಂಗ್ರೆಸ್ ಕಾರ್ಯಕ್ರಮದ ಕೆಲವು ಸಣ್ಣ ಅಂಶಗಳನ್ನು ಅಳವಡಿಸಿಕೊಂಡು ಅವರು ಕಾಂಗ್ರೆಸ್ ಪಕ್ಷದ ಸದ್ಭಾವನೆಯನ್ನುಗಳಲ್ಲಿ ಅಧಿಕಾರದಲ್ಲಿ ಮುಂದುವರಿದರು. "ಸಚಿವರ ವೇತನಗಳನ್ನು ಕಾಂಗ್ರೆಸ್ ಮಟ್ಟಕ್ಕೆ ಇಳಿಸಲಾಯಿತು. ಗೌರವ ನ್ಯಾಯಾಧೀಶರ ಪದವಿಗಳು ರದ್ದಾದವು. ಮಂತ್ರಿಗಳು ಸಾಮಾಜಿಕ ಸಮಾರಂಭಗಳಲ್ಲಿ ಭಾಗವಹಿಸಬಾರದೆಂದು ಕೋರಲಾಯಿತು. ಸೆರೆಯಲ್ಲಿದ್ದ ಒಬ್ಬನೇ 'ರಾಜಕೀಯ ಖೈದಿ' ಒಬ್ಬ ಪಂಜಾಬಿ ಉಗ್ರಗಾಮಿಯನ್ನು, ಬಿಡುಗಡೆ ಮಾಡಲಾಯಿತು. ಮುಂದಿನ ಅಧಿವೇಶನದಲ್ಲಿ 1935 ರ ಶಾಸನದಲ್ಲಿ ಹೇಳಿದ ಫೆಡರಲ್ ಯೋಜನೆಯನ್ನು ತಿರಸ್ಕರಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ವಿವಿಧ ಸ್ಥಳೀಯ ಸರ್ಕಾರಿ ಸಂಸ್ಥೆಗಳ ನಾಮಕರಣ ಸ್ಥಾನಗಳನ್ನು ರದ್ದುಪಡಿಸಲಾಯಿತು".

ಆದರೆ 1935 ರ ಶಾಸನದಲ್ಲಿ ಉಕ್ತವಾಗಿದ್ದಂತೆ ಗ್ರೇಟ್ ಲಾಯ್ಡ್ ಬ್ಯಾರೇಜ್ ಮತ್ತು ಕಾಲುವೆ ಯೋಜನೆಯ ಸಾಲವನ್ನು ನಿರ್ವಹಿಸುವ ಸಲುವಾಗಿ, ನೂತನವಾಗಿ ನೀರಾವರಿಗೊಳಪಟ್ಟ ಜಮೀನುಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳಬೇಕೆಂಬ ನೀತಿಯನ್ನು

ಕಾಂಗ್ರೆಸ್ ಸದಸ್ಯರು ವಿರೋಧಿಸಿದರು. ಆದರೆ ಕಾಂಗ್ರೆಸ್ ನಾಯಕ ವಲ್ಲಭಭಾಯಿ ಪಟೇಲ್ ಮಿತಮಾರ್ಗವನ್ನು ಸಲಹೆ ಮಾಡಿದ್ದರು. ಅದೇ ಸಮಯಕ್ಕೆ ಸಿಂಧ್ ಸರ್ಕಾರವನ್ನು ಲೀಗ್ ಸರ್ಕಾರವನ್ನಾಗಿ ಪರಿವರ್ತಿಸಲು ಜಿನ್ನಾ ಪ್ರಯತ್ನಿಸಿದರು. ಸ್ಥಳೀಯ ದೇಶ ಪ್ರೇಮದ ಭಾವನೆ ಸಿಂಧ್ ಸಿಂಧಿಗಳಿಗೆ ಎಂಬುದು ಕಾಂಗ್ರೆಸಂ ಮತ್ತು ಮುಸ್ಲಿಂ ಲೀಗಂಗಳೆರಡರ ಆಕ್ರಮಣವನ್ನು ತಡೆದುಕೊಳ್ಳಲು ಸರಕಾರಕ್ಕೆ ಶಕ್ತಿ ನೀಡಿತು. ಆದರೆ ಮತೀಯ ಆದೇಶಕ್ಕೆ ಬಲಿಯಾಗಿ ಅದು ಅವಸಾನ ಹೊಂದಿತು.

ಕಷ್ಟವು ಪ್ರಾರಂಭವಾದುದು ನದಿ ದಂಡೆಯ ಮೇಲೆ ಸಕ್ಕೂರಿನಲ್ಲಿ ಮಂಜಿಲ್ಗಾ ಎಂದು ಪ್ರಸಿದ್ಧವಾಗಿದ್ದ ಎರಡು ಗುಮ್ಮಟಗಳಿಗಿರುವ ಕಟ್ಟಡಗಳಿಂದ. ಇವು ಶತಮಾನ ಕಾಲದಿಂದಲೂ ಸರ್ಕಾರದ ವಶದಲ್ಲಿದ್ದವು. ಈ ಎರಡು ಕಟ್ಟಡಗಳ ಪೈಕಿ ಒಂದು ಮಸೀದಿಯೆಂದೂ ಅದನ್ನು ತಮಗೆ ವಹಿಸಿಕೊಡಬೇಕೆಂದೂ ಮುಸ್ಲಿಮರು ಒತ್ತಾಯ ಪಡಿಸಿದರು. ಈ ಬೇಡಿಕೆಗೆ 1939 ರ ಆಗಸ್ಟ್‌ನಲ್ಲಿ ಬಲವಾಗಿ ಒತ್ತಾಯ ಹೇರಲಾಯಿತು. ಹಿಂದೂ ಮತ್ತು ಮುಸ್ಲಿಂ ಸಚಿವರು ಮುಸ್ಲಿಂರ ಬೇಡಿಕೆಯ ವಿರುದ್ಧವಾಗಿ ಭಿನ್ನಾಭಿಪ್ರಾಯ ಹೊಂದಿದುದರಿಂದ ಸರ್ಕಾರದೊಂದಿಗೆ ಸಂಧಾನವು ಕುಸಿದು ಬಿದ್ದಿತು. ಅಕ್ಟೋಬರ್ 1ರಂದು ಮುಸ್ಲಿಮರು ಸತ್ಯಾಗ್ರಹವನ್ನು ಪ್ರಾರಂಭಿಸಿದರು. ನೂರಾರು ಜನ ಸ್ವಯಂ ಸೇವಕರು ಬಂಧನಕ್ಕೊಳಪಟ್ಟರು. ಎರಡು ದಿನಗಳ ತಾಳ್ಮೆಯ ನಂತರ ಅಹಿಂಸಾಮಾರ್ಗವನ್ನು ಕೈಬಿಟ್ಟು ಮುಸ್ಲಿಮರು ಬಲತ್ಕಾರವಾಗಿ ಕಟ್ಟಡವನ್ನು ಆಕ್ರಮಿಸಿಕೊಂಡರು. ಪ್ರಾಂತದ ಉತ್ತರ ಭಾಗದ ಗೌರವಾನ್ವಿತ ಹಿಂದೂ ಕವಿಯ ಕೊಲೆಯಿಂದ ಸಕ್ಕೂರಿನ ಮತೀಯ ಪರಿಸ್ಥಿತಿ ಬಿಗಡಾಯಿಸಿತು.

ಸಚಿವ ಸಂಪುಟಗಳು ವೇಗವಾಗಿ ಬದಲಾಗುತ್ತಿದ್ದರೂ ಹಲವಾರು ಸಾಮಾಜಿಕ ಕಾಯಿದೆಗಳು ಜಾರಿಗೆ ಬಂದವು. ಪ್ರಾಥಮಿಕ ಶಿಕ್ಷಣ ಶಾಸನವು ಆಡಳಿತ ಯಂತ್ರವನ್ನು ಪುನರ್ ವ್ಯವಸ್ಥೆಗೊಳಿಸಿತು. ಇನ್ನೊಂದು ಶಾಸನವು ಮೇಲುವರ್ಗದ ಜಮೀನುದಾರರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿತು. ಸಾಲಗಾರರಿಗೆ ಪರಿಹಾರ ಕೊಡುವ ಎರಡು ಶಾಸನಗಳೂ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವ ಇನ್ನೆರಡು ಶಾಸನಗಳೂ ಅಂಗೀಕೃತವಾದವು. ಕ್ಷಾಮ ಪರಿಹಾರ ನಿಧಿ ಶಾಸನವು 12 ಲಕ್ಷ ರೂಪಾಯಿಗಳ ನಿಧಿಯನ್ನು ಮೀಸಲಾಗಿಡಲು ಅವಕಾಶ ಕಲ್ಪಿಸಿತು.

## 93.2 ನೂತನ ಕಾಯಿದೆಯ ಪ್ರಕಾರ ಸಚಿವ ಸಂಪುಟಗಳ ರಚನೆ (ಕಾಂಗ್ರೆಸ್ ಪ್ರಾಂತ್ಯಗಳು)

ಸೈಮನ್ ಆಯೋಗದ ವರದಿಯಲ್ಲಿ ದುಂಡು ಮೇಜಿನ ಪರಿಷತ್ತಿನ ಚರ್ಚೆಗಳಲ್ಲೂ, ಒಂದು ವಿಷಯವು ಒಪ್ಪಿತವಾದಂತಾಗಿತ್ತು. ಪ್ರಾಂತೀಯ ಸಚಿವ ಸಂಪುಟಗಳಲ್ಲಿ ಮುಖ್ಯವಾದ ಅಲ್ಪ ಸಂಖ್ಯಾತ ಸಮುದಾಯಗಳಿಗೆ, ವಿಶೇಷತಃ ಮುಸ್ಲಿಮರಿಗೆ ಪ್ರಾತಿನಿಧ್ಯವನ್ನು ಕೊಡಬೇಕಾಗಿತ್ತು, ಕೊಡಲಾಗುತ್ತದ ಎಂಬುದೇ ಅದು. ಆದರೆ ಕೆಲವು ಮುಸ್ಲಿಂ ನಾಯಕರ ಸಲಹೆಯಂತೆ ಅದನ್ನು ಶಾಸನಬದ್ಧ ಕರ್ತವ್ಯವನ್ನಾಗಿ ಮಾಡಲಿಲ್ಲ. ಏಕೆಂದರೆ "ಶಾಸನದ ವಿಧಿಯಂತೆ ಅಲ್ಪಸಂಖ್ಯಾತರ ಪ್ರಾತಿನಿಧ್ಯವನ್ನು ತರುವುದಾದ ಪಕ್ಷದಲ್ಲಿ, ಸಚಿವರ ಜಂಟಿ ಹೊಣೆಗಾರಿಕ ಎಂಬ ಸ್ವೀಕೃತ ತತ್ವಕ್ಕೆ ಅದು ಅಡ್ಡಿಯಾಗಬಹುದು; ಏಕೆಂದರೆ ತಾವು ಸ್ವಯಂ ಪ್ರೇರಿತವಾಗಿ ಮತ್ತು ಹೃತ್ಪೂರ್ವಕವಾಗಿ ಸೇರಿಕೊಂಡಿದ್ದ ಹೊರತು ಯಾವುದಕ್ಕೂ ತಾವು ಜಂಟಿಯಾಗಿ ಜವಾಬ್ದಾರರು ಎಂದು ಭಾವಿಸುವುದು ಅವರಿಗೆ ಅಸಾಧ್ಯವಲ್ಲದಿದ್ದರೂ ಕಷ್ಟಸಾಧ್ಯವಾಗುತ್ತದೆ" ಎಂದು ಭಾವಿಸಲಾಯಿತು. ಆದ್ದರಿಂದ ಈ ವಿಷಯವಾಗಿ ಶಾಸನದಲ್ಲಿ ಏನನ್ನು ಹೇಳಲಿಲ್ಲ. ಆದರೆ ಗವರ್ನರ್‌ರಿಗೆ ಕೊಟ್ಟ ಸೂಚನೆಗಳಲ್ಲಿ, 'ಸಾಧ್ಯವಾದ ಮಟ್ಟಿಗೂ ಮಂತ್ರಿ ಮಂಡಲಗಳಲ್ಲಿ ಅಲ್ಪ ಸಂಖ್ಯಾತ ಸಮುದಾಯಗಳ ಸದಸ್ಯರು ಸೇರಿರುವಂತೆ ನೋಡಿಕೊಳ್ಳತಕ್ಕದ್ದು'ಎಂದೂ ಸಚಿವರಲ್ಲಿ ಕೂಡ ಹೊಣೆಗಾರಿಕೆಯ ಭಾವನೆಯು ಬೆಳೆಯುವ ಅಗತ್ಯವನ್ನು ಸದಾ ಮನಸ್ಸಿನಲ್ಲಿಟ್ಟುಕೊಂಡಿರತಕ್ಕದ್ದು'ಎಂದೂ ಹೇಳಲಾಗಿತ್ತು.

"ಸೈಮನ್ ಆಯೋಗದಲ್ಲೂ ದುಂಡು ಮೇಜಿನ ಪರಿಷತ್ತಿನ ಸಭೆಯಲ್ಲೂ ವ್ಯಕ್ತವಾದ ಮಂತ್ರಿ ಮಂಡಲಗಳಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯವು ತಾನಾಗಿ ಸಹಜ ಗತಿಯಲ್ಲಿ ಬರುತ್ತದೆ ಎಂಬ ಭಾವನೆಗೆ ಕಾರಣವಿತ್ತು. ಯಾವುದೇ ಒಂದು ವರ್ಷಕ್ಕೆ ಅಲ್ಪಸಂಖ್ಯಾತರ ಬೆಂಬಲವಿಲ್ಲದೆ ಕಾರ್ಯ ನಿರ್ವಹಿಸಲು ಸಾಕಷ್ಟು ಬಲವಿರುವುದಿಲ್ಲ ಎಂಬ ನಂಬಿಕೆಯೇ ಅದು. ಆದರೆ ಚುನಾವಣಾ ಫಲಿತಾಂಶಗಳು ಇದನ್ನು ಸುಳ್ಳಾಗಿಸಿದವು. ಐದು ಪ್ರಾಂತಗಳಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತವನ್ನು ಪಡೆದುವು. ಇನ್ನೆರಡರಲ್ಲಿ ಒಂದೋ, ಎರಡೋ, ತನಗೆ ಸಹಾನುಭೂತಿಯುತವಾಗಿದ್ದ ಪಕ್ಷಗಳ ಬೆಂಬಲ ಅದಕ್ಕೆ ಬೇಕಾಯಿತು. ಆದ್ದರಿಂದ ಒಟ್ಟಿನಲ್ಲಿ ಹೇಳುವುದಾದರೆ, ಕಾಂಗ್ರೆಸ್ಸಿಗೆ ಅಲ್ಪಸಂಖ್ಯಾತ ಪಕ್ಷಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾದ ಅಗತ್ಯ ಬರಲಿಲ್ಲ. ಅತ್ಯಂತ ಪ್ರಬಲವಾದ ಮುಸ್ಲೀಂ ಲೀಗಿನೊಂದಿಗೂ ಕರಾರು ಮಾಡಿಕೊಳ್ಳಬೇಕಾಗಲಿಲ್ಲ".

ಕಾಂಗ್ರೆಸ್ ಅಧಿಕಾರ ಸ್ವೀಕಾರಕ್ಕೆ ಮುಂದುಡಿಯಿಟ್ಟಾಗ, ಕಾಂಗ್ರೆಸ್ ಪ್ರಾಂತಗಳಲ್ಲಿ ಸಚಿವರನ್ನು ಕಾಂಗ್ರೆಸ್ ಪಕ್ಷದಿಂದ ಮಾತ್ರವೇ ಆಯ್ಕೆ ಮಾಡಿಕೊಳ್ಳಬೇಕು ಎಂಬ ಒಟ್ಟು ತತ್ತ್ವದೊಂದಿಗೆ ಕಾರ್ಯಾರಂಭಮಾಡಲು ನಿರ್ಧರಿಸಿದರು. ಅವರು ತಮ್ಮ ನಿಲುವಿನಲ್ಲಿ ದೃಢವಾಗಿದ್ದರು. ಏಕೆಂದರೆ ಶಾಸನ ಸಭೆಯಲ್ಲಿ ಕಾಂಗ್ರೆಸ್ ಬಹುಸಂಖ್ಯಾತ ಪಕ್ಷವಾಗಿಲ್ಲದ ಪ್ರಾಂತಗಳಲ್ಲಿ ಅವರು ಸಮ್ಮಿಶ್ರ ಸರ್ಕಾರವನ್ನು ಸೇರಿಕೊಳ್ಳಲು ನಿರಾಕರಿಸಿದರು. ಈ ನಿಲುವಿನ ಪರಿಣಾಮ ಬಂಗಾಳದಲ್ಲಿ ಯಾವ ಫಲ ನೀಡಿತು ಎನ್ನುವುದನ್ನು ಮೇಲೆಯೇ ನೋಡಿದ್ದೇವೆ. ಅದರ ಪರಿಣಾಮಗಳು ಕಾಂಗ್ರೆಸ್ ಪ್ರಾಂತಗಳಲ್ಲಿ ಇನ್ನೂ ಹೆಚ್ಚು ಗಂಭೀರವಾಗಿದ್ದವು. ವಸ್ತುತಃ ಆಚರಣೆಯಲ್ಲಿ ಅಲ್ಪಸಂಖ್ಯಾತ ಪಕ್ಷದ ಸದಸ್ಯನಿಗೆ, ಅವನು ತನ್ನ ಪಕ್ಷ (ಮುಸ್ಲಿಂ ಲೀಗಿನಂತಹ) ವನ್ನು ತೊರೆದು, ಕಾಂಗ್ರೆಸ್ಸಿನ ಸಿದ್ಧಾಂತಗಳನ್ನು ಒಪ್ಪಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಸೇರಬೇಕು. ಇಲ್ಲವೆ, ತನ್ನ ದೇಶದ ಸರಕಾರದಲ್ಲಿ ಭಾಗವಹಿಸುವ ಆಸೆಯನ್ನು ತೊರೆಯಬೇಕು ಎಂದು ಒರಟಾಗಿ ಕಟ್ಟುನಿಟ್ಟಾಗಿ ತಿಳಿಸಲಾಯಿತು. ನಿರೀಕ್ಷಿಸಬಹುದಾದಂತೆ ಮುಸ್ಲಿಂ ಲೀಗ್ ಈ ಸ್ಥಿತಿಯನ್ನು ಒಪ್ಪಿಕೊಳ್ಳಲು ಸಿದ್ಧವಾಗಿರಲಿಲ್ಲ. ಸಂಯುಕ್ತ ಪ್ರಾಂತ (ಯು.ಪಿ) ರಾಜ್ಯಾಂಗದಲ್ಲಿ ಈ ಸಮಸ್ಯೆ ನಿಚ್ಚಳವಾಗಿ ಮೈದೋರಿತು.

ಯು.ಪಿ.ಯಲ್ಲಿ ಮುಸ್ಲಿಮರ ಸಂಖ್ಯೆ ಶೇ. 16 ಮಾತ್ರ. ಆದರೂ ಎರಡು ಕಾರಣಗಳಿಂದಾಗಿ ಅವರು ಪ್ರಬಲವಾದ ಪಕ್ಷವಾಗಿದ್ದರು. ಮೊದಲನೆಯದಾಗಿ, ನಗರದ ಜನ ಸಮುದಾಯದ ಹೆಚ್ಚು ಪ್ರಮಾಣ ಅವರೇ ಆಗಿದ್ದರು. ಎರಡನೆಯದಾಗಿ ಶಿಕ್ಷಣ, ಐಶ್ವರ್ಯ, ಸಾಮಾಜಿಕ ಸ್ಥಾನಮಾನ ಇವುಗಳಲ್ಲಿ ಭಾರತದ ಬೇರೆ ಭಾಗಗಳ ಮುಸ್ಲಿಮರಿಗೆ ಹೋಲಿಸಿದರೆ ಮಾತ್ರವಲ್ಲ. ಯು.ಪಿ.ಯ ಹಿಂದೂಗಳಿಗೆ ಹೋಲಿಸಿದರೂ ಅವರದು ಬಹಳ ಎತ್ತರದ ಸ್ಥಾನವಾಗಿತ್ತು. ಅದಕ್ಕೆ ಮುಖ್ಯ ಕಾರಣ ಅಲಿಘರ್ ವಿಶ್ವವಿದ್ಯಾನಿಲಯ ಹಾಗೂ ಮುಘಲ್ ಯುಗದ ಸ್ಥಳೀಯ ಸಂಪ್ರದಾಯಗಳು. ಭಾರತದಾದ್ಯಂತ ಮುಸ್ಲಿಂ ಜನಾಂಗದಲ್ಲಿ ಹೆಸರು, ಕೀರ್ತಿ ಪಡೆದಿದ್ದ ಅನೇಕ ಸಮರ್ಥ ನಾಯಕರು ಮತ್ತು ಸ್ಥಳೀಯ ಗಣ್ಯರು ಇದ್ದರು.

1937 ರ ಚುನಾವಣೆಯ ಫಲಿತಾಂಶವು ಮುಸ್ಲಿಮರಿಗೆ ಸಂಬಂಧಿಸಿದಂತೆ ತುಂಬಾ ಮಹತ್ವದ್ದಾಗಿತ್ತು. "ಪ್ರಾಂತೀಯ ಅಸೆಂಬ್ಲಿಯ 288 ಸ್ಥಾನಗಳ ಪೈಕಿ, 64 ಸ್ಥಾನಗಳನ್ನು ಬೇರೆ ಬೇರೆ ಮತವರ್ಗಗಳಿಂದ ಆರಿಸದ ಮುಸ್ಲಿಮರಿಗಾಗಿ ಕಾದಿರಿಸಲಾಗಿತ್ತು. 1937 ರ ಚುನಾವಣೆಗಳಲ್ಲಿ ಅವುಗಳಲ್ಲಿ 26 ಸ್ಥಾನಗಳನ್ನು ಮುಸ್ಲಿಂ ಲೀಗ್ ಗೆದ್ದುಕೊಂಡಿತು. 28 ಜನ ಸ್ವತಂತ್ರ ಮುಸ್ಲಿಂರು, 9 ಸ್ಥಾನಗಳು ನ್ಯಾಷನಲ್ ಅಗ್ರಿಕಲ್ಚರ್ ಪಾರ್ಟಿಗೆ ಸೇರಿದುವು. ಒಂದೇ ಒಂದು ಕಾಂಗ್ರೆಸ್ ಮುಸ್ಲಿಮನು ಪಡೆದನು. ಲೀಗ್ ಗೆದ್ದ ಒಂದು ಸ್ಥಾನ ಅವಿರೋಧಿಯಾಗಿ ಆಯ್ಕೆಯಾದದ್ದು. 25 ಸ್ಪರ್ಧೆಗಳ ಪೈಕಿ ಕನಿಷ್ಠ ಪಕ್ಷ 20 ರಲ್ಲಿ ಲೀಗಿನ ಬಹುಮತವು ಗಂಭೀರ್ಯವಾಗಿತ್ತು. ಹಲವು ಸಂದರ್ಭಗಳಲ್ಲಿ ಪ್ರಚಂಡವಾಗಿತ್ತು". ಮೇಲಿನ ನಿರೂಪಣೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಯು.ಪಿಯ ಮುಸ್ಲಿಮರ ಮೇಲೆ ವಸ್ತುತಃ ಯಾವ ಹಿಡಿತವೂ ಇರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಮುಸ್ಲಿಂ ಲೀಗ್ ಮುಂದೆ ಮುಂದೆ ನುಗ್ಗುತ್ತಿದ್ದಾರೆ ಇತರ ಬಹುತೇಕ ಮುಸ್ಲಿಮರು ಯಾವುದೇ ಮತೀಯ ಸಂಸ್ಥೆಯೊಂದಿಗೆ ಸಂಬಂಧ ಬೆಳೆಸಿಕೊಳ್ಳದೆ ಬೇಲಿಯ ಮೇಲೆ ಕುಳಿತೇ ಇದ್ದರು.

ಯು.ಪಿ.ಯಲ್ಲಿ ವ್ಯವಸ್ಥೆಯನ್ನು ಹೊಂದಿದ್ದ ಎರಡೇ ಪಕ್ಷಗಳು ಲೀಗ್ ಮತ್ತು ಕಾಂಗ್ರೆಸ್. ಅವುಗಳ ನಡುವೆ ಮತೀಯ ಪ್ರಾತಿನಿಧ್ಯವೊಂದನ್ನು ಹೊರತುಪಡಿಸಿದರೆ ವಿಚಾರಗಳಲ್ಲಾಗಲಿ, ಕಾರ್ಯಕ್ರಮಗಳಲ್ಲಾಗಲಿ ವ್ಯತ್ಯಾಸವಿರಲಿಲ್ಲ. ಎರಡೂ ಪಕ್ಷಗಳ ಚುನಾವಣಾ ಕಾರ್ಯಕ್ರಮಗಳು ಎಲ್ಲಾ ಮೂಲಭೂತ ವಿಚಾರಗಳಲ್ಲಿ ಸುಮಾರು ಒಂದೇ ಆಗಿದ್ದುವು. ಎರಡು ಪಕ್ಷಗಳ ನಾಯಕರೂ ಚುನಾವಣೆಯಲ್ಲಿ ಹೆಚ್ಚು ಕಡಿಮೆ ಸಮಾನ ವೇದಿಕೆಯಿಂದಲೇ ಹೋರಾಡಿದರು. ಆದರೆ ಕಾಂಗ್ರೆಸ್ ಪಕ್ಷವು ಅಧಿಕಾರವನ್ನು ಸ್ವೀಕರಿಸಲು ನಿರ್ಧರಿಸಿದಾಗ ಎರಡು ಪಕ್ಷಗಳ ನಡುವೆ ಭಿನ್ನಾಭಿಪ್ರಾಯವು ಬಲವಾಗಿ ಕಾಣಿಸಿಕೊಂಡಿತು.

"ಯುನೈಟೆಡ್ ಪ್ರಾವಿನ್ಸಸ್ (ಯು.ಪಿ) ಶಾಸನ ಸಭೆಯಲ್ಲಿ ಮುಸ್ಲಿಂ ಲೀಗ್ ಪ್ರತ್ಯೇಕವಾದ ತಂಡವಾಗಿ ಕಾರ್ಯನಿರ್ವಹಿಸುವಂತಿಲ್ಲ. ಯು.ಪಿ. ಅಸೆಂಬ್ಲಿಯಲ್ಲಿ ಈಗ ಇರುವ ಮುಸ್ಲಿಂ ಲೀಗ್ ಪಕ್ಷದ ಸದಸ್ಯರು ಕಾಂಗ್ರೆಸ್ ಪಕ್ಷದ ಭಾಗವಾಗುತ್ತಾರೆ ಮತ್ತು ಪಕ್ಷದ ಇತರ ಸದಸ್ಯರೊಂದಿಗೆ ಕಾಂಗ್ರೆಸ್ ಪಕ್ಷದ ಸದಸ್ಯರ ಹಕ್ಕುಗಳನ್ನೂ, ಬಾಧ್ಯತೆಗಳನ್ನೂ ಪೂರ್ತಿಯಾಗಿ ಹಂಚಿಕೊಳ್ಳುತ್ತಾರೆ. ಪಕ್ಷದ ವ್ಯವಹಾರಗಳಲ್ಲಿಯೂ ಅವರು ಅದೇ ರೀತಿಯಲ್ಲಿ ಭಾಗವಹಿಸಲು ಅಧಿಕಾರ ಹೊಂದಿರುತ್ತಾರೆ. ಇತರ ಸದಸ್ಯರು ಹೇಗೋ ಹಾಗೆಯೇ ಅವರು ಕಾಂಗ್ರೆಸ್ ಪಕ್ಷದ ಹತೋಟಿಗೂ ಶಿಸ್ತಿಗೂ ಒಳಪಟ್ಟಿರುತ್ತಾರೆ. ಶಾಸನ ಸಭೆಯ ಕಾರ್ಯ ಕಲಾಪಗಳಲ್ಲಿ ಮತ್ತು ಸಾಮಾನ್ಯ ನಡವಳಿಕೆಯಲ್ಲಿ ಕಾಂಗ್ರೆಸ್ ಪಕ್ಷದ ನಿಯಮಗಳಿಗೆ ಅವರು ಬದ್ಧರಾಗಿರುತ್ತಾರೆ. ಎಲ್ಲಾ ವಿಚಾರಗಳಲ್ಲೂ ಒಂದು ಓಟು ಇರುತ್ತದೆ".

ಸರಳವಾದ ಭಾಷೆಯಲ್ಲಿ ಹೇಳುವುದಾದರೆ ಯು.ಪಿಯಲ್ಲಿ ವಾಸ್ತವಿಕ ಉದ್ದೇಶಗಳಿಂದ ಮುಸ್ಲಿಂ ಲೀಗ್ ತನ್ನ ಅಸ್ತಿತ್ವವನ್ನು ಕಳೆದುಕೊಂಡು ಕಾಂಗ್ರೆಸ್‌ನಲ್ಲಿ ವಿಲೀನವಾಗಬೇಕು ಎಂಬುದು ಇದರ ಅರ್ಥವಾಗಿತ್ತು. ಮುಸ್ಲೀಂ ಲೀಗ್ ಇದನ್ನು ಒಪ್ಪಿಕೊಂಡು ಕಾಂಗ್ರೆಸ್‌ನ ಆದೇಶಕ್ಕನುಸುಣವಾಗಿ ರಾಜಕೀಯ ಆತ್ಮಹತ್ಯೆ ಮಾಡಿಕೊಳ್ಳುತ್ತದೆ ಎಂದು ಗಂಭೀರವಾಗಿ ಚಿಂತನೆ ಮಾಡಬಲ್ಲ ಯಾವ ರಾಜಕಾರಣಿಯೂ ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಖಲಿಕ್ ಉಜ್-ಜಮಾನ್ ಅವರು ಜಿನ್ನಾರೊಂದಿಗೆ ಸಮಾಲೋಚನೆ ಮಾಡಿ ಕಾಂಗ್ರೆಸ್ಸಿನ ನೀಡಿಕೆಯನ್ನು ನಿರಾಕರಿಸಿದರು.

ಇಲ್ಲಿ ಕಾಂಗ್ರೆಸ್ ನಾಯಕರು ಕೈಗೊಂಡ ನಿರ್ಣಯವು ತೀರಾ ಅವಿವೇಕದ್ದಾಗಿತ್ತು. ಭಾರೀ ಅನರ್ಥಕಾರಕ ಪರಿಣಾಮಗಳನ್ನು ಉಂಟು ಮಾಡುವುದಿತ್ತು ಎನ್ನುವುದರಲ್ಲಿ ಸಂದೇಹವಿರಲಿಲ್ಲ. ಪ್ರತ್ಯೇಕ ಸಮುದಾಯವಾಗಿ ಇನ್ನು ತಮಗೆ ರಾಜಕೀಯ ಭವಿಷ್ಯವಿಲ್ಲ ಎಂದು ಮುಸ್ಲಿಮರು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದರು. ಕಾಂಗ್ರೆಸ್ ಹಾಕಿದ ಈ ಷರತ್ತುಗಳು ದಾರಿಗಳು ಬೇರಾಯಾಗುವುದಕ್ಕೆ ಸಂಕೇತವಾದುವು. ಅದೇ ಅನಿವಾರ್ಯ ಹಂತಗಳನ್ನು ದಾಟಿ ಪಾಕಿಸ್ತಾನದ ಸ್ಥಾಪನೆಗೆ ಎಡೆಗೊಟ್ಟಿತು.

ಈ ಅತಿಮುಖ್ಯ ಪರಿಣಾಮಗಳ ದೃಷ್ಟಿಯಿಂದ, ಕಾಂಗ್ರೆಸ್ ನಾಯಕರ ನಿರ್ಧಾರದ ಹಿಂದಿದ್ದ ವಿಚಾರಗಳಾವುವು ಎಂಬುದನ್ನು ನೋಡುವುದು ಅಗತ್ಯ. ಕಾಂಗ್ರೇಸೇತರರು ಈ ವಿಷಯವಾಗಿ ಯಾವ ದೃಷ್ಟಿಯನ್ನು ತಳೆದಿದ್ದರು ಎನ್ನುವುದನ್ನು ಕೂಪ್‌ಲ್ಯಾಂಡ್ ಹೀಗೆ ಸಂಗ್ರಹಿಸಿದ್ದಾನೆ:

"ಕಾಂಗ್ರೆಸ್ ವ್ಯವಸ್ಥೆಯು ಬಹು ಪ್ರಾಯ ಏಕಭಿಪ್ರಾಯದ್ದಾಗಿದೆ. ಅಷ್ಟು ಮಾತ್ರವಲ್ಲದೆ, ವಿಷಾದಕರವಾಗಿ ಜಗತ್ತಿನ ಅನುಭವಕ್ಕೆ ಬಂದಿರುವ ಪದವನ್ನು ಬಳಸುವುದಾದರೆ ಅದೇ ಒಳ್ಳೆ ಅಭಿಪ್ರಾಯವೂ ಆಗಿದೆ. ಈ ಏಕ ಪಕ್ಷ ನಿರಂಕುಶಾಧಿಕಾರವು ಅನೇಕ ದೃಷ್ಟಿಗಳಿಂದ, ಅದು ಯುರೋಪಿನಲ್ಲಿ ತಳೆದ ರೂಪಗಳಿಗಿಂತ ಬಹುಪಾಲು ಬೇರೆಯಾಗಿದೆ ನಿಜ. ಆದರೆ ಮೂಲತತ್ವ ಒಂದೇ. 1920 ರಿಂದಲೂ ಕಾಂಗ್ರೆಸ್ ಪಕ್ಷವು ಭಾರತ ಸ್ವಾತಂತ್ರ್ಯ ಹೋರಾಟದ ಏಕೈಕ ಅಧಿಕೃತ ಅಗ್ರೇಸರ ತಾನು ಎಂದು ಹೇಳಿಕೊಂಡಿದೆ. ಬ್ರಿಟಿಷ್ ಇಂಡಿಯಾದ ರಾಷ್ಟ್ರೀಯವಾದಿಗಳೆಲ್ಲರನ್ನೂ, ಅವರ ಮತಧರ್ಮ ಯಾವುದೇ ಇರಲಿ, ತಾನು ಮಾತ್ರವೇ ಪ್ರತಿನಿಧಿಸುವುದಾಗಿ ಹೇಳಿದೆ".

ನೆಹರೂ ತಮ್ಮ ಈ ಆದರ್ಶ ಭಾವನೆಗಳನ್ನು ಹೇಗೆ ಪಟ್ಟಾಗಿ ಹಿಡಿದುಕೊಂಡಿದ್ದರು ಎನ್ನುವುದನ್ನು 1944 ರಲ್ಲಿ ಅವರು ಬರೆದ 'ದಿ ಡಿಸ್ಕವರಿ ಆಫ್ ಇಂಡಿಯಾ' ಕೃತಿಯಿಂದ ತಿಳಿದುಕೊಳ್ಳಬಹುದು. ಅವರು ಹೀಗೆ ಹೇಳುತ್ತಾರೆ:

"ಮತೀಯವೆಂದು ಕರೆದ ಸಮಸ್ಯೆಯು ಅಲ್ಪ ಸಂಖ್ಯಾತರ ಬೇಡಿಕೆಗಳನ್ನು ಹೊಂದಾಣಿಕೆಗೊಳಿಸಿಕೊಂಡು ಬಹುಸಂಖ್ಯಾತರ ಕಾರ್ಯಗಳಿಂದ ಅವಕ್ಕೂ ಸಾಕಷ್ಟು ರಕ್ಷಣೆಯನ್ನು ಕೊಡುವುದಾಗಿದೆ. ಭಾರತದ ಅಲ್ಪಸಂಖ್ಯಾತರ ವರ್ಗಗಳು ಯುರೋಪಿನಲ್ಲಿರುವಂತೆ ಜನಾಂಗಿಕ ಅಥವಾ ರಾಷ್ಟ್ರೀಯ ಅಲ್ಪಸಂಖ್ಯಾತರಲ್ಲ;ಅವರು ಧಾರ್ಮಿಕ ಅಲ್ಪಸಂಖ್ಯಾತರು, ಧಾರ್ಮಿಕ ತಡೆಗಳು ಖಾಯಂ ಅಲ್ಲ ಎಂಬುದು ಸ್ಪಷ್ಟವಾಗಿದೆ. ಏಕೆಂದರೆ ಒಂದು ಮತದಿಂದ ಇನ್ನೊಂದಕ್ಕೆ ಪರಿವರ್ತನೆ ನಡೆಯುವುದು ಸಹಜ. ಮತಾಂತರ ಹೊಂದಿದ ವ್ಯಕ್ತಿಯು ಅದರಿಂದಾಗಿ ತನ್ನ ಜನಾಂಗಿಕ ಹಿನ್ನೆಲೆಯನ್ನು ತನ್ನ ಸಾಂಸ್ಕೃತಿಕ ಮತ್ತು ಭಾಷಾ ಪರಂಪರೆಯನ್ನು ಕಳೆದುಕೊಳ್ಳುವುದಿಲ್ಲ".

ರಾಜೇಂದ್ರಪ್ರಸಾದರು ಮುಂದಿರಿಸಿದ ಅಭಿಪ್ರಾಯವು ತಾತ್ವಿಕವಾಗಿ ಹೆಚ್ಚು ವೈಚಾರಿಕವಾಗಿತ್ತು. ಅವರು ನುಡಿದರು, "ಕಾಂಗ್ರೆಸ್ ಖಚಿತವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಅಸೆಂಬ್ಲಿಗಳನ್ನು ಪ್ರವೇಶಿಸಿದೆ. ಅದು ಖಚಿತವಾದ ನೀತಿಯನ್ನು ಮುಂದುವರಿಸುತ್ತಿದೆ. ಆದ್ದರಿಂದ ಮತದಾರ ವರ್ಗಗಳ ವಂಚನೆಮಾಡದೆ, ತನ್ನ ನೀತಿಯನ್ನೂ ಆ ಕಾರ್ಯಕ್ರಮವನ್ನೂ ಒಪ್ಪದ ವ್ಯಕ್ತಿಗಳನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುವುದು ಕಾಂಗ್ರೆಸ್ಸಿಗೆ ಸಾಧ್ಯವಿಲ್ಲ. ಅದು ಒಂದು ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮ".

## 93.3 ಪ್ರಾಂತೀಯ ಕಾಂಗ್ರೆಸ್ ಸಂಪುಟಗಳ ಮೇಲೆ ಕೇಂದ್ರದ ಹತೋಟಿ

ಕಾಂಗ್ರೆಸ್ ಸಚಿವ ಸಂಪುಟಗಳನ್ನು ಹೈಕಮಾಂಡ್ ಹೇಗೆ ನಿಯಂತ್ರಿಸುತ್ತಿತ್ತು ಎಂಬುದನ್ನು ಮೇಲೆಯೇ ಉಲ್ಲೇಖಿಸಲಾಗಿದೆ. ಈ ಹತೋಟಿಯನ್ನು ವಾಯುವ್ಯ ಗಡಿ ಪ್ರಾಂತದಲ್ಲಿ ಮಾತ್ರ ಚಲಾಯಿಸಲು ಸಾಧ್ಯವಾಗಲಿಲ್ಲ. ಮುಸ್ಲಿಮರು ಶೇಕಡಾ 92 ಕ್ಕೂ ಹೆಚ್ಚು ಪ್ರಮಾಣದಲ್ಲಿದ್ದರು. ಹಿಂದೂಗಳು ಮತ್ತು ಸಿಖ್ಖರು ಕೂಡಿ ಶೇಕಡಾ 76 ಹಿಂದೂ ಆಳ್ವಿಕೆಯ ಭೀತಿ ಅಲ್ಲಿರಲಿಲ್ಲವಾದ ರಿಂದ ಅವರನ್ನು ಕುರಿತ ಅಸಹಿಷ್ಣುತೆಯೂ ಕಡಿಮೆಯಾಗಿತ್ತು. ಈ ಲಕ್ಷಣವೇ ಬ್ರಿಟಿಷ್ ಆಳ್ವಿಕೆಯ ವಿರೋಧವಾಗಿತ್ತು. ಅದರಲ್ಲಿ ಅನನ್ಯ ಕಾಂಗ್ರೆಸಿಗೂ

ಸಮಾನ ಭೂಮಿಕೆಯಿತ್ತು. ಅವರ ನಾಯಕ ಅಬ್ದುಲ್ ಗಫಾರ್ ಖಾನ್, ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳಿಗಾಗಿ ಒಂದು ಕೆಂಪಂಗಿ ಚಳುವಳಿ (ರೆಡ್ ಷರ್ಟ್ ಮೂವ್‌ಮೆಂಟ್) ಯನ್ನು ವ್ಯವಸ್ಥೆಗೊಳಿಸಿದರು. ಅದರ ಸದಸ್ಯರು ತಮ್ಮನ್ನು ಖುದಾಯಿ ಖಿದ್ಮತ್‌ಗಾರರೆಂದು ಕರೆದುಕೊಂಡರು. 'ಭಗವಂತನ ಸೇವಕರು' ಎಂದು ಅದರ ಅರ್ಥ. ಅಬ್ದುಲ್ ಗಫಾರ್‌ಖಾನ್ ಗಾಂಧೀಜಿಯವರ ನಿಷ್ಠಾವಂತ ಅನುಯಾಯಿ. ಸತ್ಯಾಗ್ರಹ ಚಳುವಳಿಯಲ್ಲಿ ಸೇರಿಕೊಂಡಿದ್ದರು. 1935 ರ ಶಾಸನವು ಜಾರಿಗೆ ಬಂದಾಗ, ರೆಡ್ ಷರ್ಟ್‌ಗಳು ಚುನಾವಣೆಯಲ್ಲಿ ಸ್ಪರ್ಧಿಸಿ, ಕಾಂಗ್ರೆಸ್ ಕಾರ್ಯಕ್ರಮಗಳ ಮೇಲೆ ಗೆದ್ದರು. ಆಮೇಲೆ ರೆಡ್ ಷರ್ಟ್ ಬಳಕೆ ತಪ್ಪಿ ಆ ಪಕ್ಷವು ಕಾಂಗ್ರೆಸ್ಸಿನಲ್ಲಿ ವಿಲೀನಗೊಂಡಿತು. ಆದರೂ ಅವರಿಗೆ ಕಾಂಗ್ರೆಸ್ಸಿನೊಂದಿಗೆ ಇದ್ದ ಬೆಸುಗೆ ಸೈದ್ಧಾಂತಿಕವಾದುದಕ್ಕಿಂತ ಹೆಚ್ಚಾಗಿ ವೈಯುಕ್ತಿಕವಾಗಿತ್ತು. ನಾಯಕ ಗಫಾರ್ ಖಾನ್ ಮೂಲಕ.

ಅಬ್ದುಲ್ ಗಫಾರ್ ಖಾನ್‌ರ ಸಹೋದರ ಡಾ. ಖಾನ್ ಸಾಹಿಬ್, ಮೂವರು ಮುಸ್ಲಿಮರು ಮತ್ತು ಒಬ್ಬ ಹಿಂದೂ ಇರುವ ಮಂತ್ರಿ ಸಂಪುಟವನ್ನು ರಚನೆ ಮಾಡಿದರು. ಈ ಪ್ರಾಂತದಲ್ಲಿ ಮುಸ್ಲೀಂ ಲೀಗ್ ಪ್ರಭಾವ ಏನೇನೂ ಇರಲಿಲ್ಲ. ಆದರೆ ಬೆಳೆಯುತ್ತಿದ್ದ ಕಾಂಗ್ರೆಸ್ ಪ್ರಭಾವವು ಲೀಗ್‌ಗೆ ಆಹ್ವಾನವಾಗಿತ್ತು. ಇಪ್ಪತ್ತರ ದಶಕದಲ್ಲಿ 'ಮುಸ್ಲೀಂ ಲೀಗ್' ಎಂಬ ಹೆಸರೇ ಗೊತ್ತಿರದಿದ್ದ ಪ್ರಾಂತದಲ್ಲಿ 1937 ರ ಚುನಾವಣೆಯ ನಂತರ ಒಂದು ಮುಸ್ಲೀಂ ಲೀಗ್ ಪಕ್ಷವನ್ನು ಸ್ಥಾಪಿಸಲಾಯಿತು. ಕೆಲವು ವಿರೋಧಿ ಪಕ್ಷಗಳು ಮುಸ್ಲೀಂ ಲೀಗ್‌ನ ಕೆಳಗೆ ಸೇರಿಕೊಂಡವು. ಒಂದೆರಡು ಉಪಚುನಾವಣೆಗಳಲ್ಲಿ ಗೆಲುವನ್ನೂ ಪಡೆದವು. ಇದು ಕಾಂಗ್ರೆಸ್ ಹೈಕಮಾಂಡಿನ ಸಂಬಂಧವಿಲ್ಲದ ಸ್ವತಂತ್ರವಾಗಿ ಕೆಲಸ ಮಾಡಲು ಡಾ. ಖಾನ್ ಸಾಹೇಬರಿಗೆ ಬಲವನ್ನು ಕೊಟ್ಟಿತು.

ಸಾಮಾನ್ಯವಾಗಿ ಹೇಳುವುದಾದರೆ, ಕಾಂಗ್ರೆಸ್ ಸಚಿವರು ಸಮುದಾಯ ಮನೋಭಾವದಿಂದ, ಸಾಮರಸ್ಯದಿಂದ ಕೆಲಸ ಮಾಡುತ್ತಿದ್ದರು. ಆದರೆ ಮಧ್ಯ ಪ್ರಾಂತಗಳ ಸಂಪುಟವು ಮಾತ್ರ ಇದಕ್ಕೆ ಹೊರತಾಯಿತು. ಪ್ರಾರಂಭದಿಂದಲೂ ಈ ಸಂಪುಟವು ವಿಚಿತ್ರವಾದ ಕಷ್ಟಗಳನ್ನು ಎದುರಿಸಬೇಕಾಯಿತು. ಪ್ರಾಂತದಲ್ಲಿ ಮರಾಠಿ ಮತ್ತು ಹಿಂದಿ ಮಾತನಾಡುವ ಎರಡು ಪ್ರಧಾನ ವರ್ಗಗಳಿದ್ದವು. ಅವರ ನಡುವೆ ಮೈತ್ರಿಯಿರಲಿಲ್ಲ. ಮುಖ್ಯ ಮಂತ್ರಿಯಾದ ಡಾ. ಖರೆ ಮಹಾರಾಷ್ಟ್ರದಿಂದ ಬಂದವರು, ಅವರು ಕಾಂಗ್ರೆಸ್ ಹೈಕಮಾಂಡಿನ ಸದ್ಭಾವನೆಯನ್ನು ಸಂಪಾದಿಸಿರಲಿಲ್ಲ.

ಮೊದಲಿನಿಂದಲೂ ಖರೆ ಸಂಪುಟವು ಆಂತರಿಕ ಭಿನ್ನಮತಗಳಿಂದ ಒಡೆದಿತ್ತು. ಎರಡೂ ವರ್ಗಗಳು ಕಾಂಗ್ರೆಸ್ ಹೈಕಮಾಂಡಿನೊಂದಿಗೆ ಹೊಂದಿದ್ದ ಸಂಬಂಧವು ಎಷ್ಟರ ಮಟ್ಟಿಗೆ ಈ ಬಿರುಸಿಗೆ ಪ್ರೋತ್ಸಾಹ ನೀಡುತ್ತಿದ್ದಿತು ಎನ್ನುವುದನ್ನು ನಿರ್ಧರಿಸುವುದು ಸುಲಭವಲ್ಲ. ಬಿಕ್ಕಟ್ಟು ಪ್ರಾರಂಭವಾದುದು ಶ್ರೀ. ಎಂ. ವೈಷರೀಫ್ ಎಂಬ ಕಾನೂನು ಸಚಿವರು ಮಾಡಿದ ಒಂದು ಕೆಲಸದಿಂದ. ಆತ ಮುಸ್ಲಿಂ ಲೀಗಿನಿಂದ ಪರಿವರ್ತಿತವಾಗಿ ಬಂದಿದ್ದವರು. ಒಬ್ಬ ಹಿಂದೂ ಬಾಲಕಿಯ ಮೇಲೆ ಅತ್ಯಾಚಾರ ಮಾಡಿದ ಅಪರಾದಕ್ಕಾಗಿ ಕಾರಾಗೃಹ ಶಿಕ್ಷೆಯನ್ನು ಅನುಭವಿಸುತ್ತಿದ್ದ ಮುಸ್ಲಿಂ ಶಾಲಾ ಇನ್ಸ್‌ಪೆಕ್ಟರ್‌ರೊಬ್ಬನನ್ನು ಅವಧಿ ಮುಗಿಯುವ ಮೊದಲೆ ಜೈಲಿನಿಂದ ಬಿಡುಗಡೆ ಮಾಡಲು ಅವರು ಆದೇಶಿಸಿದರು. ಇದರಿಂದ ಅಸಮಾಧಾನವೂ ಮತೀಯ ಭಾವನೆಗಳೂ ಕೆರಳಿದವು. ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುವಂತೆ ಖರೆಯವರೂ ಸ್ಥಳೀಯ ಕಾಂಗ್ರೆಸ್ ಸಮಿತಿಯೂ ಈ ವಿಷಯವನ್ನು ಬಚ್ಚಿಡಲು ಪ್ರಯತ್ನಿಸಿದರೆಂಬ ನಂಬಿಕೆ ಬಲವಾಯಿತು. ಕಾರ್ಯಕಾರೀ ಸಮಿತಿಯು ಮಧ್ಯಪ್ರವೇಶ ಮಾಡಿ ಕಲ್ಕತ್ತಾ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರೊಬ್ಬರನ್ನು ಷರೀಫರ ವರ್ತನೆಯ ಔಚಿತ್ಯವನ್ನು ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಕೇಳಿತು. 1938 ರ ಮೇ ತಿಂಗಳಿನಲ್ಲಿ ಅವರು ರಾಜೀನಾಮೆ ಇತ್ತರು.

ತಮ್ಮ ಸಾಂದರ್ಭಿಕ ಕಥನದಲ್ಲಿ ಡಾ. ಪ್ರಸಾದ್ ಅವರು ಷರೀಫ್ ಅವರ ರಾಜೀನಾಮೆಗೆ ಕಾರಣವಾದ ಘಟನೆಯನ್ನು ಪ್ರಸ್ತಾಪಿಸುವುದೇ ಇಲ್ಲ. ಹಾಗೆಯೇ ರಾಜೀನಾಮೆ ಕೊಡಲು ನಿರಾಕರಿಸಿದ ಮೂವರು ಸಚಿವರನ್ನು ಗವರ್ನರ್ ವಜಾ ಮಾಡಿದುದನ್ನೂ ಅವರು ಹೇಳುವುದಿಲ್ಲ. ಪಾರ್ಲಿಮೆಂಟರಿ ಕಮಿಟಿ ಮತ್ತು ವರ್ಕಿಂಗ್ ಕಮಿಟಿಗಳ ಸಭೆ ನಡೆಯಿತೆಂದು ಅವರು ಕೊಡುವ ಕಾರಣಗಳು ಅಸ್ಪಷ್ಟವಾಗಿವೆ ಮತ್ತು ಒಪ್ಪಿಗೆಯಾಗುವಂತಿಲ್ಲ. ಇಡೀ ವ್ಯವಹಾರದಲ್ಲಿ ರಾಜೇಂದ್ರ ಪ್ರಸಾದರಿಗೆ ಗೊತ್ತಿರದ ಅಂಶಗಳಿದ್ದವು ಅಥವಾ ಗೊತ್ತಿದ್ದು ಅವುಗಳನ್ನು ಅವರು ಬಹಿರಂಗ ಪಡಿಸಲು ಬಯಸಲಿಲ್ಲ. ಈಗ ಲಭ್ಯವಿರುವ ಸಾಕ್ಷ್ಯಾಧಾರದ ಮೇಲೆ ಸತ್ಯವನ್ನು ಕಂಡು ಹಿಡಿಯುವುದು ಕಷ್ಟ.

## 93.4 ಉಪಸಂಹಾರ

ಇವರ ಪ್ರಾಂತಗಳಲ್ಲಿ ಪ್ರಗತಿಯ ವೇಗ ಮಂದವಾಗಿತ್ತು. ಅಬ್ಕಾರಿ ತೆರಿಗೆಯ ನಷ್ಟದ ಒಂದು ವರದಿಯಿಂದ ಪರಿಸ್ಥಿತಿಯು ವೇದ್ಯವಾಗುತ್ತದೆ. ಅದು ಮದರಾಸು,. ಯು.ಪಿ., ಬಿಹಾರ ಮತ್ತು ಒರಿಸ್ಸಾಗಳಲ್ಲಿ 1936-37 ರ ಆಯವ್ಯಯದ ವಾಸ್ತವತೆಗಳಿಗೆ ಹೋಲಿಸಿದರೆ ಕ್ರಮವಾಗಿ 41,37,13 ಮತ್ತು 10 ಲಕ್ಷ ಆಗಿದ್ದವು. ಅದೇ ಸಮಯದಲ್ಲಿ ಬಂಗಾಳ ಮತ್ತು ಪಂಜಾಬ್‌ಗಳಲ್ಲಿ ಕ್ರಮವಾಗಿ 21 ಮತ್ತು 7 ಲಕ್ಷಗಳಿಗೆ ಅಬ್ಕಾರಿ ವರಮಾನವು ಏರಿದುದು ಸ್ವಾರಸ್ಯವಾದ ಗಮನಿಸತಕ್ಕ ವಿಷಯವಾಗಿದೆ.

## 93.5 ಮಾದರಿಯ ಪ್ರಶ್ನೆಗಳು

1. ಭಾರತದ ಸಂವಿಧಾನ ರಚನೆಗೆ 1935 ರ ಭಾರತದ ಸರ್ಕಾರದ ಕಾಯಿದೆಯು ಅಸ್ತಿಭಾರ ಹೊರತು ಈ ಹೇಳಿಕೆಯನ್ನು ಸಮರ್ಥಿಸಿ?
2. ಒಕ್ಕೂಟ ಮತ್ತು ಪ್ರಾಂತೀಯ ಸರ್ಕಾರಗಳ ಮಟ್ಟದಲ್ಲಿ 1935 ರ ಕಾಯಿದೆಯ ಅನುಮೋದನೆಯು ಹೇಗೆ ಪ್ರಭಾವ ಬೀರಿತು? ಸಮರ್ಥಿಸಿ.

## 93.6 ಪರಾಮರ್ಶನ ಕೃತಿಗಳು

1. Sumith Sarkar : "Modern India"
2. R.C. Majumdar : "Advanced History of India".

## ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ✿ **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


Multimedia learning material
STUDENT
INSTRUCTIONAL SYSTEM